"JANAPADA" Monthly - December 2016
"ಜನಪದ" ಮಾಸಿಕ – ಡಿಸೆಂಬರ್ 2016

Page No. -52
RNI No. KAR/KAN/2010/20676

REGD NO. : KA/BG/GPO-2526/2015-17 License to post without prepayment WPP 34
Dt. 29th & 30th Posted at (Every month) Bangalore PSO, Mysore Road, Bangalore-26



ವಾರ್ಷಿಕ ಚಂದಾ ರೂ.25/-

# ಜನಪದ

ಡಿಸೆಂಬರ್ 2016





ರಾಜ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಂದ ಅಂತರ್ಜಾಲ ತಾಣ ಮತ್ತು ಕರ್ನಾಟಕ ವಾರ್ತೆ ಬ್ಲಾಗ್ ಚಾಲನೆ




ಡಿಸೆಂಬರ್ 1

## ವಿಶ್ವ ಏಡ್ಸ್ ದಿನ

# ಎಚ್‌ಐವಿ/ಏಡ್ಸ್

## ತಿಳುವಳಿಕೆ, ಎಚ್ಚರವಿರಲಿ...



# ಜನಪದ

ಸಂಪುಟ–59 • ಸಂಚಿಕೆ–9 • ಡಿಸೆಂಬರ್ 2016

05 ವಾರ್ತಾ ಇಲಾಖೆ ; ಸರ್ಕಾರ ಮತ್ತು ಜನತೆಯ ನಡುವಿನ ಸೇತುವೆ

09 ಬರದ ನಾಡಿಗೆ ನೀರಾವರಿ ಭಾಗ್ಯ
• ಪಿ. ಎಸ್. ಪರ್ವತಿ

13 ಪೊಲೀಸ್ ಇಲಾಖೆ ; ಸುಧಾರಣೆಯತ್ತ ದೃಢ ಹೆಜ್ಜೆ
• ಕಾರಂಜಿ

17 ಭರವಸೆಯ ದಾಪುಗಾಲು; ಮೌಲ್ಯಕ್ಕೆ ಸಂದ ಮನ್ನಣೆ
• ಗಂಗಾಧರ ಮೊದಲಿಯರ್

22 ಹಂಪಿ ಉತ್ಸವ
• ಬಸವರಾಜ ಕರುಗಲ್

26 ಮುಖ್ಯಮಂತ್ರಿಗಳಿಂದ ಬರ ಪರಿಶೀಲನೆ

28 ದುಬೈನಲ್ಲಿ ಗಾಂಧೀ ಪ್ರತಿಮೆ
• ವೇಮಗಲ್ ಸೋಮಶೇಖರ್

30 ಕಣ್ಮನ ಸೆಳೆಯುವ ಫಿಲೋಮಿನಾ ಚರ್ಚ್
• ಪೃಥ್ವಿ ಎ. ಜಿ.

32 ಬಲು ಅಪರೂಪ ಇಂಥ ಸರ್ಕಾರಿ ಶಾಲೆ
• ಬಿ. ರೇಣುಕೇಶ್

35 ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಯಶೋಗಾಥೆ
• ಬಲ್ಲೇನಹಳ್ಳಿ ಮಂಜುನಾಥ್

39 ಬಯಲು ಸೀಮೆಯಲ್ಲಿ ಮರಳುಗಾಡಿನ ಬೆಳೆ
• ಸಂತೋಷ್ ರಾವ್

41 ಬರ; ಭರವಸೆ ನೀಡಿದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ
• ಪಾರ್ವತಿ ಪಿಟಗಿ

44 ಭಾರತ ಸಂವಿಧಾನ ಮೂಲಭೂತ ಕರ್ತವ್ಯಗಳು

46 ಮಕ್ಕಳ ಕನಸುಗಳಿಗೆ ಬಣ್ಣ ಹಚ್ಚೋಣ
• ಪರಮೇಶ್ವರಯ್ಯ ಸೊಪ್ಪಿಮಠ

49 ತುಟ್ಟಿಯಾಗದ ಬುಟ್ಟಿಯ ಬದುಕು
• ಪ. ರಾಮಕೃಷ್ಣ ಶಾಸ್ತ್ರಿ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು

ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ಓದುಗರಿಂದ...

'ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ನವೆಂಬರ್ ಸಂಚಿಕೆಯ ಅಷ್ಟೂ ಕನ್ನಡಪರ ಲೇಖನಗಳು ಕನ್ನಡದ ಹಿರಿಮೆಯನ್ನು ಕರ್ನಾಟಕ ಏಕೀಕರಣ ಫಲಶೃತಿಯನ್ನು ಹಾಗೂ ಕನ್ನಡ ನಾಡಿನ ವಾಸ್ತುಶಿಲ್ಪ, ಕಲೆ, ಸಂಸ್ಕೃತಿಯ ಔನ್ನತ್ಯವನ್ನು ವಿವರಿಸುವಂತಿದ್ದವು. "ತ್ರಿಕರಣಗಳ ಕುಲುಮೆಯಲ್ಲಿ ಕನ್ನಡ" ಲೇಖನವು ಕನ್ನಡದ ಸ್ಥಿತಿಗೆ ಹಿಡಿದ ಕನ್ನಡಿಯಂತಿತ್ತು. 'ಏಕೀಕರಣವು ಕೈಗಾರಿಕೀಕರಣವನ್ನು ಹಾದು ಬಂದು ಜಾಗತೀಕರಣದಲ್ಲಿ ಜಾಗೃತವಾಗಬೇಕು' ಎಂಬ ವಿಚಾರಗಳು ಮನನೀಯವಾಗಿದ್ದವು. ಕನ್ನಡಾಭಿಮಾನವನ್ನು ಓದುಗರಲ್ಲಿ ಉದ್ದೀಪನಗೊಳಿಸಿದ ನಿಮಗೆ ನನ್ನ ವಂದನೆಗಳು.

**–ಬಸವರಾಜ ಹೂಗಾರ,**
ಹಿರೇಸಿಂಗನಗುತ್ತಿ

ಕರ್ನಾಟಕ ಏಕೀಕರಣ ವಜ್ರಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ನಮಗೆ ತುಂಬ ಹರ್ಷವೆನಿಸುತ್ತದೆ. 'ಜನಪದ'ದ ಮುಖಪುಟ ನಕ್ಷೆಯನ್ನು ನೋಡಿದರೆ ಆಯಾಯ ಜಿಲ್ಲೆಯ ಮುಕುಟಕ್ಕೆ ಇಟ್ಟ ವಜ್ರದ ಹರಳುಗಳಂತೆ ಗೋಚರಿಸುತ್ತದೆ. ಕನ್ನಡ ನೆಲದಲ್ಲಿ ಮುದ್ರಣಗೊಂಡ 'ಮಂಗಳೂರು ಸಮಾಚಾರ' ಕನ್ನಡಿಗರ ಒಂದಾಗುವಿಕೆಗೆ ಶ್ರಮಿಸಿದ ಪತ್ರಿಕೆ ಎಂದರೆ ತಪ್ಪಾಗಲಾರದು.

**–ನಾಗರಾಜ**
ಉಜ್ಜಿನಿ, ಹಳೇ ಓಬಳಾಪುರ

ದಶಕಗಳಿಂದ ನೆಚ್ಚಿನ 'ಜನಪದ' ಪತ್ರಿಕೆಯನ್ನು ಓದುತ್ತಿದ್ದೇನೆ. ಇಂದಿಗೂ ತನ್ನ ಮೂಲ ಸ್ವರೂಪ ಬಿಟ್ಟು ಕೊಡದೆ ಸರ್ಕಾರಿ ಯೋಜನೆಗಳ ಮಾಹಿತಿ, ಆರೋಗ್ಯ, ಸಾಮಾಜಿಕ, ಧಾರ್ಮಿಕ, ಶಿಕ್ಷಣ, ಕ್ರೀಡೆ ಇನ್ನು ಮುಂತಾದ ಲೇಖನಗಳು ಪ್ರಕಟವಾಗುತ್ತಿವೆ. ಪ್ರತಿ ಪುಟವೂ ಮಾಹಿತಿಯುಕ್ತವಾಗಿದ್ದು, ಮಾರ್ಗದರ್ಶಿಯಾಗಿದೆ.

**– ಗಡ್ಡಂಬಚ್ಚಹಳ್ಳಿ ಲಕ್ಷ್ಮೀನಾರಾಯಣ,**
ದೊಡ್ಡಬಳ್ಳಾಪುರ




**'ಏಕೀಕರಣ ಚಳವಳಿಯ ಕೈಗನ್ನಡಿಯಂತಿದೆ'**

ನವೆಂಬರ್ ಸಂಚಿಕೆ ಸುಂದರವಾಗಿ ಮೂಡಿಬಂದಿದೆ. ಕರ್ನಾಟಕ ಏಕೀಕರಣ –60 ರ ಸುಸಂದರ್ಭದಲ್ಲಿ ಕನ್ನಡಾಂಬೆಯ ಸುಂದರ ಚಿತ್ರ ಗಮನ ಸೆಳೆಯಿತು. ಕನ್ನಡ, ಕನ್ನಡಿಗರು, ಕನ್ನಡ ಏಕೀಕರಣಕ್ಕೆ ದುಡಿದ ಮಹನೀಯರ ಕುರಿತಾದ ಲೇಖನಗಳು ಬಹಳಷ್ಟು ಇಷ್ಟವಾದವು. ತ್ರಿಕರಣಗಳ ಕುಲುಮೆಯಲ್ಲಿ ನಮ್ಮ ಕನ್ನಡ ನಾಡು ಲೇಖನ ಕರ್ನಾಟಕದ ಸ್ಥಿತಿ–ಗತಿಯನ್ನು ನಿಖರವಾಗಿ ಬಿಂಬಿಸಿದೆ. ಧನ್ಯವಾದಗಳು.

**–ಎಮ್ ಎಫ್.ದಖನಿ,**
ವಿಜಾಪೂರ

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

ಕನ್ನಡದ ಕಂಪನ್ನು ಹೊತ್ತು ತಂದ ನೆಚ್ಚಿನ ಮಾಸಿಕ 'ಜನಪದ' ನಾಡಿನ ಕಲೆ–ಸಂಸ್ಕೃತಿಗಳ ರಸದೌತಣ ಬಡಿಸಿತು. ಏಕೀಕರಣವಾಗಿ 'ಕರ್ನಾಟಕ'ವಾದ ಹಿಂದಿನ ಹೋರಾಟ, ಚಳವಳಿಗಳ ಸವಿವರವಾದ ಮಾಹಿತಿ 'ಕರ್ನಾಟಕ ಕತೆ'ಯನ್ನು ರೋಚಕವಾಗಿ ಕಟ್ಟಿಕೊಟ್ಟಿದೆ. 'ಜನಪದ ಬಳಗ'ಕ್ಕೆ ಧನ್ಯವಾದಗಳು.

**–ಕೆ. ಶ್ರೀನಿವಾಸ,** ರಾಮನಗರ

**ಕನ್ನಡ ಗತವೈಭವ ಪತ್ರಿಕೆ**

ನವೆಂಬರ್ ತಿಂಗಳ ಸಂಚಿಕೆ ಕರ್ನಾಟಕ ಏಕೀಕರಣ ಚಳುವಳಿ' ಅಭಿವೃದ್ಧಿಯ ಹಾದಿ, ಆಲೂರು ವೆಂಕಟರಾಯರ 'ಕನ್ನಡಪ್ರೇಮ' ಆರು ಕೋಟಿ ಕನ್ನಡ ಜನತೆಗೆ ಮನ ಮುಟ್ಟುವಂತಿದೆ. ಪತ್ರಿಯೊಬ್ಬರೂ ಕನ್ನಡಕ್ಕಾಗಿ ಕೈ ಎತ್ತುವಂತಿದೆ. ಏಕೀಕರಣ ಚಳುವಳಿಗಾಗಿ ಮಡಿದ ಮಹನೀಯರ ಲೇಖನ ಇಂದಿನ ಯುವ ಕನ್ನಡ ಕಣ್ಮಣಿಗಳಿಗೆ ದಾರಿದೀಪದಂತಿದೆ.

**–ಬಿ ಎ ರಾಜಪ್ಪ ನಿಬಗೂರು,**
ಬಿದರಕೆರೆ, ಜಗಳೂರು

ಸಂಚಿಕೆಯಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರ ಬಗ್ಗೆ ಓದಿ ಬಹಳ ಗೌರವ ಮೂಡಿತು. ಅವರ ಬಗೆಗಿನ ವಿವರಣೆ ಶ್ಲಾಘನೀಯ. ಅವರೆಂಥಹ ಮಹಾನ್ ವ್ಯಕ್ತಿಯೆಂದು ಮನದಟ್ಟಾಯಿತು. ಅವರು ಶಿಕ್ಷಣಾಧಿಕಾರಿಯಾಗಿದ್ದಾಗ ಹೊರಡಿಸಿದ ಸುತ್ತೋಲೆಗಳು ಅವರಿಗೆ ಕನ್ನಡದ ಬಗೆಗಿರುವ ಅಪಾರ ಕಾಳಜಿ ಹಾಗೂ ಆಸಕ್ತಿಯನ್ನು ತೋರಿಸುತ್ತದೆ.

**–ವಿಲ್ಸನ್ ಅಲೆಕ್ಸಾಂಡರ್,**
ಮುಂಡಗೋಡ





# ವಾರ್ತಾ ಇಲಾಖೆ
## ಸರ್ಕಾರ ಮತ್ತು ಜನತೆಯ ನಡುವಿನ ಸೇತುವೆ



'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ ಮತ್ತು ಜನತೆಯ ನಡುವೆ ಸೇತುವೆಯಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು' ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಬೆಂಗಳೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಅಂತರ್ಜಾಲ ತಾಣ ಮತ್ತು ಕರ್ನಾಟಕ ವಾರ್ತೆ ಬ್ಲಾಗ್ ಅನ್ನು ಉದ್ಘಾಟಿಸಿ ಮುಖ್ಯಮಂತ್ರಿಯವರು ಮಾತನಾಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಮಾಲೀಕರಾಗಿರುತ್ತಾರೆ. ಅವರು ತಮಗಿರುವ ಅಧಿಕಾರವನ್ನು ಮತದಾನದ ಮೂಲಕ







ಮಾನ್ಯ ಮುಖ್ಯಮಂತ್ರಿಗಳಿಂದ ಇ-ಕಚೇರಿ ಫಲಕ ಅನಾವರಣ

ಜನಪ್ರತಿನಿಧಿಗಳಿಗೆ ವರ್ಗಾವಣೆ ಮಾಡುತ್ತಾರೆ. ಆದ ಕಾರಣ ಜನತೆಗೆ ಜವಾಬ್ದಾರಿಯುತವಾಗಿ ಅಧಿಕಾರಕ್ಕೆ ಬಂದ ಸರ್ಕಾರ ನಡೆದುಕೊಳ್ಳಬೇಕಾಗುತ್ತದೆ ಎಂದರು.

ಚುನಾವಣಾ ಪೂರ್ವದಲ್ಲಿ ಪಕ್ಷದ ಸಿದ್ಧಾಂತಗಳಿಗೆ ಅನುಗುಣವಾಗಿ ಆಯಾ ಪಕ್ಷಗಳು ಭರವಸೆಗಳನ್ನು ಪ್ರಣಾಳಿಕೆಗಳ ಮೂಲಕ ಜನತೆಗೆ ನೀಡುತ್ತವೆ. ಜನತೆಗೆ ನೀಡಿದ ಭರವಸೆಗಳನ್ನು ಜನಪ್ರತಿನಿಧಿಗಳಿಂದ ಈಡೇರಿಸಲು ಸಾಧ್ಯವಾಗದಿದ್ದಲ್ಲಿ ಮತ್ತೆ ಐದು ವರ್ಷದ ನಂತರ ಜನತೆಯ ಮುಂದೆ ಹೋಗುವುದು ಸಾಧ್ಯವಾಗುವುದಿಲ್ಲ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಸರ್ಕಾರ ಜಾರಿಗೊಳಿಸುವ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮಾಹಿತಿ ಇರಬೇಕು. ಮಾಹಿತಿ ಇದ್ದಾಗ ಮಾತ್ರ ಯೋಜನೆಗಳ ಬಗ್ಗೆ ಜನರಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸಬಹುದು. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿಯೇ ಇಲ್ಲದಿದ್ದಲ್ಲಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯವಿಲ್ಲ ಎಂದರು.

ಅತಿ ಹೆಚ್ಚು ಒಣಭೂಮಿ ಹೊಂದಿರುವ ಕರ್ನಾಟಕ ರಾಜ್ಯದಲ್ಲಿ "ಕೃಷಿಭಾಗ್ಯ ಯೋಜನೆ ಒಂದು ವರದಾನ. ಒಂದು ಲಕ್ಷ ರೈತ ಕುಟುಂಬಗಳಿಗೆ ಕೃಷಿ ಹೊಂಡದ ವ್ಯವಸ್ಥೆ ಮಾಡುವ ಮೂಲಕ ರೈತರು ಬೆಳೆದ ಬೆಳೆಗೆ ರಕ್ಷಣೆ ಒದಗಿಸಲಾಗುತ್ತಿದೆ ಎಂದರು. ಇದೇ ರೀತಿ ಒಂದು ಕೋಟಿ ಎಂಟು ಲಕ್ಷ ಕುಟುಂಬಗಳಿಗೆ ಅನ್ನಭಾಗ್ಯ, ಒಂದು ಲಕ್ಷ ವಿದ್ಯಾರ್ಥಿಗಳಿಗೆ ವಿಧ್ಯಾಸಿರಿ ಯೋಜನೆಯ ಲಾಭ ದೊರಕುತ್ತಿದೆ. ಮನಸ್ವಿನಿ, ಮೈತ್ರಿ, ಕ್ಷೀರಭಾಗ್ಯ ಮುಂತಾದ ಯೋಜನೆಗಳ ಕುರಿತು ವಾರ್ತಾ ಇಲಾಖೆ ಸಾಕಷ್ಟು ಪ್ರಚಾರ ಮಾಡಿದಲ್ಲಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯ ಎಂದರು.

**"ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಮಾಲೀಕರಾಗಿರುತ್ತಾರೆ. ಅವರು ತಮಗಿರುವ ಅಧಿಕಾರವನ್ನು ಮತದಾನದ ಮೂಲಕ ಜನಪ್ರತಿನಿಧಿಗಳಿಗೆ ವರ್ಗಾವಣೆ ಮಾಡುತ್ತಾರೆ. ಆದ ಕಾರಣ ಜನತೆಗೆ ಜವಾಬ್ದಾರಿಯುತವಾಗಿ ಅಧಿಕಾರಕ್ಕೆ ಬಂದ ಸರ್ಕಾರ ನಡೆದುಕೊಳ್ಳಬೇಕಾಗುತ್ತದೆ"**

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು





**ಸರ್ಕಾರ ಜಾರಿಗೊಳಿಸುವ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮಾಹಿತಿ ಇರಬೇಕು. ಮಾಹಿತಿ ಇದ್ದಾಗ ಮಾತ್ರ ಯೋಜನೆಗಳ ಬಗ್ಗೆ ಜನರಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸಬಹುದು. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿಯೇ ಇಲ್ಲದಿದ್ದಲ್ಲಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ಸಾಧ್ಯವಿಲ್ಲ**

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು



ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಿಂದಲೂ ಆಗಮಿಸಿದ್ದ ಜಿಲ್ಲಾ ವಾರ್ತಾಧಿಕಾರಿಗಳನ್ನು ಉದ್ದೇಶಿಸಿ 'ಜಿಲ್ಲಾ ವಾರ್ತಾಧಿಕಾರಿಗಳು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮಾಧ್ಯಮಗಳ ಮೂಲಕ ಜನರಿಗೆ ಮಾಹಿತಿ ಒದಗಿಸಬೇಕು. ವಾರ್ತಾ ಇಲಾಖೆ ನೈಜ ಸುದ್ದಿಗಳ ಬಗ್ಗೆ ಜನತೆಗೆ ನೈಜ ಚಿತ್ರಣವನ್ನು ಕಟ್ಟಿಕೊಡಬೇಕು' ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀ ಎಂ. ಲಕ್ಷ್ಮೀನಾರಾಯಣ ಅವರು ಮಾತನಾಡಿ ಸರ್ಕಾರದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜನತೆಗೆ ಮುಟ್ಟಿಸುವ ಕೆಲಸ ವಾರ್ತಾಧಿಕಾರಿಗಳದ್ದು, ಅದರಲ್ಲೂ ಜಿಲ್ಲಾಮಟ್ಟದ ವಾರ್ತಾಧಿಕಾರಿಗಳ ಪಾತ್ರ ಮಹತ್ವದ್ದಾಗಿರುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕರಾದ ಶ್ರೀ ಎನ್.ಆರ್. ವಿಶುಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸನ್ಮಾನ್ಯ ಮುಖ್ಯಮಂತ್ರಿಗಳ ಆಶಯದಂತೆ ಸರ್ಕಾರದ ಎಲ್ಲ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ವಾರ್ತಾ ಇಲಾಖೆ ಶ್ರಮಿಸುತ್ತಿದೆ. ಈ ಕಾರಣ ಸರ್ಕಾರದ ಬಹುತೇಕ ಯೋಜನೆಗಳ ಮಾಹಿತಿ ಇಂದು ಜನಸಾಮಾನ್ಯರ ನಾಲಿಗೆಯ ಮೇಲಿದೆ ಎಂದ ಅವರು, ಜನತೆಯ ತುಡಿತವನ್ನು ಸರ್ಕಾರದ ಗಮನಕ್ಕೆ ತರುವಂತಹ 'ಜನಮನ' ಕಾರ್ಯಕ್ರಮದ ಅನುಷ್ಠಾನದ ಹೊಣೆಯನ್ನು ವಾರ್ತಾ ಇಲಾಖೆಗೆ ಒದಗಿಸಿಕೊಟ್ಟಂತಹ ಮುಖ್ಯಮಂತ್ರಿಗಳಿಗೆ ತಾವು ಧನ್ಯವಾದ ಅರ್ಪಿಸುವುದಾಗಿ ಈ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯಮಂತ್ರಿ ಅವರು ಇಲಾಖೆಯ ಕೇಂದ್ರ ಕಚೇರಿಯಲ್ಲಿ ಗಾಂಧೀ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ "ವಾರ್ತಾವಲೋಕನ" ವೀಕ್ಷಿಸಿ, ಇ– ಕಛೇರಿ ಫಲಕ ಅನಾವರಣ ಮಾಡಿದರು. ಇಲಾಖೆಯಲ್ಲಿ ನೂತನವಾಗಿ ಸ್ಥಾಪಿಸಿರುವ ಸಾಮಾಜಿಕ ಜಾಲತಾಣ ಮಾಧ್ಯಮ ಘಟಕಕ್ಕೆ ಚಾಲನೆ ನೀಡಿ, "ಸಾಮಾಜಿಕ ಮಾಧ್ಯಮ ನಿರ್ವಹಣೆ" ಕುರಿತ ಕಿರು ಹೊತ್ತಿಗೆ ಬಿಡುಗಡೆ ಮಾಡಿದರು. ನಂತರ ಅವರು ಎಲ್.ಇ.ಡಿ. ಪರದೆಯ ಮೇಲೆ ಹೆದ್ದಾರಿ ಫಲಕಗಳ ವೀಕ್ಷಣೆ ಮಾಡಿದರು.



**ಸಾಮಾಜಿಕ ಜಾಲತಾಣ ಮಾಹಿತಿ ಪುಸ್ತಕ ಬಿಡುಗಡೆ. ಮಾನ್ಯ ಮುಖ್ಯಮಂತ್ರಿಗಳೊಂದಿಗೆ ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಂ ಲಕ್ಷ್ಮೀನಾರಾಯಣ್ ಹಾಗೂ ನಿರ್ದೇಶಕರಾದ ಶ್ರೀ ಎನ್ ಆರ್ ವಿಶುಕುಮಾರ್**

ವಾರ್ತಾ ಇಲಾಖೆಯ ನಿರ್ದೇಶಕರಾದ ಶ್ರೀ ಎನ್. ಆರ್. ವಿಶುಕುಮಾರ್ ಅವರು ಮುಖ್ಯಮಂತ್ರಿಗಳನ್ನು ಸ್ವಾಗತಿಸಿದರು. ವಾರ್ತಾವಲೋಕನ ಪ್ರಾತ್ಯಕ್ಷಿಕೆ ಬಗ್ಗೆ ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡಿದರು. ಜೀವಸ್ವರ ಮತ್ತು ಅಭಿವೃದ್ಧಿ ಕುರಿತ ಸಾಕ್ಷ್ಯಚಿತ್ರ ಪ್ರಾತ್ಯಕ್ಷಿಕೆ ಪ್ರಸ್ತುತಪಡಿಸಲಾಯಿತು.

ಇದೇ ಸಂದರ್ಭದಲ್ಲಿ ಅಭಿವೃದ್ಧಿ ಆಧಾರಿತ ಬೀದಿ ನಾಟಕ, ಕಲಾ ಜಾಥಾ ಮತ್ತು ಎಲ್.ಇ.ಡಿ. ವಾಹನಗಳ ವೀಕ್ಷಣೆಗೆ ಏರ್ಪಾಡು ಮಾಡಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ದಿನೇಶ್ ಅಮೀನ್ ಮಟ್ಟು, ಮಾಧ್ಯಮ ಅಕಾಡೆಮಿ ಅಧ್ಯಕ್ಷ ಶ್ರೀ ಸಿದ್ದರಾಜು, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಶ್ರೀ ಅತೀಖ್, ಇಲಾಖೆಯ ಹಿರಿಯ–ಕಿರಿಯ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.





# ಬರದ ನಾಡಿಗೆ ನೀರಾವರಿ ಭಾಗ್ಯ

ಪಿ.ಎಸ್. ಪರ್ವತಿ



ಬರದ ಕೆನ್ನಾಲಿಗೆಗೆ ತುತ್ತಾಗುತ್ತಿದ್ದ ಬಯಲು ಸೀಮೆಯ ಗದಗ , ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಕ್ಕೆ ಈಗ ನೀರಾವರಿ ಭಾಗ್ಯ ದೊರೆತಿದೆ. ಕಳೆದ ಇಪ್ಪತ್ತೈದು ವರ್ಷಗಳಿಂದ ಕಾರ್ಯಾನುಷ್ಠಾನಗೊಂಡಿದ್ದ ಸಿಂಗಟಾಲೂರ (ಹುಲಿಗುಡ್ಡ) ಏತ ನೀರಾವರಿ ಯೋಜನೆಯ ಎಡಭಾಗದ ಮುಖ್ಯ ಕಾಲುವೆ ಹಾಗೂ ಏತ ನೀರಾವರಿ ಘಟಕಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 12 ರಂದು ಲೋಕಾರ್ಪಣೆಗೊಳಿಸುವ ಮೂಲಕ ಈ ಭಾಗದ ಜನರ ಬಹುದಿನದ ಬೇಡಿಕೆ ಕೈಗೂಡಿದೆ. ಇದಲ್ಲದೇ 94,993 ಎಕರೆ ಪ್ರದೇಶಕ್ಕೆ ಹನಿ ನೀರಾವರಿ ಒದಗಿಸುವ ಯೋಜನೆಗೂ ಮುಖ್ಯಮಂತ್ರಿಗಳು ಚಾಲನೆ ನೀಡಿದರು.

ಸಿಂಗಟಾಲೂರ ಏತ ನೀರಾವರಿ: ಬಳ್ಳಾರಿಜಿಲ್ಲೆ ಹೂವಿನ ಹಡಗಲಿ ರಾಜನಾಳ ಮತ್ತು ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಮ್ಮಿಗಿ ಗ್ರಾಮದ ಮಧ್ಯ ಹರಿದ ತುಂಗಭದ್ರಾ ನದಿಗೆ

ಅಡ್ಡಲಾಗಿ ಬ್ಯಾರೇಜ್ ನಿರ್ಮಿಸಿ ಜಾಕ್‌ವೆಲ್‌ಗಳ ಮೂಲಕ ಎಡ ಮತ್ತು ಬಲ ಕಾಲುವೆಗಳಿಂದ ರೈತರ ಭೂಮಿಗೆ ನೀರು ಹರಿಸುವದು. ಈ ಯೋಜನೆಯ ಉದ್ದೇಶವಾಗಿದೆ. ಈಗಾಗಲೇ 3.12 ಟಿಎಂಸಿ ಸಾಮರ್ಥ್ಯದ ಬ್ಯಾರೇಜನ್ನೂ ನಿರ್ಮಿಸಲಾಗಿದ್ದು ಅದು 2012ರಲ್ಲಿಯೇ ಲೋಕಾರ್ಪಣೆಗೊಂಡಿದೆ. ಯೋಜನೆಯ ಬಲಭಾಗವು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕ ವ್ಯಾಪ್ತಿಯಲ್ಲಿದ್ದು, ಇಲ್ಲಿ ಎರಡನೇ ನೀರೆತ್ತುವ ಘಟಕ ಹಾಗೂ ಎಲ್ಲ ಕಾಲುವೆ ಕಾಮಗಾರಿಗಳು ಪೂರ್ಣಗೊಂಡು 35791 ( 14490 ಹೆಕ್ಟೇರ್) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.

ಎಡಭಾಗದಲ್ಲಿ ಗದಗ, ಕೊಪ್ಪಳ ಜಿಲ್ಲೆಗಳಿಗೆ ನೀರು ಒದಗಿಸಲಾಗುವುದು. ಈಗಾಗಲೇ ಗದಗ ಜಿಲ್ಲೆಯ 6698 ಎಕರೆ ಪ್ರದೇಶಕ್ಕೆ ಹಾಗೂ ಹಮ್ಮಿಗಿ ಮುಂಡವಾಡ ಘಟಕದ ಕಾಲುವೆಗಳನ್ನು ಪೂರ್ಣಗೊಳಿಸಿ 4951 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸಲಾಗಿದೆ. ಈ ಮೂರು ಏತ ಘಟಕಗಳನ್ನು ಮುಖ್ಯಕಾಲುವೆಗಳನ್ನು ಮುಖ್ಯಮಂತ್ರಿಗಳು ಲೋಕಾರ್ಪಣೆಗೊಳಿಸಿದರು. ಯೋಜನೆಯ ಎಡಭಾಗದ 2 ನೇ ರೀಚ್ ಮುಖ್ಯಕಾಲುವೆಯ 28.94 ಕಿ.ಮೀ ಉದ್ದದ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಈ ಕಾಲುವೆಯಡಿ 24908 ಎಕರೆ ಪ್ರದೇಶಕ್ಕೆ ಹನಿ ನೀರಾವರಿ ಸೌಲಭ್ಯ ಒದಗಿಸಲು 228.92 ಕೋಟಿ ರೂ.ಮೊತ್ತದ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಎಡಭಾಗದ ಮುಖ್ಯಕಾಲುವೆಯ 3 ನೇ ರೀಚ್‌ನ್ 26 ಕಿಮೀ ಉದ್ದದ ಕಾಲುವೆಯ ಕಾಮಗಾರಿಯಲ್ಲಿ ಈ ಒಳಗೆ 14.50 ಕಿಮೀವರೆಗಿನ ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನುಳಿದವು ಪ್ರಗತಿಯಲ್ಲಿವೆ. ಮುಂಡರಗಿ–ಕೊಪ್ಪಳ ಮುಖ್ಯಕಾಲುವೆಯ ಒಟ್ಟು 72.16 ಕಿಮೀಗಳಾಗಿದ್ದು, ಆ ಪೈಕಿ 33 ಕಿ.ಮಿವರೆಗೆ ಪೂರ್ಣಗೊಂಡಿದ್ದು ಇನ್ನುಳಿದ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳ ಪ್ರದೇಶಕ್ಕೂ ಹನಿ ನೀರಾವರಿ ಒದಗಿಸಲಾಗುವದು.

**ಸಾಧನೆಯ ಮೈಲಿಗಲ್ಲು:**

**ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ (1992 ರಿಂದ 2016 ಅಕ್ಟೋಬರ್) ಸಿಂಗಟಾಲೂರ ಏತ ನೀರಾವರಿ ಯೋಜನೆಯಡಿ ಒಟ್ಟಾರೆ 48,381 ಎಕರೆಗೆ (ಬಲಭಾಗದಲ್ಲಿ 35,791 ಎಕರೆ ಮತ್ತು ಎಡಭಾಗದಲ್ಲಿ 12590 ಎಕರೆ ಪ್ರದೇಶ) ನೀರಾವರಿ ಕಲ್ಪಿಸಿದ್ದು , ಅದಕ್ಕಾಗಿ 1763.43 ಕೋಟಿರೂ. ವೆಚ್ಚ ಮಾಡಲಾಗಿದೆ. ಈ ಪೈಕಿ ಪ್ರಸ್ತುತ ಸರ್ಕಾರ ಕಳೆದ ಮೂರುವರೆ ವರ್ಷದಲ್ಲಿ 813.68 ಕೋಟಿರೂ. ವಿನಿಯೋಗಿಸಿ 35,440 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿದ್ದು ಯೋಜನೆ ಪ್ರಗತಿಯಲ್ಲೊಂದು ಸಾಧನೆಯ ಮೈಲುಗಲ್ಲಾಗಿದೆ.**





## ಭೀಷ್ಮ ಕೆರೆಯಲ್ಲಿ ಗಂಗಾವತರಣ

ಮಹಾಭಾರತದಲ್ಲಿ ಶರಶಯ್ಯೆ ಮೇಲೆ ಮಲಗಿದ್ದ ಭೀಷ್ಮ ಪಿತಾಮಹನ ಬಾಯಾರಿಕೆ ನೀಗಲು ಅರ್ಜುನ ತನ್ನ ಬಾಣದಿಂದ ಗಂಗೋದ್ಭವ ಮಾಡಿದ್ದು , ಪುರಾಣದಲ್ಲಿ ಭಗೀರಥ ಶಿವನ ಜಡೆಯಲ್ಲಿದ್ದ ಗಂಗೆಯನ್ನು ಭೂಮಿಗೆ ತರಿಸಿದ್ದು, ಒಂದೆಡೆಯಾದರೆ ನದಿಗಳೇ ಇಲ್ಲದ ಗದಗ ಜಿಲ್ಲೆಯಲ್ಲಿ ನೀರಿಲ್ಲದೇ ದಶಕಗಳಿಂದ ಒಣಗಿಹೋಗಿದ್ದ ಭೀಷ್ಮ ಕೆರೆಯಲ್ಲಿ ಗಂಗಾವತರಣವಾಗಿರುವುದು ಒಂದು ಸಾಹಸಗಾಥೆ ಆಗಿದೆ.

ನೀರಿಲ್ಲದ ಜಿಲ್ಲೆ ಎನ್ನುವ ಖ್ಯಾತಿ ಪಡೆದ ಗದಗಿನ ಭೀಷ್ಮಕೆರೆಗೆ ಹಮ್ಮಿಗಿ ಬ್ಯಾರೇಜಿನಿಂದ 214 ಮೀಟರ್ ಎತ್ತರಕ್ಕೆ ಮೂರು ಎತ್ತುವಳಿ ಮೂಲಕ ನೀರೆತ್ತಿ 84 ಕಿ.ಮೀ ಪ್ರವಹಿಸಿ ತುಂಗಭದ್ರಾ ನದಿ ನೀರು ಬಂದು ಗದಗ ಜಿಲ್ಲೆಯ ಕೆರೆಗಳಿಗೆ ಜೀವಸೆಲೆ ಆಗಿರುವುದು ಅಭಿನವ ಭಗೀರಥ ಯತ್ನವೇ ಸರಿ ಎಂದು ತೋಂಟದ ಶ್ರೀಗಳು ನುಡಿದದ್ದು ಇಡೀ ಪ್ರಯತ್ನದ ಹಿಂದಿರುವ ಶ್ರಮ ಸಾಹಸ ಹಾಗೂ ಪ್ರಯತ್ನಗಳ ಪ್ರತೀಕವಾಗಿದೆ. ಜಿಲ್ಲೆಯ ಉಸ್ತುವಾರಿ ಸಚಿವ ರಾಜ್ಯದ ಗ್ರಾಮೀಣಾಭಿವೃದ್ಧಿ ಹೊಣೆಯೂ ಹೊತ್ತಿರುವ ಸಚಿವ ಎಚ್.ಕೆ.ಪಾಟೀಲ್‌ರು ಹಾಗೂ ಗದಗ ಜಿಲ್ಲಾಡಳಿತ ಕಳೆದ ಮೂರು ವರ್ಷಗಳಿಂದ ಪಟ್ಟ ಅವಿರತ ಶ್ರಮ ಇದರ ಹಿಂದೆ ಇದೆ.

1992–93 ರಲ್ಲಿ ಸೀಮಿತ ಪ್ರದೇಶ ಹಾಗೂ ಬಜೆಟ್ಟಿನ ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ಇದ್ದ ನೀರಿನ ಹಂಚಿಕೆಯನ್ನು 7.2 ರಿಂದ 18.5 ಟಿ.ಎಂ.ಸಿ. ಗೆ 2000ರಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಎಚ್.ಕೆ.ಪಾಟೀಲ ಹೆಚ್ಚಿಸಿದರು. ಕಲಬುರ್ಗಿಗಳ ಕ್ಯಾಬಿನೆಟ್ ಸಭೆಯಲ್ಲಿ ಈ ಒಟ್ಟಾರೆ ಯೋಜನೆ 5768 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಮಂಜೂರಾತಿ ನೀಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯನವರೇ ಯೋಜನೆಯ ಎಡಭಾಗದ ಮುಖ್ಯ ಕಾಲುವೆ ಮೂಲಕ ಗದಗ ಜಿಲ್ಲೆಯ ಹೃದಯಭಾಗದಲ್ಲಿ ತುಂಗಭದ್ರಾ ಮೂರ್ತಿಗಳ ಮೂಲಕ ಗಂಗಾವತರಣಗೊಳ್ಳುವುದಕ್ಕೆ ಸಾಕ್ಷಿಯಾಗಿರುವದು ಯೋಗಾಯೋಗವಾಗಿದ್ದು ರಾಜ್ಯ ಸರ್ಕಾರ ಗದಗ ಜಿಲ್ಲಾಡಳಿತ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರ ಎಚ್.ಕೆ.ಪಾಟೀಲ ಅವರುಗಳ ಕಳಕಳಿ ಹಾಗೂ ಬದ್ಧತೆಯ ಪ್ರತೀಕವಾಗಿದೆ.

ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಜಲಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ ಗದಗ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರೊಂದಿಗೆ ಹಮ್ಮಿಗಿಯಲ್ಲಿ ಪ್ರಥಮ ಎತ್ತುವಳಿ ಕೇಂದ್ರವನ್ನು ಲೋಕಾರ್ಪಣೆ ಮಾಡಿ ತುಂಗಭದ್ರಾ ನೀರು ಪ್ರವಹಿಸಲಿಕ್ಕೆ ಅಧಿಕೃತ ಮುದ್ರೆ ಒತ್ತಿದರು. ತದನಂತರ ಈ ನೀರಿನ ಮೂಲಕ ಮೈದುಂಬಿಕೊಂಡ 48 ಎಕರೆ ವಿಸ್ತಾರದ ಹಿರೇವಡ್ಡಟ್ಟಿ ಕೆರೆ ಗ್ರಾಮಸ್ಥರ ಸಂಭ್ರಮದ ನಡುವೆ ಹಾಗೂ ಐತಿಹಾಸಿಕ ಡಂಬಳದ ವಿಕ್ಟೋರಿಯಾ ಕೆರೆ ಹಾಗೂ ನಂತರ ಭೀಷ್ಮ ಕೆರೆಯಲ್ಲಿ ಗಂಗಾಪೂಜೆ ಹಾಗೂ ಬಾಗೀನ ಅರ್ಪಿಸಿ ಗದಗ ಜೀವ ಸೆಲೆಯಾಗಿ ನೆಲೆಗೊಳ್ಳುವ ತುಂಗಭದ್ರೆಯನ್ನು ಜನರ ಹರ್ಷೋಲ್ಲಾಸ ನಡುವೆ ಬರಮಾಡಿಕೊಂಡಿದ್ದು ಈ ಕ್ಷಣ ಗದಗ ಜಿಲ್ಲೆಯ ಐತಿಹಾಸಿಕ ಕ್ಷಣವಾಗಿ ಉಳಿಯಲಿದೆ.

–ವೆಂಕಟೇಶ ನವಲೆ
ಸಹಾಯಕ ನಿರ್ದೇಶಕರು, ಗದಗ



**ಕೆರೆಗಳಿಗೆ ನೀರು:**

**ಎಡಭಾಗದ ಮುಖ್ಯಕಾಲುವೆಯಿಂದ ಮುಂಡವಾಡ, ಬಸಾಪುರ, ಹಿರೇವಡ್ಡರಟ್ಟಿ, ತಾಮ್ರಗುಂಡಿ, ,ಡಂಬಳ ಜಂತ್ಲಿ ಶಿರೂರು, ಹಾಲುಂಡಿ ಬಸವೇಶ್ವರಕೆರೆ ಲಕ್ಕುಂಡಿ, ಸಂಭಾಪುರ ಮತ್ತು ಗದಗ ಭೀಷ್ಮಕೆರೆಗೆ ನೀರನ್ನು ಹರಿಸಲಾಗಿದೆ. ಇದರಿಂದ ರೈತರ ಹೊಲಗಳಿಗೆ ನೀರು ಪಡೆಯಲು ಅನುಕೂಲವಾಗಿದೆ. ಮುಂಡರಗಿ – ಕೊಪ್ಪಳ ಮುಖ್ಯಕಾಲುವೆಯಿಂದ ಕೊಪ್ಪಳ ತಾಲೂಕು ಕವಲೂರಕೆರೆಗೆ ನೀರು ಹರಿಸಲಾಗಿದೆ. ಇದರಿಂದ ಕೊಳವೆ ಬಾವಿಗಳ ಜಲಪೂರಣಕ್ಕೆ ಸಹಾಯವಾಗಲಿದೆ.**

**ನಡೆದು ಬಂದದಾರಿ:** ಸಿಂಗಟಾಲೂರ (ಹುಲಿಗುಡ್ಡ) ಏತ ನೀರಾವರಿ ಯೋಜನೆಗೆ ತುಂಗಭದ್ರಾ ನದಿಯಿಂದ 7.64 ಟಿಎಂಸಿ ನೀರನ್ನೆತ್ತಿ ಬಳ್ಳಾರಿ ,ಗದಗ , ಕೊಪ್ಪಳ ಜಿಲ್ಲೆಗಳ 40 ಸಾವಿರ ಎಕರೆಗೆ ನೀರಾವರಿ ಕಲ್ಪಿಸುವ 63.62 ಕೋಟಿರೂ. ವೆಚ್ಚದ ಯೋಜನೆಗೆ 1992 ಸೆಪ್ಟೆಂಬರ್‌ದಲ್ಲಿ ರಾಜ್ಯ ಸರ್ಕಾರ ಅನುಮೋದನೆ ನೀಡಿತ್ತು. ಈ ಯೋಜನೆಯ ಕಳೆದ 24 ವರ್ಷಗಳಲ್ಲಿ ಕಾಲಕಾಲಕ್ಕೆ ಹಲವು ಪರಿಷ್ಕರಣೆಗಳನ್ನು ಕಂಡಿದೆ. ಯೋಜನೆಯಂತರ್ಗತ 2004ರವರೆಗೆ 27.65 ಕೋಟಿರೂ. ವಿನಿಯೋಗಿಸಿ ಹಮ್ಮಿಗಿ ಬಳಿ ಬ್ಯಾರೇಜ್ ಹಾಗೂ ಎಡ ಹಾಗೂ ಬಲ ಭಾಗದ ಇನ್‌ಟೇಕ್ ಕಾಲುವೆಗಳಿಗೆ ಚಾಲನೆ ದೊರೆಯಿತು. ಡಿಸೆಂಬರ್ 2000ರಲ್ಲಿ ಯೋಜನೆಯನ್ನು ಪರಿಷ್ಕರಿಸಲಾಯಿತು. ಯೋಜನೆಗೆ ನಿಗದಿ ಮಾಡಿದ 7.64 ಟಿಎಂಸಿ ನೀರಿನೊಂದಿಗೆ 10.91 ಟಿಎಂಸಿ ನೀರನ್ನು ಹೆಚ್ಚುವರಿಯಾಗಿ ಹಂಚಿಕೆ ಮಾಡಿ ಒಟ್ಟಾರೆ 18.55 ಟಿಎಂಸಿ ನೀರನ್ನು ಮೇಲ್ಕಂಡ ಮೂರು ಜಿಲ್ಲೆಗಳ ವ್ಯಾಪ್ತಿಯ 1.67 ಲಕ್ಷ ಎಕರೆಗಳಿಗೆ ಒದಗಿಸುವ 595 ಕೋಟಿರೂ. ಯೋಜನೆಗೆ ಅನುಮೋದನೆ ನೀಡಲಾಯಿತು.

ತದನಂತರ 2011 ರಲ್ಲಿ ನಿಗದಿತ 18.55 ಟಿಎಂಸಿ ನೀರು ಬಳಕೆಯೊಂದಿಗೆ 1,70,236 ಎಕರೆ ಪ್ರದೇಶಕ್ಕೆ ಹರಿವು ನೀರಾವರಿ ಒದಗಿಸುವ 1894.50 ಕೋಟಿರೂ. ಪರಿಷ್ಕೃತ ಯೋಜನಾ ವರದಿಗೆ ಅನುಮೋದನೆ ನೀಡಲಾಯಿತು.

2012–13 ರ ಹೊತ್ತಿಗೆ ಯೋಜನೆಗೆ 760 ಕೋಟಿರೂ. ವಿನಿಯೋಗಿಸಿ ಬ್ಯಾರೇಜ್, ಬಲಭಾಗದ 1 ನೇ ನೀರೆತ್ತುವ ಘಟಕ ಹಾಗೂ ಹಮ್ಮಿಗಿ– ಮುಂಡವಾಡ ನೀರೆತ್ತುವ ಘಟಕಗಳು ಲೋಕಾರ್ಪಣೆಗೊಂಡು ಬಲಭಾಗದ 12 ಸಾವಿರ ಎಕರೆ ಮತ್ತು ಎಡಭಾಗದ 941 ಎಕರೆಗೆ ನೀರಾವರಿ ಆಸರೆ ದೊರೆತ್ತಿತ್ತು. ಯೋಜನೆಯಡಿ ನಿಗದಿಗೊಳಿಸಿದ 1,70,236 ಎಕರೆ ಹರಿವು ನೀರಾವರಿ ಪೈಕಿ, ಎಡಭಾಗದ 2 ನೇ ಲಿಫ್ಟ ನಂತರದ ಪ್ರದೇಶವನ್ನು ಸೂಕ್ಷ್ಮ (ಹನಿ) ನೀರಾವರಿಗೆ ಒಳಪಡಿಸುವದರಿಂದ ಹೆಚ್ಚುವರಿಯಾಗಿ 94,993 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸಲು ಯೋಜಿಸಲಾಯಿತು. ಇದರಿಂದ ಒಟ್ಟಾರೆ 2,65,229 ಎಕರೆಗೆ ನೀರಾವರಿ ಒದಗಿಸಲು 2013–14 ರಲ್ಲಿ ನಿರ್ಧರಿಸಲಾಯಿತು. ಇದಕ್ಕಾಗಿ 5768.04 ಕೋಟಿ. ರೂ.ಗಳ ಪರಿಷ್ಕೃತ ಯೋಜನಾ ವರದಿಗೆ 2015 ರಲ್ಲಿ ಅನುಮೋದನೆ ದೊರೆತು ಕಾರ್ಯ ಪ್ರಗತಿಯಲ್ಲಿದೆ. ಒಟ್ಟಾರೆ ಈ ಯೋಜನೆಯಡಿ 2,65,229 ಎಕರೆಗೆ ನೀರಾವರಿ ಕಲ್ಪಿಸಲಾಗುತ್ತಿದೆ. ಆ ಪೈಕಿ 48381 ಎಕರೆ ಪ್ರದೇಶದಲ್ಲಿ ಹರಿವು ನೀರಾವರಿ ( ಇದರಲ್ಲಿ ಬಲಭಾಗದಲ್ಲಿ 35,791 ಎಕರೆ ಹಾಗೂ ಎಡಭಾಗದಲ್ಲಿ 12,590 ಎಕರೆ) ಮತ್ತು ಎಡಭಾಗದ 2,16,848 ಎಕರೆ ಪ್ರದೇಶಕ್ಕೆ ಹನಿ (ಸೂಕ್ಷ್ಮ) ನೀರಾವರಿ ಕಲ್ಪಿಸುವ ಗುರಿ ಇದೆ.

ಬಹು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಬಯಲು ನಾಡಿನ ಈ ಯೋಜನೆ ಈ ಭಾಗದ ರೈತಾಪಿ ಜನಕ್ಕೆ ಜೀವನಾಡಿಯಾಗಿ ರೂಪುಗೊಂಡು ವರದಾನವಾಗಿ ಪರಿಣಮಿಸಲಿದೆ. ಇದರಿಂದಾಗಿ ರೈತರು ವರ್ಷದಲ್ಲಿ ಎರಡು ಬೆಳೆ ತೆಗೆದುಬಹುದಾಗಿದೆ. ತನ್ಮೂಲಕ ರೈತರ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿಯು ಇದು ಮಹತ್ವಾಕಾಂಕ್ಷಿ ಯೋಜನೆಯಾಗಲಿದೆ.



# ಪೊಲೀಸ್ ಇಲಾಖೆ

## ಸುಧಾರಣೆಯತ್ತ ದೃಢ ಹೆಜ್ಜೆ...



ಕಾರಂಜಿ



ಅವಿರತ ಶ್ರಮದೊಂದಿಗೆ ಅಹರ್ನಿಶಿ ದುಡಿಯುವ ಕಾನೂನು ರಕ್ಷಕರ ಜೀವನಮಟ್ಟ ವೃದ್ಧಿಗಾಗಿ ರಾಜ್ಯ ಸರ್ಕಾರ ಅಡಿಯಿರಿಸಿದೆ.

ಈ ಹಿಂದೆ ಮಾತು ಕೊಟ್ಟಂತೆ, ಪೊಲೀಸ್ ಇಲಾಖಾ ಸಿಬ್ಬಂದಿಯ ದುಡಿಯುವ ಸ್ಥಿತಿಗತಿಗಳ ಸುಧಾರಣೆಗೆ ಮುಂದಾಗಿರುವ ರಾಜ್ಯ ಸರ್ಕಾರವು ಸಬ್–ಇನ್ಸ್‌ಪೆಕ್ಟರ್ ಹಾಗೂ ಕೆಳ ಹಂತದ ಸಿಬ್ಬಂದಿಗಳಿಗೆ ವಾರ್ಷಿಕ 13 ತಿಂಗಳ ಸಂಬಳದೊಂದಿಗೆ ಮಾಸಿಕ ರೂ. 2,000ರ ಹೆಚ್ಚುವರಿ ಭತ್ಯೆಗಳನ್ನು ಘೋಷಿಸಿದೆ. ಜೊತೆಗೆ, ವೇತನ ಪರಿಷ್ಕರಣೆಗಾಗಿ ಶೀಘ್ರವೇ ನೂತನ ವೇತನ ಆಯೋಗ ರಚಿಸಲೂ ನಿರ್ಧರಿಸಿದೆ.

ಜನಸಾಮಾನ್ಯರ ಪ್ರಾಣ–ಆಸ್ತಿ ರಕ್ಷಣೆ ಮತ್ತು ಸಂಭವನೀಯ ಕಾನೂನುಭಂಗ ತಡೆಯೇ ಮುಖ್ಯ ಧ್ಯೇಯವಾಗಿರುವ ರಾಜ್ಯ ಪೊಲೀಸ್ ಇಲಾಖೆಯು ರಾಷ್ಟ್ರದಲ್ಲಿಯೇ ಕಾರ್ಯದಕ್ಷತೆ–ಕ್ಷಮತೆಗೆ ಹೆಸರುವಾಸಿ. ರಾಜ್ಯದ ಉದ್ದಗಲಕ್ಕೂ ಸುಮಾರು 1,000 ಕ್ಕೂ ಹೆಚ್ಚು ಪೊಲೀಸ್ ಠಾಣೆ ಮತ್ತು ಔಟ್‌ಪೋಸ್ಟ್‌ಗಳನ್ನು ಈ ಉದ್ದೇಶಗಳಿಗಾಗಿ ಸ್ಥಾಪಿಸಲಾಗಿದೆ.

ಇಲಾಖೆಯಲ್ಲಿ ಒಟ್ಟಾರೆ 80,000ಕ್ಕೂ ಹೆಚ್ಚು ಮಂದಿ ಸಮಯದ ಪರಿವೆಯೇ ಇಲ್ಲದಂತೆ ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ ಕೆಳಹಂತದ ಸಿಬ್ಬಂದಿಯ ದುಡಿಯುವ ಸ್ಥಿತಿಗತಿಗಳ ಸುಧಾರಣೆಗೆ ಹಿಂದಿನಿಂದಲೂ ಒತ್ತಾಯಗಳು ಕೇಳಿಬಂದಿದ್ದವು. ಅದಕ್ಕಾಗಿ, ಕೆಲ ತಿಂಗಳುಗಳ ಹಿಂದೆ ಪೊಲೀಸ್ ಸಿಬ್ಬಂದಿ ಹರತಾಳ ನಡೆಸುವ ಕುರಿತೂ ಚಿಂತಿಸಿದ್ದರು. ಆ ಸಂದರ್ಭ 'ಇಲಾಖೆಯ ಸಿಬ್ಬಂದಿಗಳ ಹಿತರಕ್ಷಣೆಗೆ ಸರ್ಕಾರ ಮುಂದಾಗಲಿದೆ' ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಮತ್ತು ಗೃಹಸಚಿವ ಶ್ರೀ ಜಿ. ಪರಮೇಶ್ವರ್ ಭರವಸೆ ನೀಡಿದ್ದರು.

ಅದರಂತೆಯೇ, ಇಲಾಖೆಯ ಸಿಬ್ಬಂದಿಗಳ ಜೀವನಮಟ್ಟ ವೃದ್ಧಿ ಮತ್ತು ದುಡಿಯುವ ಸ್ಥಿತಿಗತಿಗಳ ಸುಧಾರಣೆಗೆ ಮುಂದಾಗಿದೆ. ಪ್ರಥಮ ಹಂತವಾಗಿ, ಸಬ್-ಇನ್ಸ್‌ಪೆಕ್ಟರ್ ಮತ್ತು ಸಬ್-ಇನ್ಸ್‌ಪೆಕ್ಟರ್ ಕೆಳಹಂತದ ಎಲ್ಲಾ ಉದ್ಯೋಗಿಗಳಿಗೆ (ಸಬ್-ಇನ್ಸ್‌ಪೆಕ್ಟರ್, ಸಹಾಯಕ ಸಬ್-ಇನ್ಸ್‌ಪೆಕ್ಟರ್, ಮುಖ್ಯಪೇದೆ ಮತ್ತು ಪೇದೆ) ವಾರ್ಷಿಕ 13 ತಿಂಗಳ ಸಂಬಳ ಮತ್ತು ಮಾಸಿಕ ರೂ. 2,000 ವಿಶೇಷ ಭತ್ಯೆಯನ್ನು ರಾಜ್ಯ ಸರ್ಕಾರವು ಘೋಷಿಸಿದೆ.

**ಘೋಷಣೆ ಏನು?**

ಸಬ್-ಇನ್ಸ್‌ಪೆಕ್ಟರ್ ಮತ್ತು ಸಬ್-ಇನ್ಸ್‌ಪೆಕ್ಟರ್ ಕೆಳಹಂತದ ಎಲ್ಲಾ ಉದ್ಯೋಗಿಗಳ ಮಾಸಿಕ ಸಮವಸ್ತ್ರ ಭತ್ಯೆಯನ್ನು ರೂ. 100 ಇಂದ ರೂ. 500 ಕ್ಕೆ





## ಕರ್ನಾಟಕದಲ್ಲಿನ ಖಾಕಿ ಬಲ

| | |
|---|---|
| ಡಿಜಿಪಿ | – 4 |
| ಎಡಿಜಿಪಿ | – 20 |
| ಐಜಿಪಿ | – 30 |
| ಡಿಐಜಿಪಿ | – 26 |
| ಎಸ್‌ಪಿ (ಐಪಿಸ್) | – 51 |
| ಎಎಸ್‌ಪಿ | – 6 |
| ಎಸ್‌ಪಿ (ನಾನ್-ಐಪಿಎಸ್) | – 96 |
| ಎಸ್‌ಪಿ (ಸಶಸ್ತ್ರ) | – 16 |
| ಕೆಸ್‌ಆರ್‌ಪಿ ಕಮಾಂಡಂಟ್ಸ್ | – 17 |
| ಎಸ್‌ಪಿ (ವೈರ್‌ಲೆಸ್ ವಿಭಾಗ) | – 1 |
| ಎಸ್‌ಪಿ (ಬೆರಳು ಮುದ್ರೆ ಘಟಕ) | – 1 |
| ಡಿವೈಎಸ್‌ಪಿ | – 350 |
| ಡಿವೈಎಸ್‌ಪಿ ಸಶಸ್ತ್ರ | – 35 |
| ಡಿವೈಎಸ್‌ಪಿ (ಬೆರಳು ಮುದ್ರೆ ಘಟಕ) | – 12 |
| ಎಸ್‌ಪಿ (ಮಹಿಳಾ) | – 9 |
| ಕೆಸ್‌ಆರ್‌ಪಿ ಸಹಾಯಕ ಕಮಾಂಡಂಟ್ಸ್ | – 46 |
| ಇನ್ಸ್‌ಪೆಕ್ಟರ್ (ಸಿವಿಲ್) | – 887 |
| ಇನ್ಸ್‌ಪೆಕ್ಟರ್ (ಸಶಸ್ತ್ರ) | – 50 |
| ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) | – 80 |
| ಇನ್ಸ್‌ಪೆಕ್ಟರ್ (ಬೆರಳು ಮುದ್ರೆ) | – 18 |
| ಇನ್ಸ್‌ಪೆಕ್ಟರ್ (ವೈರ್‌ಲೆಸ್ ಘಟಕ) | – 39 |
| ಸಬ್‌ಇನ್ಸ್‌ಪೆಕ್ಟರ್ (ಸಿವಿಲ್) | – 2,072 |
| ಸಬ್‌ಇನ್ಸ್‌ಪೆಕ್ಟರ್ (ಸಶಸ್ತ್ರ) | – 234 |
| ಸಬ್‌ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) | – 116 |
| ಸಬ್‌ಇನ್ಸ್‌ಪೆಕ್ಟರ್ (ಬೆರಳು ಮುದ್ರೆ) | – 19 |
| ಸಬ್‌ಇನ್ಸ್‌ಪೆಕ್ಟರ್ (ವೈರ್‌ಲೆಸ್ ಘಟಕ) | – 92 |
| ಸಹಾಯಕ ಸಬ್‌ಇನ್ಸ್‌ಪೆಕ್ಟರ್ (ಸಿವಿಲ್) | – 2,913 |
| ಸಹಾಯಕ ಸಬ್‌ಇನ್ಸ್‌ಪೆಕ್ಟರ್ (ಸಶಸ್ತ್ರ) | – 461 |
| ಸಹಾಯಕ ಸಬ್‌ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ) | – 92 |
| ಸಹಾಯಕ ಸಬ್‌ಇನ್ಸ್‌ಪೆಕ್ಟರ್ (ವೈರ್‌ಲೆಸ್ ಘಟಕ) | – 302 |
| ಮುಖ್ಯ ಪೇದೆ (ಸಿವಿಲ್) | – 11,916 |
| ಮುಖ್ಯ ಪೇದೆ (ಸಶಸ್ತ್ರ) | – 3,140 |
| ಮುಖ್ಯ ಪೇದೆ (ಕೆಎಸ್‌ಆರ್‌ಪಿ) | – 2,121 |
| ಮುಖ್ಯ ಪೇದೆ (ಬೆರಳು ಮುದ್ರೆ ಘಟಕ) | – 11 |
| ಮುಖ್ಯ ಪೇದೆ (ವೈರ್‌ಲೆಸ್ ಘಟಕ) | – 375 |
| ಪೇದೆ (ಸಿವಿಲ್) | – 32,658 |
| ಪೇದೆ (ಸಶಸ್ತ್ರ) | – 2,488 |
| ಪೇದೆ (ಕೆಎಸ್‌ಆರ್‌ಪಿ) | – 6,139 |
| ಪೇದೆ (ಬೆರಳು ಮುದ್ರೆ ಘಟಕ) | – 56 |
| ಪೇದೆ (ವೈರ್‌ಲೆಸ್ ಘಟಕ) | – 188 |
| ಫಾಲೋವರ್ಸ್ (ಕೆಎಸ್‌ಆರ್‌ಪಿ) | – 946 |

ಇದಲ್ಲದೆ ಆಡಳಿತ ಘಟಕಗಳಲ್ಲಿ ಹಾಗೂ ಇನ್ನಿತರ ವಿಭಾಗಗಳಲ್ಲಿ ಸುಮಾರು 1,930 ಮಂದಿ ಕೆಲಸ ಮಾಡುತ್ತಿದ್ದು, ಒಟ್ಟಾರೆ ರಾಜ್ಯ ಪೊಲೀಸ್ ಇಲಾಖೆಯ ಸಿಬ್ಬಂದಿ ಸಂಖ್ಯೆ 80,000 ಕ್ಕೂ ಹೆಚ್ಚು.






## ಒಂದೂವರೆ ಶತಮಾನದ ಇತಿಹಾಸ...

ಶಾಂತಿ-ಸಮೃದ್ಧಿ ಮತ್ತು ಸಹಬಾಳ್ವೆಗೆ ಹೆಸರಾದ ಕರ್ನಾಟಕದ ವಿಸ್ತೀರ್ಣ 1,91,791 ಚದರ ಕಿ.ಮಿ. ಜನಸಂಖ್ಯೆ 6 ಕೋಟಿ ದಾಟಿದೆ. ವಿಸ್ತಾರ ರಾಜ್ಯದ ಉದ್ದಗಲದಲ್ಲಿಯೂ ಕಾನೂನು ಸುವ್ಯವಸ್ಥೆಯ ಹೊಣೆ ಹೊತ್ತ ಪೊಲೀಸ್ ಇಲಾಖೆಗೆ ಒಂದೂವರೆ ಶತಮಾನದ ಇತಿಹಾಸವಿದೆ.

ಚಕ್ರವರ್ತಿ-ಸಾಮಂತ, ರಾಜ-ಮಹಾರಾಜರ ಕಾಲದಲ್ಲಿ ರಾಜಭಟ-ಸೇನಾನಿ ಮತ್ತು ಗೂಢಾಚಾರ ಮೊದಲಾದವರು ಜನಸಾಮಾನ್ಯರ ಪ್ರಾಣ-ಆಸ್ತಿ ರಕ್ಷಣೆಯ ಹೊಣೆ ಹೊತ್ತಿದ್ದರು. ಇದು ಇತಿಹಾಸದಲ್ಲಿ ದಾಖಲು. ರಾಜ್ಯದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ (1799–1811) ಹುಕುಂನಾಮ – ಕಂದಾಚಾರ್ ಮೊದಲಾದ ಹೆಸರಿನ ಮೂಲಕ 'ಪೊಲೀಸಿಂಗ್' ವ್ಯವಸ್ಥೆ ಜಾರಿಯಲ್ಲಿದ್ದು, ಅದರ ಮೇಲ್ವಿಚಾರಣೆಯ ಹೊಣೆ ಯುರೋಪಿಯನ್ ಸೈನಿಕರದ್ದಾಗಿತ್ತು. ಬಳಿಕ 1817ರಲ್ಲಿ ಬೆಂಗಾಲ್ ನಿಯಂತ್ರಣ ಮಾದರಿ ಅನುಸರಿಸಿ ಆ ಹೊಣೆಯನ್ನು ಪಟೇಲ್ ಅಥವಾ ಶ್ಯಾನುಭೋಗರಿಗೆ ವಹಿಸಿಕೊಡಲಾಯಿತು.

1853ರಲ್ಲಿ ಪೊಲೀಸ್ ಕಾಯ್ದೆಯನ್ನು ರಾಷ್ಟ್ರದಾದ್ಯಂತ ಜಾರಿಗೆ ತರಲಾಯಿತು. ಹಿಂದೆಯೇ, ಅಂದರೆ 1856ರಲ್ಲಿ ನ್ಯಾಯಾಂಗ ವ್ಯವಸ್ಥೆ ಜಾರಿಗೆ ಬಂದಿತು. ಆ ಮೂಲಕ ವ್ಯವಸ್ಥಿತ-ವೈಜ್ಞಾನಿಕ ಪೊಲೀಸ್ ವ್ಯವಸ್ಥೆ ಜಾರಿಗೆ ಬಂದಿತು.

1873ರಲ್ಲಿ ಡಿಐಜಿ ಹುದ್ದೆ ನೇಮಕ ಮಾಡಲಾಯಿತು. ಜೊತೆ, ಪ್ರಥಮ ದರ್ಜೆ ಅಧಿಕಾರಿ, ದ್ವಿತೀಯ ದರ್ಜೆ ಅಧಿಕಾರಿ, ಜಮಾದಾರ, ದಫೇದಾರ (ಮುಖ್ಯಪೇದೆ) ಮತ್ತು ಪೇದೆಗಳ ಹುದ್ದೆ ಸೃಷ್ಟಿಸಲಾಯಿತು. 1873ರಲ್ಲಿ ಮುಖ್ಯಪೇದೆ ಮಾಸಿಕ ವೇತನ ರೂ. 12 ಆಗಿದ್ದರೆ, ಪೇದೆ ರೂ. 8 ಪಡೆಯುತ್ತಿದ್ದರು!

ಪೊಲೀಸ್ ಪೇದೆಗಳನ್ನು ತೋಟಿ, ತಳವಾರ, ಉಂಬಳಿದಾರ, ನೀರಗಂಟಿ ಮೊದಲಾದ ಹೆಸರುಗಳಿಂದಲೂ ಕರೆಯಲಾಗುತ್ತಿತ್ತು.

1873 ಬಳಿಕ ಜನಸಂಖ್ಯೆ-ವಾಹನ ದಟ್ಟಣೆ ಮತ್ತು ಅಪರಾಧ ಸ್ವರೂಪದಲ್ಲಿ ಬದಲಾವಣೆ ಆಧರಿಸಿ ಪೊಲೀಸ್ ಇಲಾಖೆಯಲ್ಲಿ ಹಂತಹಂತವಾಗಿ ಅಭಿವೃದ್ಧಿ ಮತ್ತು ಮೇಲ್ದರ್ಜೆಗೆ ಏರಿಸುವ ಕಾರ್ಯಗಳು ನಡೆದಿವೆ. 1892 ಪೊಲೀಸ್ ತರಬೇತಿ ಶಾಲೆಯನ್ನು ಬೆಂಗಳೂರಿನಲ್ಲಿ ಆರಂಭಿಸಿದರೆ, 1928ರಲ್ಲಿ ಸೈಕಲ್ ಮೂಲಕ ಪೊಲೀಸ್ ಪಹರೆ-ಕಾನೂನು ರಕ್ಷಣಾ ಸೇವೆಯನ್ನು ಆರಂಭಿಸಲಾಯಿತು. ಆಗ ಪೊಲೀಸ್ ಪೇದೆಗಳಿಗೆ ಏಳು ರೂಪಾಯಿ ಎಂಟು ಪೈಸೆ ಅನ್ನು ಸೈಕಲ್ ಭತ್ಯೆ ರೂಪದಲ್ಲಿ ನೀಡಲಾಗುತ್ತಿತ್ತು. ಬಳಿಕ 1928–30 ರ ಅವಧಿಯಲ್ಲಿ ಇಲಾಖೆಗೆ 3 ಬಸ್‌ಗಳನ್ನು ನೀಡಲಾಯಿತು.

1912ರಲ್ಲಿ ಅಂದಿನ ಹಿರಿಯ ಅಧಿಕಾರಿಗಳು ವೆಲ್ಲೋರ್‌ಗೆ ಭೇಟಿ ನೀಡಿ ಪೊಲೀಸ್ ಇಲಾಖೆಯ ಅಧ್ಯಯನ ನಡೆಸಿ, ಬಳಿಕ ಇಲ್ಲಿನ ಪೊಲೀಸ್ ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತಂದರು. 1930ರಲ್ಲಿ ಐಜಿಪಿ ಆಗಿದ್ದ ಎಫ್.ಎ. ಹ್ಯಾಮಿಲ್ಟನ್ ಸಹ ಅನೇಕ ಸುಧಾರಣೆಗಳನ್ನು ತಂದರು. ಟಾಂಗಾ-ಸೈಕಲ್ ಮತ್ತು ಕಾರುಗಳ ಸಂಖ್ಯೆ ಹೆಚ್ಚುತ್ತಿದ್ದ ಹಿನ್ನೆಲೆಯಲ್ಲಿ ಟ್ರಾಫಿಕ್ ಸೇವೆ ಆರಂಭಿಸಿದ ಕೀರ್ತಿ ಹ್ಯಾಮಿಲ್ಟನ್‌ಗೆ ಸೇರುತ್ತದೆ.

1963 ಜುಲೈ 4 ಮೊಟ್ಟಮೊದಲ ಪೊಲಿಸ್ ಕಮಿಷನರೇಟ್ ಬೆಂಗಳೂರಿನಲ್ಲಿ ಆರಂಭವಾಯಿತು. ಸದ್ಯ, ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ ಮತ್ತು ಹುಬ್ಬಳ್ಳಿ-ಧಾರವಾಡಗಳಲ್ಲಿ ಪೊಲೀಸ್ ಕಮಿಷನರೇಟ್‌ಗಳು ಇವೆ.

ಆಡಳಿತಾತ್ಮಕ ಉದ್ದೇಶದಿಂದ ಪೊಲೀಸ್ ಇಲಾಖೆಯನ್ನು ದಕ್ಷಿಣ ವಲಯ, ಪಶ್ಚಿಮ ವಲಯ, ಪೂರ್ವ ವಲಯ, ಕೇಂದ್ರ ವಲಯ, ಉತ್ತರ ವಲಯ ಮತ್ತು ವಾಯುವ್ಯ ವಲಯಗಳೆಂದು ವಿಭಾಗ ಮಾಡಲಾಗಿದೆ.

## ಇಲಾಖೆ ಒಂದು, ಟಿಸಿಲು ಹಲವು

ಆಡುಭಾಷೆಯಲ್ಲಿ ಪೊಲೀಸರನ್ನು 'ಖಾಕಿ'ಗಳು ಎಂದು ಕರೆಯಲಾಗುತ್ತದೆ. ಪ್ರೊಬೆಷನರಿ ಪೊಲೀಸ್ ಪೇದೆಗಳಿಂದ ಆರಂಭಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಹುದ್ದೆಯವರೆಗೆ ಸುಮಾರು 80,000ಕ್ಕೂ ಹೆಚ್ಚು ಕಾರ್ಯಪಡೆಯನ್ನು ಈ ಇಲಾಖೆ ಹೊಂದಿದೆ.

ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಜನಸಾಮಾನ್ಯರ ಜೀವ ಮತ್ತು ಆಸ್ತಿ ರಕ್ಷಣೆ, ಸಂಭವನೀಯ ಅಪರಾಧಗಳನ್ನು ತಡೆಗಟ್ಟುವುದು, ಹಿಂದಿನ ಅಪರಾಧಗಳನ್ನು ಪತ್ತೆಹಚ್ಚುವುದು, ಕಳವು–ದೋಚಿದ ಮಾಲುಗಳನ್ನು ವಶಪಡಿಸಿಕೊಂಡು ಮಾಲೀಕರಿಗೆ ತಲುಪಿಸುವುದು, ಸಂಚಾರದಟ್ಟಣೆ ನಿಯಂತ್ರಣ ಮತ್ತು ಅಪರಾಧಿಗಳು/ಆರೋಪಿಗಳ ಮನಃಪರಿವರ್ತನೆ ಈ ಇಲಾಖೆಯ ಮೂಲ ಆಶಯ. ಅದರಂತೆಯೇ, ಇಲಾಖೆಯ ಸಿಬ್ಬಂದಿ ಅಹರ್ನಿಶಿ ದುಡಿಯುತ್ತಿದ್ದಾರೆ.

ಪೊಲೀಸ್ ಇಲಾಖೆಯು ಸಿವಿಲ್ ಮತ್ತು ಟ್ರಾಫಿಕ್ ಜೊತೆಗೆ ಅನೇಕ ವಿಭಾಗಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವೆಂದರೆ, ಗೃಹರಕ್ಷಕ ದಳ, ಅಗ್ನಿಶಾಮಕ ಮತ್ತು ತುರ್ತುಸೇವೆ, ಪೊಲೀಸ್ ಗಣಕಯಂತ್ರ ಘಟಕ, ರಾಜ್ಯ ಮತ್ತು ಜಿಲ್ಲಾ ಸಶಸ್ತ್ರ ಮೀಸಲು ಪಡೆ, ನೇಮಕಾತಿ ಮತ್ತು ತರಬೇತಿ ಘಟಕ, ಮಹಿಳಾ ಪಡೆ, ಅಶ್ವಾರೋಹಿ ದಳ, ಶ್ವಾನ ದಳ, ಸ್ಫೋಟಕ ಪತ್ತೆ ಮತ್ತು ನಿಷ್ಕ್ರಿಯ ಪಡೆ, ಪೊಲೀಸ್ ಮ್ಯುಸಿಕ್ ಬ್ಯಾಂಡ್, ವಿಶೇಷ ಪೊಲೀಸ್ ಘಟಕಗಳು, ಸಿಐಡಿ, ಕರಾವಳಿ ಕಾವಲು ಪಡೆ ಇತ್ಯಾದಿ.

ಆಡಳಿತ ನಿರ್ವಹಣೆಗಾಗಿ ಕಾನೂನು ಮತ್ತು ಸುವ್ಯವಸ್ಥೆ, ಅಪರಾಧ ಮತ್ತು ತಾಂತ್ರಿಕ ಸೇವೆ, ಆಡಳಿತ, ಗುಪ್ತಚರ, ಕೆಎಸ್‌ಆರ್‌ಪಿ, ತರಬೇತಿ ಮತ್ತ ನೇಮಕಾತಿ, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯ ಇತ್ಯಾದಿ ವಿಭಾಗಗಳಾಗಿ ವಿಂಗಡಿಸಲಾಗಿದೆ.

ಸಿಬ್ಬಂದಿಗೆ ಅಗತ್ಯ ತರಬೇತಿ ನೀಡಿ ಅವರ ಕಾರ್ಯಕ್ಷಮತೆ ಹೆಚ್ಚಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ 5 ಹಾಗೂ ಮೈಸೂರು, ಚನ್ನಪಟ್ಟಣ, ಮುನಿರಾಬಾದ್, ಖಾನಾಪುರ ಮತ್ತು ಕಲಬುರಗಿಯಲ್ಲಿ ತಲಾ ಒಂದು ತರಬೇತಿ ಶಾಲೆಯನ್ನು ಸ್ಥಾಪಿಸಲಾಗಿದೆ.

ಸಿಬ್ಬಂದಿಗಳ ಹಿತರಕ್ಷಣೆಗಾಗಿ ಪೊಲೀಸ್ ಅಭಿವೃದ್ಧಿ ನಿಧಿ, ಪೊಲೀಸ್ ಗೃಹ ನಿರ್ಮಾಣ ಸಹಕಾರ ಸಂಘ, ಪೊಲೀಸ್ ಕ್ಯಾಂಟೀನ್, ಪೊಲೀಸ್ ದೂರು ಪ್ರಾಧಿಕಾರ ಮೊದಲಾದವನ್ನು ರಚಿಸಲಾಗಿದೆ. ಬೇಕಾಬಿಟ್ಟಿ ವರ್ಗಾವಣೆ ತಡೆಗಾಗಿ ನಿಯಮಗಳನ್ನೂ ರೂಪಿಸಲಾಗಿದೆ.

– 'ಕಾರಂಜಿ'

ಏರಿಸಲಾಗಿದೆ. ಜೊತೆಗೆ, ನೂತನವಾಗಿ ಸಾರಿಗೆ ಮತ್ತು ಅಪಾಯ ನಿರ್ವಹಣಾ ಭತ್ಯೆ ಮಾಸಿಕ ರೂ. 1000 ಮತ್ತು ತಿಂಗಳಿಗೆ ರೂ. 600 ಅನುಕೂಲ ಭತ್ಯೆಯನ್ನೂ ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಮಾಸಿಕ ರೂ. 2,000 ಹೆಚ್ಚುವರಿ ಭತ್ಯೆಯ ಸಂಗಡ ಕನಿಷ್ಠ 10 ವರ್ಷಗಳಿಗೆ ಒಮ್ಮೆ ಬಡ್ತಿ ನೀಡುವುದಾಗಿಯೂ ಘೋಷಿಸಿರುವ ಸರ್ಕಾರವು, ಕೆಳಹಂತದ ಸಿಬ್ಬಂದಿಯು ಹಿರಿಯ ಅಧಿಕಾರಿಗಳ ಮನೆಗಳಲ್ಲಿ ದುಡಿಯುವ 'ಆರ್ಡರ್ಲಿ' ಪದ್ಧತಿಗೆ ಇತಿಶ್ರೀಯನ್ನೂ ಘೋಷಿಸಿದೆ. ಕನಿಷ್ಠ 10 ವರ್ಷಗಳಿಗೆ ಒಮ್ಮೆ ಬಡ್ತಿ ನೀಡುವ ವ್ಯವಸ್ಥೆಯ ಜಾರಿಯ ಪರಿಣಾಮ, ಇನ್ನುಮುಂದೆ ಎಲ್ಲಾ ಪೇದೆಗಳೂ ಕನಿಷ್ಠ ಸಬ್–ಇನ್ಸ್‌ಪೆಕ್ಟರ್ ಆಗಿಯೇ ನಿವೃತ್ತಿ ಹೊಂದಲಿದ್ದಾರೆ. ಇದುವರೆವಿಗೂ, ಬಡ್ತಿಗಾಗಿ ಕನಿಷ್ಠ 20 ವರ್ಷ ಕಾಯಬೇಕಾಗುತ್ತಿತ್ತು.

ಮುಖ್ಯವಾಗಿ, ಎಲ್ಲಾ ಸಿಬ್ಬಂದಿಗಳಿಗೂ ವಾರದ ರಜೆಯನ್ನು ರಾಜ್ಯ ಸರ್ಕಾರ ಕಡ್ಡಾಯಗೊಳಿಸಿದೆ.

### ಸಮಿತಿ ರಚನೆ

ವೇತನ ಪರಿಷ್ಕರಣೆಯ ಬೇಡಿಕೆ ಬಹುವರ್ಷಗಳದ್ದು. ಇಲಾಖಾ ಸಿಬ್ಬಂದಿಯಿಂದ ಕಾರ್ಯಸ್ಥಗಿತ ಹರತಾಳ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಇದೇ ಜೂನ್‌ನಲ್ಲಿ ರಾಜ್ಯ ಸರ್ಕಾರವು ಇಲಾಖೆಯ ನೇಮಕಾತಿ ಮತ್ತು ತರಬೇತಿ ವಿಭಾಗದ ಮುಖ್ಯಸ್ಥರಾದ ಎಡಿಜಿಪಿ ರಾಘವೇಂದ್ರ ಔರಾದ್‌ಕರ್ ನೇತೃತ್ವದಲ್ಲಿ ಅಧ್ಯಯನ ಸಮಿತಿಯನ್ನು ರಚಿಸಿತ್ತು. ಪಂಜಾಬ್, ಕೇರಳ, ರಾಜಸ್ಥಾನ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ, ಉತ್ತರಪ್ರದೇಶ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿನ ಪೊಲೀಸ್ ಇಲಾಖೆಯಲ್ಲಿನ ವೇತನ ಮತ್ತು ಸಿಬ್ಬಂದಿಗಳಿಗೆ ದೊರೆಯುತ್ತಿರುವ ಸವಲತ್ತುಗಳ ಅಧ್ಯಯನ ನಡೆಸಿದ್ದ ಸಮಿತಿಯು ಶೇ 35ರಷ್ಟು ವೇತನ ಹೆಚ್ಚಳಕ್ಕೆ ಶಿಫಾರಸು ಮಾಡಿತ್ತು.

ಜೊತೆಗೆ, ಸಿಬ್ಬಂದಿಯಲ್ಲಿ ಕಾರ್ಯದೊತ್ತಡ ನಿವಾರಣೆಗಾಗಿ ಅಗತ್ಯ ಸಂಖ್ಯೆಯಲ್ಲಿ ಸಿಬ್ಬಂದಿ ನೇಮಕಕ್ಕೂ ಸಮಿತಿಯು ಶಿಫಾರಸು ಮಾಡಿತ್ತು.

ಆ ಹಿನ್ನೆಲೆಯಲ್ಲಿ, 2016–17ನಲ್ಲಿ 8,500 ಸಿಬ್ಬಂದಿಯ ನೇಮಕಕ್ಕೆ ಸಿದ್ಧತೆ ನಡೆಸಿದ್ದು, ಮರುವರ್ಷ 4,445 ಪೇದೆ ಮತ್ತು 312 ಸಬ್–ಇನ್‌ಸ್ಪೆಕ್ಟರ್‌ಗಳ ನೇಮಕಕ್ಕೆ ಸರ್ಕಾರ ನಿರ್ಧರಿಸಿದೆ. 2018–19 ಸಾಲಿಗೆ ಮುನ್ನ ಇಲಾಖೆಯಲ್ಲಿನ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲೂ ಸರ್ಕಾರ ನಿರ್ಧರಿಸಿದೆ.

### ವೇತನ ಆಯೋಗ ರಚನೆ

ಇಲಾಖೆಯ ಸಂಪೂರ್ಣ ಸಿಬ್ಬಂದಿ ಹಿತಕಾಯಲು ಸರ್ಕಾರ ಬದ್ಧವಾಗಿದ್ದು, ಶೀಘ್ರವೇ ವೇತನ ಆಯೋಗ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ವೇತನ ಆಯೋಗದ ಶಿಫಾರಸಿನಂತೆ ಸಂಬಳ–ಸವಲತ್ತುಗಳ ಪರಿಷ್ಕರಣೆ ಮಾಡಲಾಗುವುದು ಎನ್ನುವುದು ಗೃಹ ಸಚಿವ ಜಿ. ಪರಮೇಶ್ವರ್ ನುಡಿಗಳು. ■







# ಭರವಸೆಯ ದಾಪುಗಾಲು: ಮೌಲ್ಯಕ್ಕೆ ಸಂದ ಮನ್ನಣೆ

ಗಂಗಾಧರ ಮೊದಲಿಯಾರ್



50 ಕರ್ನಾಟಕ ಚಲನಚಿತ್ರ ಪ್ರಶಸ್ತಿ ಸುವರ್ಣ ಸಂಭ್ರಮ

ಸಾರ್ಥಕ ಐವತ್ತು! ಕನ್ನಡ ಚಿತ್ರೋದ್ಯಮದ ಪ್ರಗತಿಗೆ, ವಿಶ್ವಸಿನಿಮಾ ನಕ್ಷೆಯಲ್ಲಿ ಕನ್ನಡ ಭಾಷಾ ಚಲನಚಿತ್ರಗಳು ಮಿನುಗಬೇಕು ಎಂಬ ಉತ್ತೇಜಕ ದೃಷ್ಟಿಯಿಂದ ಕರ್ನಾಟಕ ರಾಜ್ಯ ಸರ್ಕಾರ ಐವತ್ತು ವರ್ಷಗಳ ಹಿಂದೆ ಆರಂಭಿಸಿದ 'ಕನ್ನಡ ಚಲನಚಿತ್ರಗಳಿಗೆ ರಾಜ್ಯ ಪ್ರಶಸ್ತಿ'ನೀಡುವ ಪದ್ಧತಿಗೆ ಈಗ ಐವತ್ತು ವರ್ಷ.

1966 ರ ಜುಲೈ 1 ರಂದು ರಾಜ್ಯ ಸರ್ಕಾರ, ಅತ್ಯುತ್ತಮ ಕನ್ನಡ ಚಿತ್ರಗಳಿಗೆ ಪ್ರಶಸ್ತಿ ನೀಡುವ ಆದೇಶ ಪ್ರಕಟಿಸಿದಾಗ, ಆ ವರ್ಷ ತಯಾರಾಗಿದ್ದ ಕನ್ನಡ ಚಿತ್ರಗಳ ಸಂಖ್ಯೆ ಕೇವಲ 20. ಐವತ್ತು ವರ್ಷಗಳಲ್ಲಿ ಚಿತ್ರ ನಿರ್ಮಾಣದ ಸಂಖ್ಯೆ 180 ರಿಂದ 200 ಕ್ಕೆ ಏರಿದೆ. ಪ್ರಶಸ್ತಿಗಳ ಮೂಲಕ ಬೆನ್ನು ತಟ್ಟುವಿಕೆ ಹಾಗೂ ಸಹಾಯಧನದ ಮೂಲಕ ರಾಜ್ಯ ಸರ್ಕಾರ ಕೈ ಹಿಡಿದ ಫಲ, ಕನ್ನಡ ಚಿತ್ರೋದ್ಯಮ ದೊಡ್ಡ ಪ್ರಮಾಣದಲ್ಲಿ ಬೆಳೆಯಿತು. ಇಂದು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡ

ಚಿತ್ರಗಳು ಮಿಂಚುತ್ತಿವೆ ಎಂದರೆ ಅದಕ್ಕೆ ತಾಯಿನಾಡಿನಲ್ಲಿ ದೊರಕುತ್ತಿರುವ ಪ್ರೋತ್ಸಾಹವೂ ಕಾರಣ. ರಾಜ್ಯ ಸರ್ಕಾರ ಐವತ್ತು ವರ್ಷಗಳ ಹಿಂದೆ ಪ್ರಶಸ್ತಿ ನೀಡಲಾರಂಭಿಸಿದಾಗ ಮೊದಲ ಮೂರು ಅತ್ಯುತ್ತಮ ಚಿತ್ರಗಳಿಗೆ ಪ್ರಶಸ್ತಿ ಎಂದಾಗಿತ್ತು. ಕ್ರಮೇಣ ವೈಯಕ್ತಿಕ ಪ್ರಶಸ್ತಿಗಳ ಸ್ಥಾಪನೆ, ತಂತ್ರಜ್ಞರಿಗೂ ಪ್ರಶಸ್ತಿ ಹೀಗೆ, ಚಿತ್ರ ತಯಾರಿಕೆಯ ವಿವಿಧ ವಿಭಾಗಗಳಲ್ಲಿ ಶ್ರಮಿಸುವವರಿಗೂ ಪ್ರಶಸ್ತಿಗಳನ್ನು ನೀಡುವ ಮಾರ್ಪಾಟಾಯಿತು. ಈಗ ವರ್ಷಕ್ಕೆ 32 ಮಂದಿ ಚಲನಚಿತ್ರ ಪ್ರಶಸ್ತಿ ಪಡೆಯುತ್ತಾರೆ. ಮೂರು ಪ್ರಾದೇಶಿಕ ಭಾಷೆಯ ಒಂದು ಚಿತ್ರ ಸೇರಿ, ಐದು ಚಿತ್ರಗಳು ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆಯುತ್ತವೆ. ಸಹಾಯಧನವನ್ನೂ ಪ್ರೋತ್ಸಾಹಕವಾಗಿ ನೀಡಲಾಗುತ್ತಿದೆ. ಈ ವರ್ಷದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು, ಇದುವರೆಗೆ ನೂರು ಕನ್ನಡ ಚಿತ್ರಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು 125 ಚಿತ್ರಗಳಿಗೆ ವಿಸ್ತರಿಸುವುದಾಗಿ ಭರವಸೆ ನೀಡಿರುವುದು ಚಿತ್ರರಂಗದ ಪಾಲಿಗೆ ಶುಭ ಸಮಾಚಾರವೇ ಆಗಿದೆ.

ಪ್ರಶಸ್ತಿಗಳನ್ನು ನೀಡುವ ಉದ್ದೇಶವೇ ಚಲನಚಿತ್ರಗಳು ಅಂದಂದಿನ ಸಾಮಾಜಿಕ ತುಡಿತಗಳಿಗೆ ಯಾವ ರೀತಿಯಲ್ಲಿ ಸ್ಪಂದಿಸಿದೆ ಎನ್ನುವುದನ್ನು ಗುರುತಿಸುವುದು. ಅಲ್ಲದೆ, ಚಿತ್ರರಂಗಕ್ಕೆ ಬರುವ ಹೊಸ ಪ್ರತಿಭೆಗಳನ್ನು ಗುರುತಿಸುವುದು. ಚಲನಚಿತ್ರ ಮಾಧ್ಯಮದ ಪ್ರಭಾವೀಗುಣದ ಮೂಲಕ, ಸೃಜನಶೀಲತೆಯನ್ನು, ಜೊತೆಜೊತೆಗೇ ಸಾಮಾಜಿಕ ಹೊಣೆಗಾರಿಕೆಯನ್ನೂ ನಿರ್ವಹಿಸುವ ಕಲೆಗಾರರನ್ನು ಪ್ರೋತ್ಸಾಹಿಸುವುದು. ಹೀಗಾಗಿ ಪ್ರತೀವರ್ಷ ಚಲನಚಿತ್ರ ಪ್ರಶಸ್ತಿಗಾಗಿ ಪೈಪೋಟಿ ಹೆಚ್ಚುತ್ತಿದೆ. ಹೊಸಬರು, ಯುವ ಮುಖಗಳು ಚಿತ್ರರಂಗದಲ್ಲಿ ತೊಡಗಿಸಿಕೊಂಡಿರುವುದು ಕಂಡುಬರುತ್ತಿದೆ. ವಿಭಿನ್ನ ರೀತಿಯ ಕಥಾವಸ್ತುಗಳು ಪ್ರೇಕ್ಷಕನ ಮುಂದೆ ಬಂದು ನಿಲ್ಲುತ್ತಿವೆ. ಈಗಾಗಲೇ ನಿರಂತರವಾಗಿ ಚಿತ್ರರಂಗದಲ್ಲಿ ತೊಡಗಿಸಿಕೊಂಡವರೂ, ಚಿತ್ರ ತಯಾರಿಕೆ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಹೊಸಬರೂ ಉತ್ಸಾಹದಿಂದ ಪುಟಿಯುತ್ತಾ ಹೊಸಹೊಸ ಸಿನಿಮಾ ಸಾಧ್ಯತೆಗಳನ್ನು ತೋರಿಸಿಕೊಡುತ್ತಾ ಮುಂದಿನ ದಿನಗಳ ಕನ್ನಡ ಚಿತ್ರೋದ್ಯಮದ ಭವಿಷ್ಯವನ್ನು ಬರೆಯುತ್ತಿದ್ದಾರೆ. ಹೀಗಾಗಿ ಚಲನಚಿತ್ರ ಪ್ರಶಸ್ತಿಗಳ ಸಾಲಿನಲ್ಲಿ ಹಿರಿಯ ನಟನಟಿಯರ, ನಿರ್ದೇಶಕರ ಪ್ರಯೋಗಶಾಲೆಯಲ್ಲಿ ಪಳಗಿದ ಹೊಸ ಕಲಾವಿದರ ಆಡುಂಬೊಲವಿದೆ. ಹೊಸ ಚಿಗುರು, ಹಳೆ ಬೇರು ಸೊಗಯಿಸಿದೆ.

ಕರ್ನಾಟಕ ರಾಜ್ಯ ಸರ್ಕಾರ ಪ್ರತೀವರ್ಷ ಕೊಡಮಾಡುವ ಪ್ರಶಸ್ತಿಗಳಲ್ಲಿ 2014 ಹಾಗೂ 2015 ರ ಸಾಲಿನ ಚಲನಚಿತ್ರ ಪ್ರಶಸ್ತಿಗಳನ್ನು ನವೆಂಬರ್ 13 ರಂದು ಬೆಂಗಳೂರಿನಲ್ಲಿ ಪ್ರದಾನ ಮಾಡಲಾಯಿತು. ಎರಡು ವರ್ಷದ ಪ್ರಶಸ್ತಿಗಳನ್ನು ಒಮ್ಮೆಲೆ ನೀಡುವುದು, ಪ್ರಶಸ್ತಿಪ್ರದಾನ ದಿನಾಂಕ ನಿಗದಿಯಾಗಿಲ್ಲದಿರುವುದರ ಬಗ್ಗೆ ಪ್ರತೀವರ್ಷವೂ ಗೊಣಗಾಟವೊಂದು ಇದ್ದೇಇತ್ತು. ಅದು ಈ ಸಮಾರಂಭದಲ್ಲಿ ತಿಳಿಯಾಗಿದೆ. ಇನ್ನು ಮುಂದೆ ರಾಜ್ಯ ಸರ್ಕಾರದ ಚಲನಚಿತ್ರ ಪ್ರಶಸ್ತಿಗಳನ್ನು ಡಾ.ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ದಿನದಂದೇ ನೀಡುವ ಸಂಪ್ರದಾಯ ಆರಂಭವಾಗಲಿದೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ನೀಡಿದ್ದಾರೆ.

ಜೀವಿತಾವಧಿ ಸಾಧನೆಗಾಗಿ, ಚಿತ್ರರಂಗದಲ್ಲಿ ಸಾಧನೆ ಮಾಡಿದ ಮೂವರು ಗಣ್ಯರಿಗೆ ಪ್ರತೀವರ್ಷ ಪ್ರಶಸ್ತಿಗಳನ್ನು ನೀಡಲಾಗುತ್ತದೆ. ಅಪೂರ್ವ ಸಾಧಕರನ್ನು ಗುರುತಿಸಿ, ಅವರಿಗೆ, ಅವರ ಸೇವೆಗೆ ಗೌರವ ನೀಡುವುದು ಗೌರವಾನ್ವಿತ ಕೆಲಸ. ಚಿತ್ರರಂಗದಲ್ಲಿ ಹಲವಾರು ವರ್ಷಗಳಿಂದ ತೊಡಗಿಸಿಕೊಂಡು ವೈಯಕ್ತಿಕ ಜೀವನದಲ್ಲಿ ಏರುಪೇರು ಕಂಡಿರುವ ಸೃಜನಶೀಲ ಗಣ್ಯರಿಗೆ ರಾಜ್ಯ ಸರ್ಕಾರ ನೀಡುವ ನಿಜವಾದ ಗೌರವ ಅದು. 2014 ನೇ ಸಾಲಿನಲ್ಲಿ ಜೀವಿತಾವಧಿ ಸಾಧನೆಗಾಗಿ ಪ್ರಶಸ್ತಿ ಪಡೆದಿರುವ ಶ್ರೀ ಬಸಂತಕುಮಾರ್ ಪಾಟೀಲ್ (ಡಾ.ರಾಜ್‌ಕುಮಾರ್ ಪ್ರಶಸ್ತಿ), ಡಾ.ಬರಗೂರು ರಾಮಚಂದ್ರಪ್ಪ (ಪುಟ್ಟಣ್ಣ ಕಣಗಾಲ್ ಪ್ರಶಸ್ತಿ), ಶ್ರೀ ಸುರೇಶ್ ಅರಸು







(ಡಾ.ವಿಷ್ಣುವರ್ಧನ್ ಪ್ರಶಸ್ತಿ) ಚಿತ್ರರಂಗದಲ್ಲಿ ಹಲವಾರು ಸಾಧನೆ ಮಾಡಿದವರು. ಪ್ರಯೋಗಶೀಲರು.

ನಟರಾಗಿ ಚಿತ್ರರಂಗ ಪ್ರವೇಶಿಸಿ, ವಿತರಕರಾಗಿ, ನಿರ್ಮಾಪಕರಾಗಿ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ವಿವಿಧ ವಲಯಗಳಲ್ಲಿ ಸೇವೆ ಸಲ್ಲಿಸಿರುವ ಬಸಂತಕುಮಾರ್ ಪಾಟೀಲ್, ಪರ್ಯಾಯ ಸಿನಿಮಾ ನಿರ್ಮಾಣದಲ್ಲಿ ಸತತವಾಗಿ ತೊಡಗಿಸಿಕೊಂಡವರು, ಬಿಜಾಪುರ ಜಿಲ್ಲೆ ಹುನಗುಂದದವರಾದ ಪಾಟೀಲ್ ನಿರ್ಮಾಣದ ನಾಯಿನೆರಳು, ಗುಲಾಬಿ ಟಾಕೀಸು, ಕನಸೆಂಬ ಕುದುರೆಯನೇರಿ, ಬೆಟ್ಟದ ಜೀವ, ಕೂರ್ಮಾವತಾರ, ಭಾರತ್ ಸ್ಟೋರ್ಸ್ ಚಿತ್ರಗಳು ರಾಷ್ಟ್ರಪ್ರಶಸ್ತಿ, ರಾಜ್ಯ ಪ್ರಶಸ್ತಿ,ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿಗಳನ್ನು ಪಡೆದಿವೆ. ಅತ್ಯಂತ ಹೆಚ್ಚು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಭಾಗವಹಿಸಿದ ಚಿತ್ರಗಳನ್ನು ಮಾಡಿದ ನಿರ್ಮಾಪಕ, ಉತ್ತರ ಕರ್ನಾಟಕ ಮೂಲದ ಪ್ರಥಮ ನಾಯಕನಟ ಎಂಬೆಲ್ಲಾ ಹಿರಿಮೆ ಇವರದು. ವಾಣಿಜ್ಯಾತ್ಮಕ ಚಿತ್ರಗಳೇ ಬಂಡವಾಳಗಾರರ ಕಣ್ಣಾಗಿರುವ ಸಂದರ್ಭದಲ್ಲಿ ಪರ್ಯಾಯ ಸಿನಿಮಾ ಚಳವಳಿಗೆ ಬೆಂಬಲವಾಗಿ ನಿಂತಿರುವ ಬಸಂತಕುಮಾರ್ ಪಾಟೀಲ್ ಈ ಪ್ರಶಸ್ತಿಗೆ ಸೂಕ್ತ ವ್ಯಕ್ತಿಯೇ ಆಗಿದ್ದಾರೆ.

ನಿರ್ದೇಶಕರಿಗೇ ನೀಡಲಾಗುವ ಅತ್ಯುನ್ನತ ಪ್ರಶಸ್ತಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿ (2014) ಯನ್ನು ಡಾ.ಬರಗೂರು ರಾಮಚಂದ್ರಪ್ಪ ಅವರಿಗೆ ನೀಡಲಾಗಿದೆ. ಬರಗೂರು ಅವರು ಸಾಹಿತ್ಯ, ಸಿನಿಮಾ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸದಾ ಕ್ರಿಯಾಶೀಲವಾಗಿರಿಸಿಕೊಂಡಿರುವ ಅಪರೂಪದ ವ್ಯಕ್ತಿತ್ವ. ತಾನು ನಂಬಿದ ತತ್ವಗಳನ್ನು ಬಿಟ್ಟುಕೊಡದೆ, ವ್ಯವಸ್ಥೆಯ ಜೊತೆ ರಾಜಿಯಾಗದೆ, ತನಗನ್ನಿಸಿದ್ದನ್ನೇ ಹೇಳುವ, ಅವಕಾಶಗಳು ಸಿಕ್ಕಾಗ ಅದನ್ನೇ ಮಾಡುವ ಬಂಡಾಯಗಾರ.

ಸಾಹಿತ್ಯ ಮತ್ತು ಸಂಸ್ಕೃತಿಯ ಸಂದರ್ಭದಲ್ಲಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರಿಗೆ ಬಹುದೊಡ್ಡ ಸ್ಥಾನವಿದೆ. ಕಾರಣ, ಇವರು ಸೃಷ್ಟಿಸಿದ ಪ್ರತಿಯೊಂದು ಕೃತಿಯೂ ಸಾಮಾಜಿಕ ಸಂವೇದನೆಗಳನ್ನು ದಾಖಲಿಸುವಲ್ಲಿ ತಾಜಾತನ ಹೊಂದಿದೆ. ಇಂದಿನ ಸಾಹಿತ್ಯ ಸಂಗೀತ ಕಲೆಗಳ ಸಾಲಿನಲ್ಲಿ ಚಲನಚಿತ್ರರಂಗಕ್ಕೆ ತನ್ನದೇ ಆದ ಸ್ಥಾನವಿದೆ. ಇದರ ಪ್ರಭಾವಶಾಲಿ ಗುಣ ಮತ್ತು ಪರಿಣಾಮಕಾರಿ ನಿಲುವುಗಳನ್ನು ಅರ್ಥೈಸಿಕೊಂಡ ಬರಗೂರು ಅವರು, ಈ ಕ್ಷೇತ್ರವನ್ನು ಸಹ ತಮ್ಮ ತಾತ್ವಿಕ ನೆಲೆಗೆ ಒಗ್ಗಿಸಿಕೊಂಡದ್ದು ಉಲ್ಲೇಖಾರ್ಹ ವಿಷಯ. ಮಾರುಕಟ್ಟೆಯ ಕಾರಣಕ್ಕೆ ಮನೋರಂಜನೆಯ ಉದ್ಯಮವಾಗಿ ಮಾತ್ರ ಉಳಿಯುತ್ತಿದ್ದ ಚಲನಚಿತ್ರ ಕ್ಷೇತ್ರವನ್ನು ಬರಗೂರು ತಮ್ಮ ಪ್ರಯೋಗಶೀಲತೆ ಮತ್ತು ಪರ್ಯಾಯ ಆಲೋಚನೆಗಳ ಮೂಲಕ ಬದಲಾಯಿಸಿದರು. ಬೆಳ್ಳಿತೆರೆಯಲ್ಲೂ ಬೆವರಹನಿಗಳು ದಾಖಲಾಗುವಂತೆ ನೋಡಿಕೊಂಡರು. ಅವರ ನಿರ್ದೇಶನದ ಒಂದು ಊರಿನ ಕತೆ, ಬೆಂಕಿ, ಸೂರ್ಯ, ಕೋಟೆ, ಕರಡಿಪುರ, ಹಗಲುವೇಷ ಹಾಗೂ ಕ್ಷಾಮ, ಶಬರಿ, ಭಾಗೀರಥಿ, ಮರಣದಂಡನೆ, ಸಿನಿಮಾಗಳು ಅದ್ಭುತ ಪರಿಣಾಮ ಬೀರಿದವು. ಜೊತೆಗೆ ಜನುಮದ ಜೋಡಿ, ಜೋಡಿಹಕ್ಕಿ, ನಮ್ಮೂರು ಹುಡ್ಗ, ಕುರುಬನ ರಾಣಿ "ಸಿನಿಮಾದ ಇವರ ಸಂಭಾಷಣೆಗಳು ಬೆಳ್ಳಿತೆರೆಗೆ ಹೊಸ ಲಯವನ್ನು ಬರೆದವು.

ಸಿನಿಮಾ ಸಾಧ್ಯತೆಗಳನ್ನು ಹಿಗ್ಗಿಸುವ ಅವರ ಪ್ರಯತ್ನ, ಸಿನಿಮಾ ಮಾಧ್ಯಮದ ಬಗ್ಗೆ ಅವರಿಗಿರುವ ಬದ್ಧತೆ,

**ರಾಜ್ಯ ಸರ್ಕಾರದ ಚಲನಚಿತ್ರ ಪ್ರಶಸ್ತಿಗಳನ್ನು ಡಾ.ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ದಿನದಂದೇ ನೀಡುವ ಸಂಪ್ರದಾಯ ಆರಂಭವಾಗಲಿದೆ ಎನ್ನುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ.**

ಅದನ್ನೊಂದು ಕಲೋದ್ಯಮವಾಗಿ ಸ್ವೀಕರಿಸಿರುವ ಅವರ ಸಿದ್ಧಾಂತಗಳು ಚಿತ್ರರಂಗದಲ್ಲಿ ಹೊಸ ಶೈಲಿಯನ್ನೇ ನಿರ್ಮಿಸಿವೆ. ಪರ್ಯಾಯ ಸಿನಿಮಾದ ಬೆಳವಣಿಗೆಯಲ್ಲಿ ಬರಗೂರು ರಾಮಚಂದ್ರಪ್ಪ ಅವರು ರೂಪಿಸಿರುವ ಸಿನಿಮಾ ಶೈಲಿ, ಭಾರತೀಯ ಚಿತ್ರರಂಗದಲ್ಲಿನ ಪರ್ಯಾಯ ಸಿನಿಮಾ ಚಳವಳಿಗೆ ಪೂರಕವಾಗಿರುವುದು ಗಮನಾರ್ಹ,

2014 ನೇ ಸಾಲಿನ ಡಾ.ವಿಷ್ಣುವರ್ಧನ್ ಪ್ರಶಸ್ತಿ ಪಡೆದಿರುವ ಸುರೇಶ್ ಅರಸ್, ಸಂಕಲನಕಾರ್ಯ ತಂತ್ರಜ್ಞಾನಕ್ಕಷ್ಟೇ ಸೀಮಿತವಲ್ಲ. ಚಿತ್ರದ ಕತೆಯನ್ನು ಒಟ್ಟಂದದಲ್ಲಿ ಸರಾಗವಾಗಿ ನಿರೂಪಿಸುವ ಸೃಜನಶೀಲ ಕಾಯಕ ಎಂದು ನಂಬಿದವರು ಶ್ರೀ ಸುರೇಶ್ ಅರಸ್. ಕನ್ನಡದ ಕೆಲವೇ ಅತ್ಯುತ್ತಮ ಸಂಕಲನಕಾರರಲ್ಲಿ ಸುರೇಶ್ ಅರಸು ಅವರೂ ಒಬ್ಬರು. ದಕ್ಷಿಣ ಭಾರತದಲ್ಲಿ ಅತ್ಯಂತ ಪ್ರತಿಭಾವಂತ ಸಂಕಲನಕಾರರೆಂಬ ಹೆಸರು ಗಳಿಸಿರುವ ಸುರೇಶ್ ಅರಸು ಇದುವರೆಗೆ 350 ಕನ್ನಡ ಚಲನಚಿತ್ರಗಳ ಸಂಕಲನ ಕಾರ್ಯ ಮಾಡಿದ್ದಾರೆ.300 ತಮಿಳು ಚಿತ್ರಗಳು, 50 ಸಾಕ್ಷ್ಯಚಿತ್ರಗಳು, 50 ಬಂಗಾಳೀ ಚಿತ್ರಗಳು, ಕೊಡವ, ಕೊಂಕಣಿ,ತುಳು,ಮರಾಠಿ ಹಾಗೂ ಹಿಂದಿಯ ಇಪ್ಪತ್ತಕ್ಕೂ ಹೆಚ್ಚು ಚಲನಚಿತ್ರಗಳ ಸಂಕಲನ ಮಾಡಿದ್ದಾರೆ ಎನ್ನುವುದು ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

2015ನೇ ಸಾಲಿನಲ್ಲಿ ಡಾ.ರಾಜ್‌ಕುಮಾರ್ ಪ್ರಶಸ್ತಿ ಪಡೆದಿರುವ ಶ್ರೀಮತಿ ಹರಿಣಿ ಕನ್ನಡ ಚಿತ್ರರಂಗದಲ್ಲಿ ಮರೆಯಲಾಗದ ಹೆಸರು. ಅರವತ್ತರ ದಶಕದಲ್ಲಿ ಮನೆಮಾತಾಗಿದ್ದ ಅಭಿನೇತ್ರಿ. ಎನ್.ಲಕ್ಷ್ಮೀನಾರಾಯಣ್ ನಿರ್ದೇಶನದ 'ನಾಂದಿ' ಚಿತ್ರದಲ್ಲಿ ಕಿವುಡು–ಮೂಗ ಹೆಣ್ಣಾಗಿ ಹೃದಯಂಗಮವಾಗಿ ಅಭಿನಯಿಸಿದ ಪ್ರತಿಭಾವಂತ ನಟಿ. ಅಂದಿನ ದಿನಗಳಲ್ಲೇ ದಿಟ್ಟ ವಸ್ತು ಹಾಗೂ ಸಮರ್ಪಕ ನಿರೂಪಣೆಯಿಂದ ಗಮನ ಸೆಳೆದ 'ನಾಂದಿ' ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಪರಂಪರೆಗೆ ನಾಂದಿಯಾಡಿತು. ಶ್ರೀಮತಿ ಹರಿಣಿ ಅವರು ಈ ಚಿತ್ರದ ನಿರ್ಮಾಪಕರಲ್ಲೊಬ್ಬರು.



ಶ್ರೀಮತಿ ಹರಿಣಿ, 1951 ರಲ್ಲಿ ಅಭಿನಯಿಸಿದ ಮತ್ತೊಂದು ದಾಖಲಾರ್ಹ ಚಿತ್ರ: 'ಜಗನ್ಮೋಹಿನಿ'. ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಈ ಚಿತ್ರ 'ಜಗನ್ಮೋಹಿನಿ'ಯಾಗಿ ಹರಿಣಿ ಅವರು ನೀಡಿದ ಅಭಿನಯ, ಇದುವರೆಗೆ ಬಂದಿರುವ ಬಹುತೇಕ 'ಮೋಹಿನಿ' ಚಿತ್ರಗಳಿಗೆ ಮಾದರಿಯಾಗಿಯೇ ಉಳಿದಿದೆ. ಈ ಚಿತ್ರ ರಾಜ್ಯದಲ್ಲಿ ರಜತಮಹೋತ್ಸವ ಕಂಡಿತಲ್ಲದೆ, ದಾವಣಗೆರೆಯಲ್ಲಿ ಸತತವಾಗಿ 32 ವಾರ ಪ್ರದರ್ಶನಗೊಂಡು ದಾಖಲೆ ಬರೆಯಿತು. ಮಡಿವಂತಿಕೆಯೇ ಮೆರೆಯುತ್ತಿದ್ದ ಅಂದಿನ ದಿನಗಳಲ್ಲಿ ಹರಿಣಿ ಅವರು ಈಜುಡುಗೆ ತೊಟ್ಟು ಅಭಿನಯಿಸಿದ್ದೂ ಕೂಡ ಕನ್ನಡದಲ್ಲಿ ಒಂದು ದಿಟ್ಟ ನಡೆಯಾಗಿತ್ತು.



ಚಿತ್ರರಂಗ ಪ್ರವೇಶಿಸಿದ್ದು 'ಹರಿದಾಸ' ಎನ್ನುವ ತಮಿಳು ಚಿತ್ರದ ಮೂಲಕ. 1951 ರಲ್ಲಿ ಜಗನ್ಮೋಹಿನಿಯ ಮೂಲಕ ಅವರು ಕನ್ನಡ ಚಿತ್ರರಂಗದ ನಾಯಕ ನಟಿಯಾದಾಗ ಅವರಿಗೆ 15 ವರ್ಷ ವಯಸ್ಸು. ಮುಂದೆ 'ಕನ್ಯಾದಾನ' ಚಿತ್ರದ ಮೂಲಕ ಅವರು ಮತ್ತಷ್ಟು ಜನಪ್ರಿಯರಾದರು. ಅಂದಿನ ಸಮಾಜದಲ್ಲಿ ಕಪ್ಪು ಹುಡುಗಿಯರಿಗೆ ಮದುವೆಯೇ ಕಷ್ಟವಾಗಿದ್ದ ದಿನಗಳು. ಕನ್ಯಾದಾನದಲ್ಲಿ ಕಪ್ಪು ಹೆಣ್ಣಾಗಿ, ಅಂತಹ ಸಾವಿರಾರು ಹುಡುಗಿಯರ ಮೂಕವೇದನೆಯನ್ನು ಅತ್ಯಂತ ಮನೋಜ್ಞವಾಗಿ ಬಿಂಬಿಸಿದ ಹರಿಣಿ, ಸಮಕಾಲೀನ ಸಮಸ್ಯೆಯನ್ನು ಸಮಾಜದ ಮುಂದೆ ತಂದು ಅದನ್ನು ಚರ್ಚೆಗೆ ಒಳಪಡಿಸಿದ್ದರು. ದಲ್ಲಾಳಿ, ವಿಚಿತ್ರಪ್ರಪಂಚ,ನಂದಾದೀಪ, ಗಂಧರ್ವ ಕನ್ಯೆ, ಪತಿವ್ರತಾ, ಮಂಗಳ ಮುಹೂರ್ತ, ಸತಿ ಸುಕನ್ಯ ಮೊದಲಾದ ಚಿತ್ರಗಳು ಅವರ ಯಶಸ್ಸಿನ ಹಾದಿಯಲ್ಲಿ ದಾಖಲೆ ಬರೆದ ಚಿತ್ರಗಳಾದವು. ಶ್ರೀಮತಿ ಹರಿಣಿ ನಿರ್ಮಾಪಕರಾಗಿಯೂ ಸದಭಿರುಚಿಯ ಚಲನಚಿತ್ರಗಳನ್ನು ನಿರ್ಮಿಸಿದ್ದಾರೆ. ಕನ್ನಡದ ಮೇರು ನಟರಾದ ಡಾ.ರಾಜ್‌ಕುಮಾರ್, ಉದಯಕುಮಾರ್ ಹಾಗೂ ಕಲ್ಯಾಣ್‌ಕುಮಾರ್ ಈ ಮೂವರೂ ನಟತ್ರಯರೊಂದಿಗೆ ಹರಿಣಿ ಅವರು ಅಭಿನಯಿಸಿರುವುದು ಮತ್ತೊಂದು ಉಲ್ಲೇಖಾರ್ಹ ಸಂಗತಿ.

2015 ನೇ ಸಾಲಿನ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪುರಸ್ಕೃತರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಶೈಲಿಯನ್ನು ಮೂಡಿಸಿದ ನಿರ್ದೇಶಕರು. 1986 ರಲ್ಲಿ ಕನ್ನಡ ಚಿತ್ರರಂಗ ಪ್ರವೇಶಿಸಿದ ನಾಗತಿಹಳ್ಳಿ ಚಂದ್ರಶೇಖರ್, ಪ್ರತೀ ಚಿತ್ರದಲ್ಲೂ ಹೊಸ ಕಲಾವಿದರು, ತಂತ್ರಜ್ಞರನ್ನು ಬೆಳಕಿಗೆ ತಂದರು. ಇವರ ನಿರ್ದೇಶನದ ಮೊದಲ ಚಿತ್ರ "ಉಂಡೂ ಹೋದ ಕೊಂಡೂ ಹೋದ" (1991) ದಿಂದ ಇತ್ತೀಚಿನ "ಇಷ್ಟಕಾಮ್ಯ" ಚಿತ್ರದವರೆಗೆ ಅವರು ಈ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದಾರೆ.

ಮೊದಲಬಾರಿಗೆ ಕನ್ನಡದ ಕ್ಯಾಮರಾವನ್ನು ವಿಸ್ತೃತವಾಗಿ ಅಮೆರಿಕಾ ಮತ್ತು ಯೂರೋಪ್ ಭೂಖಂಡಗಳಿಗೆ ಕೊಂಡೊಯ್ದ ಕೀರ್ತಿ ಇವರದು. ಇಡೀ ಕಥಾಭಾಗವನ್ನು ವಿದೇಶಿ ನೆಲದಲ್ಲಿ ಚಿತ್ರೀಕರಿಸಿ, ಅದನ್ನು ಭಾರತೀಯ ಸಂಸ್ಕೃತಿಯೊಂದಿಗೆ ಹೋಲಿಸಿ ನೋಡುವ ವಿಚಾರಾತ್ಮಕ ಚಿತ್ರಗಳನ್ನು ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶಿಸಿದ್ದಾರೆ. "ಅಮೆರಿಕಾ, ಅಮೆರಿಕಾ" ಅವರ ಪ್ರತಿಭೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ "ಉಂಡೂ ಹೋದ ಕೊಂಡೂ ಹೋದ", 'ಕೊಟ್ರೇಶಿ ಕನಸು' ಚಿತ್ರಗಳು ಗ್ರಾಮಬದುಕಿನ ಕಷ್ಟಕಾರ್ಪಣ್ಯಗಳ ಚಿತ್ರಣ ಹೊಂದಿವೆ. "ಹೂಮಳೆ" ಚಿತ್ರವು ಭಾರತದ ಈಶಾನ್ಯಭಾಗದ ಅಸ್ಸಾಂ, ಮೇಘಾಲಯ, ಅರುಣಾಚಲ ಮುಂತಾದ ರಾಜ್ಯಗಳಲ್ಲಿರುವ ಭಯೋತ್ಪಾದನೆ, ಗಡಿಭಾಗದ ಸಮಸ್ಯೆಗಳ ಮೇಲೆ ಕ್ಷಕಿರಣ ಬೀರುತ್ತವೆ. ಲಡಾಖ್‌ನ ಲೇಹ್ ಪ್ರಾಂತ್ಯದಲ್ಲಿ ಚಿತ್ರೀಕರಿಸಲಾಗಿರುವ ಮೊದಲ ಕನ್ನಡ ಚಿತ್ರ 'ಅಮೃತಧಾರೆ'. ಪ್ಯಾರಿಸ್ ಪ್ರಣಯ, ನನ್ನ ಪ್ರೀತಿಯ ಹುಡುಗಿ, ಮಾತಾಡ್ ಮಾತಾಡ್ ಮಲ್ಲಿಗೆ, ಒಲವೇ ಜೀವನ ಲೆಕ್ಕಾಚಾರ, ಕೊಟ್ರೇಶಿ ಕನಸು ಅವರ ನಿರ್ದೇಶನದ ಗಮನಾರ್ಹ ಚಿತ್ರಗಳು. 13 ಬಾರಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪಡೆದಿರುವುದು, ನಾಲ್ಕು ಚಿತ್ರಗಳು ರಾಷ್ಟ್ರಪ್ರಶಸ್ತಿ ಪಡೆದಿರುವುದು ಅವರ ಸೃಜನಶೀಲತೆಗೆ ಸಾಕ್ಷಿ.

2015 ರ ಸಾಲಿನ ಡಾ.ವಿಷ್ಣುವರ್ಧನ್ ಪ್ರಶಸ್ತಿ ಪಡೆದಿರುವ ಶ್ರೀ ರಾಜನ್–ನಾಗೇಂದ್ರ ಜೋಡಿಯ ರಾಜನ್ ಅವರಿಗೆ, ಈಗ 83 ವರ್ಷ ವಯಸ್ಸು. ತಡವಾದರೂ ಹುಡುಕಿಕೊಂಡು ಬಂದ ಪ್ರಶಸ್ತಿ. ಕನ್ನಡ ಚಿತ್ರಗಳಲ್ಲಿ ರಾಜನ್–ನಾಗೇಂದ್ರ ಜೋಡಿಯ ಸಂಗೀತ ನಿರ್ದೇಶನವಿದೆ ಎಂದರೆ, ಅಲ್ಲಿ ಸುಮಧುರ ಗೀತೆಗಳ ರಸದೌತಣವೇ ಇದೆ ಎಂದೇ ಅರ್ಥ. "ರತ್ನಮಂಜರಿ" ಚಿತ್ರದ "ಗಿಲಿಗಿಲಿ ಗಿಲಕ್ಕು..ಕಾಲುಗೆಜ್ಜೆ ಝಣಕ್ಕು.." ಹಾಡು ಇಂದಿಗೂ ಬಹುಜನಪ್ರಿಯ ಗೀತೆಯಾಗಿದೆ.'ವೀರಸಂಕಲ್ಪ' ಚಿತ್ರದ "ಹಾಡು ಬಾ ಕೋಗಿಲೆ..', ಎರಡು ಕನಸು ಚಿತ್ರದ 'ಎಂದೆಂದೂ ನಿನ್ನನು ಮರೆತು..", ಮಂತ್ರಾಲಯ ಮಹಾತ್ಮೆ ಚಿತ್ರದ " ಎಂದು ಎನಗೆ ಗೋವಿಂದ.."ಮೊದಲಾದ ಗೀತೆಗಳು ಇಂದಿಗೂ, ಎಂದೆಂದಿಗು ಹಸಿರಾಗಿರುತ್ತದೆ.

1952 ರಲ್ಲಿ ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ತಯಾರಿಕೆ "ಸೌಭಾಗ್ಯ ಲಕ್ಷ್ಮಿ" ಚಿತ್ರಕ್ಕೆ ಸಂಗೀತ ನಿರ್ದೇಶನ ನೀಡುವ ಮೂಲಕ ಕನ್ನಡ ಚಿತ್ರರಂಗಕ್ಕೆ ರಾಜನ್–ನಾಗೇಂದ್ರ ಜೋಡಿಯ ಪ್ರವೇಶವಾಯಿತು. ಮುನ್ನೂರಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿರುವ ಈ ಜೋಡಿ, ಕನ್ನಡವೇ ಅಲ್ಲದೆ, ತಮಿಳು, ತೆಲುಗು, ಮಲಯಾಳಂ, ತುಳು, ಹಿಂದಿ ಮತ್ತು ಸಿಂಹಳ ಭಾಷೆಯ ಚಲನಚಿತ್ರಗಳಿಗೂ ಸಂಗೀತ ನೀಡಿತು. ಚಲನಚಿತ್ರ ಇತಿಹಾಸದಲ್ಲಿ ಅತ್ಯಂತ ಸುದೀರ್ಘಕಾಲಸಂಗೀತ ನಿರ್ದೇಶನ ನೀಡಿರುವ ಜೋಡಿ ಎನ್ನುವ ದಾಖಲೆಯೂ ಇವರ ಹೆಸರಿನಲ್ಲಿದೆ.

ಕನ್ನಡ ಚಿತ್ರ ಸಂಗೀತವನ್ನೇ ಗಣನೆಗೆ ತೆಗೆದುಕೊಂಡರೆ, ಅಚರ ಅಭಿವೃದ್ಧಿಗೆ, ಉತ್ತಮಿಕೆಗೆ, ಬೆಳವಣಿಗೆಗೆ ಸಂಗೀತ ಸಂಯೋಜಕರ ಪಾತ್ರವೇ ಮೂಲ ಎಂದರೆ ಉತ್ಪ್ರೇಕ್ಷೆಯಲ್ಲ. ಚಿತ್ರಕ್ಕೊಬ್ಬ ನಿರ್ದೇಶಕನಿದ್ದಂತೆ ಚಿತ್ರ ಸಂಗೀತಕ್ಕೆ, ಸಂಗೀತ ಸಂಯೋಜನೆಗೆ ಒಬ್ಬ ನಾವಿಕನಿರುತ್ತಾನೆ. ಕನ್ನಡ ಚಿತ್ರ ಸಂಗೀತ ಸಂಯೋಜಕರ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಹೊಸ ಆಯಾಮವನ್ನು ತಂದುಕೊಟ್ಟವರು ರಾಜನ್. ನಾಗೇಂದ್ರ ಅವರ ನಿಧನದ ತರುವಾಯ ರಾಜನ್ ಸಂಗೀತ ಸಂಯೋಜನೆಯನ್ನು ಮುಂದುವರೆಸಿದ್ದಾರೆ. ರಾಜನ್ ಅವರ ಬಳಿ ಸಹಾಯಕರಾಗಿದ್ದ ಇಳಯರಾಜ, ವೈದ್ಯನಾಥನ್,ಗಂಗೈ ಅಮರನ್, ಚಕ್ರವರ್ತಿ ಮೊದಲಾದವರು ಈಗ ಸ್ವತಂತ್ರ ನಿರ್ದೇಶಕರಾಗಿ ಖ್ಯಾತರಾಗಿದ್ದಾರೆ. ಕನ್ನಡ ಚಿತ್ರಗಳಲ್ಲಿ ಸ್ಟೀರಿಯೋ ತಂತ್ರಜ್ಞಾನದ ಸಂಗೀತವನ್ನು ಮೊದಲಬಾರಿಗೆ ಅಳವಡಿಸಿದವರು ರಾಜನ್. 'ಸಿಂಗಾಪುರದಲ್ಲಿ ರಾಜಾಕುಳ್ಳ' ಚಿತ್ರದಲ್ಲಿ ಈ ತಂತ್ರಜ್ಞಾನ ಅಳವಡಿಸಲಾಯಿತು. ರಾಜನ್ ಸಂಗೀತ ನಿರ್ದೇಶಕರಷ್ಟೇ ಅಲ್ಲ ಗಾಯಕರೂ ಕೂಡ.ಸುಮಾರು 40 ಚಿತ್ರಗಳ ಹಿನ್ನೆಲೆಗಾಯಕರಾಗಿದ್ದಾರೆ. ಇಂತಹ ಹಿರಿಯರ ಆಯ್ಕೆಯಿಂದಾಗಿ ಪ್ರಶಸ್ತಿಯ ಮೌಲ್ಯ ಹೆಚ್ಚಿದೆ.





# ಹಂಪಿ ಉತ್ಸವ

## ಮರುಕಳಿಸಿತು ವಿಜಯನಗರ ಸಾಮ್ರಾಜ್ಯದ ವೈಭವ

ಬಸವರಾಜ ಕರುಗಲ್

**2016ರ ನವೆಂಬರ್ 3, 4 ಹಾಗೂ 5** ರಂದು ಜರುಗಿದ ಹಂಪಿ ಉತ್ಸವ ಅಕ್ಷರಶಃ ವಿಜಯನಗರ ಸಾಮ್ರಾಜ್ಯದ ವೈಭವವನ್ನು ನೆನಪಿಸಿತು. ಉತ್ಸವದ ಮೊದಲ ದಿನ ಹಂಪಿಯ ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನದ ವೇದಿಕೆಯಲ್ಲಿ ವಿದ್ಯಾರ್ಥಿ ಕವಿಗೋಷ್ಠಿ ಮೂಲಕ ಆರಂಭವಾದ ಉತ್ಸವಕ್ಕೆ ದೇಶದ ಖ್ಯಾತ ನಟ, ನಿರ್ದೇಶಕ ಎಲ್ಲಕ್ಕಿಂತ ಹೆಚ್ಚಾಗಿ ಮೂಲತಃ ಕನ್ನಡಿಗ ಪ್ರಭುದೇವ ಅವರ ನೃತ್ಯ ಮತ್ತು ನುಡಿಗಳ ಮೂಲಕ ತೆರೆ ಬಿತ್ತು.

**ಎಂ. ಪಿ. ಪ್ರಕಾಶ್ ಸ್ಮರಣೆ:**

ಮೊದಲ ದಿನ ಸಂಜೆ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾಯಿ ಭುವನೇಶ್ವರಿ ಚಿತ್ರಕ್ಕೆ ಪುಷ್ಪ ಅರ್ಪಿಸಿ, ದೀಪ ಬೆಳಗುವ ಮೂಲಕ ನಾಡಿನ ಉತ್ಸವಕ್ಕೆ ಅದ್ದೂರಿ ಚಾಲನೆ ನೀಡಿದರು. 1983ರ ಸಂದರ್ಭದಲ್ಲಿ ಸಚಿವರಾಗಿದ್ದ ಈ ಭಾಗದ ಎಂ.ಪಿ.ಪ್ರಕಾಶ್ ಅವರ ಇಚ್ಛಾಶಕ್ತಿಯಿಂದಾಗಿ ಹಂಪಿ ಉತ್ಸವ ಅಚರಣೆಗೆ ಬಂದಿದೆ ಎಂದು ಮುಖ್ಯಮಂತ್ರಿಗಳು ಎಂ.ಪಿ.ಪ್ರಕಾಶ್ ಹಾಗೂ ತಮ್ಮ ನಡುವಿನ ಒಡನಾಟವನ್ನು ಸ್ಮರಿಸಿದರು.

**ಬರಗಾಲದ ಹಿನ್ನೆಲೆಯಲ್ಲಿ ಕಳೆದ ವರ್ಷ ಹಂಪಿ ಉತ್ಸವ ನಡೆಸಲಿಲ್ಲ. ಈ ವರ್ಷವೂ ಸಹ ಮತ್ತೇ ಬರ ಕಾಣಿಸಿಕೊಂಡಿದೆ. ಸಾಂಸ್ಕೃತಿಕ ಲೋಕಕ್ಕೆ ಬರ ಕಾಣಿಸಿಕೊಳ್ಳಬಾರದು ಎನ್ನುವ ಕಾರಣಕ್ಕೆ ಈ ಸಲ ಹಂಪಿ ಉತ್ಸವ ಆಯೋಜಿಸಿದೆ. ವಿಜಯನಗರ ಸಾಮ್ರಾಜ್ಯದ ವೈಭವ ಮತ್ತೇ ಹಂಪಿ ಉತ್ಸವ ಮೂಲಕ ಮರುಕಳಿಸಲಿ.**

ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು.

ಅಂದಿನ ಸರಕಾರದಲ್ಲಿ ಯಾವುದೇ ಸಾಂಸ್ಕೃತಿಕ ಉತ್ಸವ ಜರುಗಿದರೂ ಅದರ ನೇತೃತ್ವ ಎಂ.ಪಿ.ಪ್ರಕಾಶ್ ಅವರ ಹೆಗಲಿಗಿತ್ತು. ದಸರಾ ಆಚರಣೆಗೆ ಮೂಲ ಕಾರಣ ಇಲ್ಲಿನ ವಿಜಯನಗರ ಸಾಮ್ರಾಜ್ಯದ ಸಿರಿವಂತಿಕೆ. ಇಲ್ಲಿನ ಎಲ್ಲ ಸಿರಿತನ ಮೈಸೂರಿಗೆ ಸೇರಿದ ಬಳಿಕ ಇಂದಿನವರೆಗೂ ಅದ್ದೂರಿ ದಸರಾ ಕಾಣುತ್ತೇವೆ. ಮೂಲತಃ ದಸರಾ ಅಚರಣೆಗೆ ಇಲ್ಲಿನ ವೈಭವ ಕಾರಣವಾಗಿರುವುದರಿಂದ ಪ್ರತಿ ವರ್ಷ ಹಂಪಿ ಉತ್ಸವ ಯಾಕೆ ಅಚರಿಸಬಾರದು ಎನ್ನುವ ಪ್ರಸ್ತಾಪವನ್ನು ಎಂ.ಪಿ.ಪ್ರಕಾಶ್ ಸರಕಾರದ ಮುಂದಿಟ್ಟರು. ಆರ್ಥಿಕ ಸಚಿವನಾಗಿದ್ದ ನಾನೂ ಸಹ ಪ್ರಕಾಶ್ ಆವರನ್ನು ಬೆಂಬಲಿಸಿದೆ ಎಂದು ಸಿದ್ದರಾಮಯ್ಯನವರು ಹಂಪಿ ಉತ್ಸವ ಅಚರಣೆಗೆ ಬಂದ ದಾರಿಯನ್ನು ವಿವರಿಸಿದರು.

ಕಳೆದ ವರ್ಷ ಭೀಕರ ಬರಗಾಲದ ಹಿನ್ನೆಲೆಯಲ್ಲಿ ಹಂಪಿ ಉತ್ಸವ ನಡೆಸಲಿಲ್ಲ. ಈ ವರ್ಷವೂ ರಾಜ್ಯದಲ್ಲಿ ಬರಗಾಲ ಇರುವುದು ನಿಜ. 139 ತಾಲೂಕಿನಲ್ಲಿ ಬರ ಇದೆ. 110 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಇನ್ನೂ 19 ತಾಲೂಕುಗಳನ್ನು ಶೀಘ್ರವೇ ಘೋಷಿಸಲಾಗುವುದು. ಈ ಬರದ ಕಾರಣದಿಂದ ಸಾಂಸ್ಕೃತಿಕ ಲೋಕಕ್ಕೆ ಬರ ಕಾಣಿಸಿಕೊಳ್ಳಬಾರದು ಎನ್ನುವ ಉದ್ದೇಶದಿಂದ ಹಂಪಿ ಉತ್ಸವಕ್ಕೆ ಚಾಲನೆ ನೀಡಲಾಗಿದೆ ಎಂದು ರಾಜ್ಯದ ಸಾಂಸ್ಕೃತಿಕ ಲೋಕದ ಬಗ್ಗೆ ಕಾಳಜಿ ವ್ಯಕ್ತಪಡಿಸಿದರು.













**ಕಣ್ಮನ ಸೆಳೆದ ಕಾರ್ಯಕ್ರಮಗಳು:**

ಉತ್ಸವದ ಆರಂಭ ಹಾಗೂ ಮುಕ್ತಾಯದ ಮುನ್ನ ನಡೆದ ಶೋಭಾಯಾತ್ರೆ ಮತ್ತು ಜಾನಪದ ವಾಹಿನಿಯಲ್ಲಿ ನಾಡಿನ ವಿವಿಧ ಜಿಲ್ಲೆಗಳ 50 ಕ್ಕೂ ಆಧಿಕ ಕಲಾತಂಡಗಳು ರಾಜ್ಯದ ಸಾಂಸ್ಕೃತಿಕ ಹಿರಿಮೆ, ಕಲಾ ಶ್ರೀಮಂತಿಕೆಯನ್ನು ಪ್ರದರ್ಶಿಸಿ ಜನ ಮನ ಸೆಳೆದವು.

ನಂದಿ ಧ್ವಜ, ನಾದಸ್ವರ, ವೀರಗಾಸೆ, ಹಲಗೆ ವಾದನ, ಕಹಳೆ ವಾದನ, ಮಹಿಳಾ ವೀರಗಾಸೆ, ತಾಷರಂ ಡೋಲು, ಮರಗಾಲು ಕುಣಿತ, ಡೊಳ್ಳು ಕುಣಿತ, ಸೋಮನ ಕುಣಿತ, ಗೊರವರ ಕುಣಿತ, ಪೂಜಾ ಕುಣಿತ, ಕರಡಿ ಮಜಲು, ಚಿಟ್ಟಿ ಮೇಳ, ಉಮ್ಮತಾಟ, ಹುಲಿ ವೇಷ, ಸಿಂಹನೃತ್ಯ, ಗೊಂದಲಿಗರ ಮೇಳ, ಕೋಲಾಟ, ಜಗ್ಗಲಿಗಿ, ದಟ್ಟಿ ಕುಣಿತ, ಕಂಗೀಲು ನೃತ್ಯ, ಅಲಾಯಿ ಹೆಜ್ಜೆ ಮೇಳ, ಕಂಸಾಳೆ, ಕಣಿ ಹಲಿಗೆ, ಗೊಂಬೆ ನೃತ್ಯ, ಕೊಂಬುವಾಲಗ ಹೀಗೆ ನಾಡಿನ ಉದ್ದಗಲದ ಹತ್ತಾರು ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಇಡೀ ನಾಡಿನ ಸಾಂಸ್ಕೃತಿಕ ಸೊಬಗನ್ನೇ ಒಂದೆಡೆ ಬೆಸೆದಂತೆ ಭಾಸಗೊಂಡವು.



ಒಟ್ಟು ಒಂಭತ್ತು ವೇದಿಕೆಗಳಲ್ಲಿ ಸ್ಥಳೀಯರಿಂದ ದೇಶ–ವಿದೇಶಗಳ ಸಂಗೀತ, ನೃತ್ಯ, ಜಾನಪದ ಕಲಾವಿದರು ಕಲಾ ಪ್ರದರ್ಶನ ನೀಡಿದರು. ಖ್ಯಾತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್, ಸಂಗೀತ ನಿರ್ದೇಶಕ ರಘು ದೀಕ್ಷಿತ್, ಮುಂಬಯಿನ ಪಲಕ್ ಮುಚ್ಚಲ್, ಅನುರಾಧಾ ಭಟ್ ಅವರ ಸಂಗೀತ ರಸಮಂಜರಿ ನೋಡಲು ಜನ ಕಿಕ್ಕಿರಿದು ಸೇರಿದ್ದರು. ಕುದ್ರೋಳಿ ಗಣೇಶ್ ಅವರ ಜಾದೂ ಕಂಡು ಜನ ಅಚ್ಚರಿಪಟ್ಟರು.



ಸಾಹಿತ್ಯ, ಸಂಸ್ಕೃತಿ ಮಾತ್ರವಲ್ಲದೇ ರೈತರಿಗಾಗಿಯೂ ವಿಶೇಷ ಗೋಷ್ಠಿ ನಡೆಯಿತು. ಪ್ರಗತಿಪರ ರೈತ ಡಾ.ಮಲ್ಲಣ್ಣ ನಾಗರಾಳ ಕೃಷಿ–ಕೃಷಿಕನ ಕುರಿತು ಸ್ಫೂರ್ತಿದಾಯಕ ಮಾತುಗಳು ಅನ್ನದಾತ ಬಳಗಕ್ಕೆ ಪ್ರೇರಣೆ ನೀಡಿದವು. ವಿಕಲಚೇತನ ಕಲಾವಿದರ ಪ್ರತಿಭಾ ಪ್ರದರ್ಶನಕ್ಕೂ ಈ ಸಲದ ಉತ್ಸವ ವೇದಿಕೆ ನೀಡಿದ್ದು ವಿಶೇಷ.

ಇವುಗಳ ಜೊತೆಗೆ ಗ್ರಾಮೀಣ ಕ್ರೀಡೆಗಳಾದ ಕುಸ್ತಿ, ಕಲ್ಲೆತ್ತುವ ಸ್ಪರ್ಧೆ, ಕಬ್ಬಡ್ಡಿ ಇತರ ಸ್ಪರ್ಧೆಗಳು ನಡೆದವು. ಉತ್ಸವದಲ್ಲಿ ಇದೇ ಮೊದಲ ಬಾರಿಗೆ ದಕ್ಷಿಣ ಕನ್ನಡದ ಕಂಬಳ ಮಾದರಿಯ ಕೆಸರುಗದ್ದೆ ಓಟದ ಸ್ಪರ್ಧೆಯನ್ನು ನಡೆಸಿದ್ದು ಸ್ಥಳೀಯರ ಮೆಚ್ಚುಗೆ ಗಳಿಸಿತು.



ಸಾಹಸ ಕ್ರೀಡೆಗಳಾದ ರಾಕ್ ಕ್ಲೈಂಬಿಂಗ್, ರೋಪ್ ಕ್ಲೈಂಬಿಂಗ್, ಬೋಟಿಂಗ್, ವಾಟರ್ ಸ್ಕೂಟರ್ ಸೇರಿದಂತೆ ನಾನಾ ಸ್ಪರ್ಧೆಗಳು ಅಚ್ಚುಕಟ್ಟಾಗಿ ಜರುಗಿದವು. ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಮೆಹಂದಿ ಸ್ಪರ್ಧೆ, ಮಕ್ಕಳಿಗಾಗಿ ಕಿಡ್ಸ್ ಜೋನ್ ಗಮನ ಸೆಳೆದವು.

ಒಟ್ಟಾರೆ ಮೂರು ದಿನಗಳ ಕಾಲ ನಡೆದ ಈ ಸಲದ ಹಂಪಿ ಉತ್ಸವ ವಿಜಯನಗರ ಸಾಮ್ರಾಜ್ಯದ ವೈಭವವನ್ನು ನೆನಪಿಗೆ ತಂದಿತಲ್ಲದೇ ಮುಂದಿನ ಉತ್ಸವದವರೆಗೆ ನೂರಾರು ಹರ್ಷದ ಕ್ಷಣಗಳನ್ನು ನೀಡಿದೆ.



# ಮಾನ್ಯ ಮುಖ್ಯಮಂತ್ರಿಗಳಿಂದ ಬರ ಪರಿಶೀಲನೆ

ಸೂಕ್ತವಾಗಿ ಮಳೆಯಾಗದೆ ತೀವ್ರ ಬರಗಾಲಕ್ಕೀಡಾಗಿರುವ ರಾಜ್ಯದ ವಿವಿಧ ಜಿಲ್ಲೆಗಳಿಗೆ ಮಾನ್ಯ ಮುಖ್ಯಮಂತ್ರಿಯವರು ಸಂಪುಟ ಸಹೋದ್ಯೋಗಿಗಳೊಡನೆ ಭೇಟಿ ಕೊಟ್ಟರು. ಬೆಳಗಾವಿ, ಧಾರವಾಡ, ಕೋಲಾರ, ತುಮಕೂರು ಜಿಲ್ಲೆಗಳಿಗೆ ಭೇಟಿ ನೀಡಿ ಬೆಳೆಗಳ ಪರಿಸ್ಥಿತಿ, ಕುಡಿಯುವ ನೀರು, ಜಾನುವಾರುಗಳ ಮೇವು ಲಭ್ಯತೆ, ವಿದ್ಯುತ್ ಕೊರತೆ.. ಮುಂತಾದ ಸಮಸ್ಯೆಗಳನ್ನು ಪರಿಶೀಲಿಸಿದರು.













### ಸಾಗರದಾಚೆಯ

# ದುಬೈನಲ್ಲಿ

## ಗಾಂಧೀ ಪ್ರತಿಮೆ ಸ್ಥಾಪನೆ

ವೇಮಗಲ್ ಸೋಮಶೇಖರ್

ರಾಷ್ಟ್ರಪಿತ ಮಹಾತ್ಮ ಗಾಂಧೀಯವರ ಮಾನವೀಯ ಮೌಲ್ಯಗಳನ್ನು ಇಂದಿನ ಪೀಳಿಗೆಯಲ್ಲಿ ಬಿತ್ತಿ ಸಮಾಜದ ಬಹುಪಾಲು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದೆಂದು ಅರಿತು ವಿಶ್ವದೆಲ್ಲೆಡೆ ಗಾಂಧಿ ವಿಚಾರಗಳಿಗೆ ಮಹತ್ವ ನೀಡುತ್ತಿರುವುದು ಭಾರತೀಯರಾದ ನಮಗೆ ಹೆಮ್ಮೆಯ ಸಂಗತಿ.

ಅಮೆರಿಕಾದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ "ಗಾಂಧೀಜಿ ಭಾರತಕ್ಕೆ ಮಾತ್ರ ನಾಯಕರಲ್ಲ, ಅವರು ವಿಶ್ವದ ನಾಯಕರು" ಎಂದೂ ಹಾಗೂ ಕಪ್ಪು ಜನರ ನಾಯಕ ಮಾರ್ಟಿನ್ ಲೂಥರ್ ಕಿಂಗ್ "ಗಾಂಧಿ ಈ ಜಗತ್ತಿಗೆ ಅನಿವಾರ್ಯ, ಮರೆತರೆ ವಿಶ್ವದ ನಾಶ" ಎಂದು ಹೇಳಿರುವ ಮಾತು, ಅವರ ವ್ಯಕ್ತಿ ವಿಚಾರಗಳ ಪ್ರಸ್ತುತತೆ ಮತ್ತು ಅನಿವಾರ್ಯತೆಯನ್ನು ತಿಳಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟ್ ಮುಂದೆ ಗಾಂಧಿ ಪ್ರತಿಮೆ ಸ್ಥಾಪನೆ ಒಳಗೊಂಡಂತೆ ವಿಶ್ವದ ಬಹುಪಾಲು ರಾಷ್ಟ್ರಗಳು ಗಾಂಧಿ ಪ್ರತಿಮೆ ಪ್ರತಿಷ್ಠಾಪನೆ ಮಾಡಿರುವುದು ಹಾಗೂ ಮಾಡುತ್ತಿರುವುದು ನಾವೆಲ್ಲಾ ಸಂತೋಷ ಪಡುವ ಸಂಗತಿ.

ಅದೇ ರೀತಿ ಇತ್ತೀಚೆಗೆ ಯುನೈಟೆಡ್ ಅರಬ್ ರಾಷ್ಟ್ರಗಳಲ್ಲಿ ಒಂದಾದ ದುಬಾರಿ ನಗರವೆಂದು ಹೆಸರು ಗಳಿಸಿರುವ ಹಾಗೂ ವಿಶ್ವದಲ್ಲಿ ಅತಿ ಎತ್ತರದ ಸುಂದರ ಗಗನ ಚುಂಬಿ ಕಟ್ಟಡಗಳಿಗೆ ಹೆಸರಾದ ದುಬೈ ನಗರದಲ್ಲಿ ಅಲ್ಲಿನ ಅನಿವಾಸಿ ಕನ್ನಡಿಗರಾದ ಶ್ರೀ ದೀಪಕ್ ಸೋಮಶೇಖರ್, ಶ್ರೀ ಸದನ್‌ದಾಸ್, ಶ್ರೀ ಮೋಹನ್ ಮತ್ತಿತರರು(ದುಬೈ ಕನ್ನಡಿಗರು) ದುಬೈನ ಸೂಕ್ತವಾದ ಸ್ಥಳದಲ್ಲಿ ರಾಷ್ಟ್ರಪಿತ ಗಾಂಧಿಯವರ ಪ್ರತಿಮೆಯನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸಿ ಅಲ್ಲಿನ ಭಾರತ ಸರ್ಕಾರದ ರಾಯಭಾರಿಗಳಾದ ಶ್ರೀ ಎಚ್.ಇ.ಅನುರಾಗ್ ಭೂಷಣ್ ಅವರನ್ನು ಕಂಡು ತಮ್ಮ ಪ್ರಯತ್ನದ ಮನವಿಯನ್ನು ಸಲ್ಲಿಸಿದರು. ರಾಯಭಾರಿಗಳು ಈ ಕಾರ್ಯಕ್ಕೆ ಒಪ್ಪಿಗೆ ಸೂಚಿಸಿದರು. ಅಲ್ಲಿನ ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ದೀಪಾ ಜೈನ್ ಅವರು ಈ ಕಾರ್ಯಕ್ಕೆ ಸಾಥ್ ನೀಡಿದರು. ಈ ಪ್ರಯತ್ನವನ್ನು ಗಮನಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ಬೆಂಗಳೂರು) ಅಧ್ಯಕ್ಷರಾದ ಡಾ॥ ಹೊ.ಶ್ರೀನಿವಾಸಯ್ಯ ಮತ್ತು ಗೌರವ ಕಾರ್ಯದರ್ಶಿಗಳಾದ ಪ್ರೊ॥ ಜಿ.ಬಿ.ಶಿವರಾಜ್ ಅವರು ದುಬೈ ಕನ್ನಡಿಗರ ಮೂಲಕ ಈ ಕಾರ್ಯ ಸಫಲಗೊಳಿಸಲು ಕಾರ್ಯಮಗ್ನರಾದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದೊಡನೆ ದುಬೈನ ಇಂಡಿಯನ್ ಕನ್ಸುಲೇಟ್ ಆಡಿಟೋರಿಯಂನಲ್ಲಿ 2016ರ ನವೆಂಬರ್ 5 ಶನಿವಾರದಂದು ಮಹಾತ್ಮರ ಪ್ರತಿಮೆ ಅನಾವರಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಇದಕ್ಕಾಗಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿಗಳಾದ ಪ್ರೊ॥ ಜಿ.ಬಿ.ಶಿವರಾಜು, ಕ್ಷೇತ್ರಾಧಿಕಾರಿಗಳಾದ ಸಂತೆ ನಾರಾಯಣ ಸ್ವಾಮಿ ಮತ್ತು ಗಾಂಧಿ ಹಿತಚಿಂತಕರಾದ ವೇಮಗಲ್ ಸೋಮಶೇಖರ್ ಅವರು ನವಂಬರ್ 03ರಂದು ಸುಮಾರು 2ಅಡಿ ಎತ್ತರದ ಫೈಬರ್ ಗ್ಲಾಸ್‌ನಿಂದ ಸಿದ್ಧಗೊಳಿಸಿದ ಗಾಂಧೀಭವನದ ಕೊಡುಗೆಯಾದ ಮಹಾತ್ಮರ ಪ್ರತಿಮೆಯನ್ನು ಸುಮಾರು 2ಅಡಿ ಎತ್ತರದ ಪೀಠದೊಂದಿಗೆ ಹೊತ್ತು ಸಾಗರದಾಚಿನ ದುಬೈಗೆ ಪ್ರಯಾಣಿಸಿದರು.

ನವಂಬರ್ 5ರಂದು ಶನಿವಾರ ದುಬೈನಲ್ಲಿ ವಾರದ ರಜಾ ದಿನ. ಬೆಳಗ್ಗೆ 10–00 ಗಂಟೆಗೆ ಸಭಾ ಮಂದಿರದಲ್ಲಿ ಕಿಕ್ಕಿರಿದು ಜನ ಸೇರಿದ್ದರು.(ಸುಮಾರು 250ಜನ ಸೇರಿದ್ದು ಅವರಲ್ಲಿ ಹೆಚ್ಚಾಗಿ ಕನ್ನಡದವರೇ ಇದ್ದರು) ರಾಯಭಾರಿ ಕಛೇರಿಯ ಎಲ್ಲಾ ಅಧಿಕಾರವರ್ಗದವರೂ ವಿಶೇಷವಾಗಿ ಅಬುದಾಬಿಯ ಪ್ರಸಿದ್ಧ ಉದ್ಯಮಿ ಹಾಗೂ ಕೊಡುಗೈ ದಾನಿಗಳಾದ ಡಾ॥ ಬಿ.ಆರ್.ಶೆಟ್ಟಿ, ಸರ್ವೋತ್ತಮಶೆಟ್ಟಿ, ಹರ್ಮಾನ್ ಲಿವಿಸ್ ಮತ್ತಿತರ ಗಣ್ಯ ವ್ಯಕ್ತಿಗಳು, ಭಾರತೀಯ ನಿವೃತ್ತ ಅನಿವಾಸಿಗಳು ಹಾಗೂ ಕೈಗಾರಿಕೋದ್ಯಮಿಗಳು ಬಹು ಶ್ರದ್ಧೆಯಿಂದ ಆಗಮಿಸಿದ್ದರು. ಅಂದಿನ ಕಾರ್ಯಕ್ರಮದ ಅಂಗವಾಗಿ "ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧಿ" ಛಾಯಾ ಚಿತ್ರಗಳ ಪ್ರದರ್ಶನ ಹಾಗೂ ಮಹಾತ್ಮರಿಗೆ ಸಂಬಂಧಪಟ್ಟ ಕೃತಿಗಳ ಪ್ರದರ್ಶನ ಕಾರ್ಯಕ್ರಮಕ್ಕೆ ಮೆರಗು ನೀಡಿತ್ತು.

ಸಮಯಕ್ಕೆ ಸರಿಯಾಗಿ ರಾಯಭಾರಿಗಳಾದ ಡಾ॥ ಅನುರಾಗ್ ಭೂಷಣ್, ಡಾ॥ ಬಿ.ಆರ್.ಶೆಟ್ಟಿ ಮತ್ತಿತರರು ಮಹಾತ್ಮರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಸಭಾಂಗಣದ ವೇದಿಕೆಯಲ್ಲಿ ಶ್ರೀ ವೇಮಗಲ್ ಸೋಮಶೇಖರ್ ಅವರು ಗಾಂಧೀಜಿ ಉಡುಗೆಯೊಂದಿಗೆ "ಧ್ಯಾನಾಸಕ್ತ ಗಾಂಧಿ" ಭಂಗಿಯಲ್ಲಿ ಕುಳಿತಿದ್ದುದು ಎಲ್ಲರ ಗಮನ ಸೆಳೆಯಿತು.

ಕುಮಾರಿ ಇಂಪನಾ ಹಾಡಿದ ಮಹಾತ್ಮರಿಗೆ ಪ್ರಿಯವಾಗಿದ್ದ "ರಘುಪತಿ ರಾಘವ ರಾಜಾರಾಮ್" ಭಜನಾ ಗೀತೆ ಮತ್ತು ದೀಪ ಹಚ್ಚುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಅನುರಾಗ್ ಭೂಷಣ್ ಅವರು ಎಲ್ಲರನ್ನೂ ಸ್ವಾಗತಿಸುತ್ತಾ ಗಾಂಧಿಯವರ ಸಂದೇಶ ಇಡೀ ವಿಶ್ವಕ್ಕೆ ಅನಿವಾರ್ಯವಾಗಿದ್ದು ಅವರ ವಿಚಾರಗಳ ಪ್ರಸ್ತುತತೆಯನ್ನು ಇಂದಿನ ಯುವ ಜನರಿಗೆ ತಲುಪಿಸಬೇಕು. ವಿಶ್ವದಲ್ಲಿ ಅಶಾಂತಿ ವಾತಾವರಣ ಕಂಡುಬರುತ್ತಿದ್ದರೂ ಭಾರತದಲ್ಲಿ ಮಾತ್ರ ಶಾಂತಿ ಸಂದೇಶ



ಸಾರಲಾಗುತ್ತಿದೆ. ನರೇಂದ್ರ ಮೋದಿ ವಿಶ್ವ ಪರ್ಯಟನೆ ಮಾಡುವ ಮೂಲಕ ಗಾಂಧಿಯವರ ತತ್ವವನ್ನು ವಿಶ್ವಕ್ಕೆ ಪರಿಚಯಿಸುತ್ತಿದ್ದಾರೆ. ಈ ಉದ್ದೇಶದಿಂದ ತಮ್ಮ ಕಚೇರಿಯಲ್ಲಿ ಗಾಂಧಿ ಭವನವನ್ನು ಸ್ಥಾಪಿಸುವುದಾಗಿ ಭರವಸೆ ನೀಡಿದರು. ಗಾಂಧಿ ಭವನದ ಗೌರವ ಕಾರ್ಯದರ್ಶಿ ಪ್ರೊ॥ ಜಿ.ಬಿ.ಶಿವರಾಜು ಅವರು ಮಾತನಾಡುತ್ತಾ ಬೆಂಗಳೂರಿನ ಗಾಂಧಿ ಭವನದ ಚಟುವಟಿಕೆಗಳ ಬಗ್ಗೆ ಕೂಲಂಕುಷ ಪರಿಚಯ ನೀಡಿ ಅಲ್ಲಿನ ರಾಯಭಾರಿ ಕಚೇರಿಯ ಎಲ್ಲಾ ಅಧಿಕಾರಿಗಳನ್ನು ಶ್ಲಾಘಿಸುತ್ತಾ ದುಬೈನಲ್ಲಿ ಪ್ರಾರಂಭಿಸುವ ಗಾಂಧಿ ಭವನಕ್ಕೆ ಎಲ್ಲಾ ನೆರವು ನೀಡುವುದಾಗಿ ಭರವಸೆ ನೀಡಿದರು. ಶ್ರೀ ನಾರಾಯಣ ಸ್ವಾಮಿಯವರು ಗಾಂಧೀ ಭವನದ ಉದ್ಯಾನದ ಬಗ್ಗೆ ಕಿರು ಪರಿಚಯ ನೀಡಿದರು. ಐದು ಜನ ವಿದ್ಯಾರ್ಥಿಗಳು ಮಹಾತ್ಮರ ಬಗ್ಗೆ ಮಾತನಾಡಿದರು. ನಂತರ ಶಾಲಾ ಬಾಲಕಿಯರಿಂದ ನಡೆದ ನೃತ್ಯ ಪ್ರದರ್ಶನ ಹಾಗೂ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ಬಹು ಆಕರ್ಷಣೀಯವಾಗಿತ್ತು. ಅತಿಥಿಗಳಿಗೆ ಹಾಗೂ ಗಣ್ಯರಿಗೆ ಮಹಾತ್ಮರ ಕಿರು ಪ್ರತಿಮೆಗಳನ್ನು ಮತ್ತು ಮಹಾತ್ಮರ ಕೃತಿಗಳನ್ನು ಕಾರ್ಯಕ್ರಮದ ಸ್ಮರಣಾರ್ಥವಾಗಿ ನೀಡಲಾಯಿತು.

ಇದೇ ಸಂದರ್ಭದಲ್ಲಿ ನವೆಂಬರ್ 4ರಂದು ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಶ್ರೀ ವೇಮಗಲ್ ಸೋಮಶೇಖರ್, ಶ್ರೀ ಸಂತೆ ನಾರಾಯಣಸ್ವಾಮಿ ಮತ್ತು ಶ್ರೀ ಜಿ.ಬಿ.ಶಿವರಾಜು ಭಾಗವಹಿಸಿದ್ದರು. ಅವರನ್ನು ವೇದಿಕೆಗೆ ಆಹ್ವಾನಿಸಿ ಅಲ್ಲಿನ ಕನ್ನಡಿಗರು ಗೌರವಿಸಿದರು. ಶಿವರಾಜು ಮಾತನಾಡುತ್ತಾ ಅಲ್ಲಿನ ಕನ್ನಡಿಗರ ಭಾಷಾಭಿಮಾನ, ಅವರು ಆಚರಿಸಿದ ಅರ್ಥಪೂರ್ಣ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಅಭಿಮಾನ ವ್ಯಕ್ತಪಡಿಸಿದರು. ಮತ್ತು ದುಬೈನಲ್ಲಿ ಮರು ದಿವಸ ನಡೆಯುವ ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಆಹ್ವಾನವಿತ್ತರು. ಈ ಆಹ್ವಾನದ ಮೇರೆಗೆ ಬಹಳಷ್ಟು ಜನ ಅಬುದಾಬಿಯಿಂದ ದುಬೈಗೆ ಆಗಮಿಸಿದ್ದರು. ಕೊನೆಯ ದಿವಸವಾದ ದಿನಾಂಕ 6ರಂದು ಗಾಂಧಿ ಭವನದ ತಂಡ ಶಾರ್ಜಾ ನಗರಕ್ಕೂ ಭೇಟಿ ಅಲ್ಲಿನ ಕೃಷಿ ಕ್ಷೇತ್ರಗಳಿಗೆ ಭೇಟಿ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಪಪ್ರಥಮವಾಗಿ ಸಾಗರದಾಚೆಗೆ ನಡೆದ ಮಹಾತ್ಮ ಗಾಂಧಿಯವರ ಪ್ರತಿಮೆ ಅನಾವರಣ ಕಾರ್ಯಕ್ರಮ ಬಹು ವ್ಯವಸ್ಥಿತ ಹಾಗೂ ಅರ್ಥಪೂರ್ಣವಾಗಿ ನಡೆಯಿತು. ಇದಕ್ಕೆ ಮಾರ್ಗದರ್ಶನ ಮತ್ತು ನೆರವು ನೀಡಿದ ಬೆಂಗಳೂರು ಗಾಂಧಿ ಭವನದ ಅಧ್ಯಕ್ಷರಾದ ಡಾ॥ ಹೊ.ಶ್ರೀನಿವಾಸಯ್ಯ ಅವರು ಈ ದಿಶೆಯಲ್ಲಿ ತಳೆದ ಆಸಕ್ತಿ ಅನನ್ಯವಾದುದು.



# ಕಣ್ಮನ ಸೆಳೆಯುವ ಫಿಲೋಮಿನಾ ಚರ್ಚ್

ಪೃಥ್ವಿ ವಿ.ಜೆ.

ಅರಮನೆಗಳ ನಗರವೆಂದೇ ಖ್ಯಾತಿ ಪಡೆದಿರುವ ನಮ್ಮ ಹೆಮ್ಮೆಯ ಮೈಸೂರು ದೇಶದ ಪ್ರಸಿದ್ಧ ಚರ್ಚ್‌ಗಳ ಸಾಲಿನಲ್ಲಿರುವ ಸಂತ ಫಿಲೋಮಿನಾ ಚರ್ಚ್ ಅನ್ನು ತನ್ನಲ್ಲಿಟ್ಟುಕೊಂಡ ನಗರ.

ಈಗಿನ ರಾಜಧಾನಿ ಬೆಂಗಳೂರಿನಿಂದ ಹಿಂದಿನ ರಾಜಧಾನಿ ಮೈಸೂರಿಗೆ ಪ್ರವೇಶಿಸುವಾಗ ಆಗಸದೆತ್ತರಕ್ಕೆ ಎದ್ದುನಿಂತ ಉತ್ಕೃಷ್ಟ ವಾಸ್ತುಶೈಲಿಯ ಚರ್ಚ್ ಕಟ್ಟಡ ಸೂಜಿಗಲ್ಲಿನಂತೆ ಸೆಳೆಯುತ್ತದೆ.

ಗೊಥಿಕ್ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಸಂತ ಫಿಲೋಮಿನಾ ಚರ್ಚ್ ಎರಡು ಗೋಪುರಗಳ ಎತ್ತರ 165 ಅಡಿಗಳು. ಇದು ದಕ್ಷಿಣ ಭಾರತದ ಅತಿ ಎತ್ತರದ ಚರ್ಚ್ ಗೋಪುರ ಕೂಡ.

ಫಿಲೋಮಿನಾ ಗ್ರೀಕ್ ರಾಷ್ಟ್ರದ ಸಣ್ಣ ಸಂಸ್ಥಾನವೊಂದರ ಅರಸನ ಮಗಳು. ಕಾಲ ಕ್ರಿ.ಶ. 17ನೇ ಶತಮಾನದ ಆಸುಪಾಸು. ಫಿಲೋಮಿನಾ ಪೋಷಕರಿಗೆ ವಿವಾಹಾನಂತರ ಬಹಳ ಸಮಯ ಮಕ್ಕಳಾಗಿರಲಿಲ್ಲವಂತೆ, ಆಗವರು ಮಗುವಾದರೆ ತಮ್ಮ ಕ್ರೈಸ್ತ ಧರ್ಮದ ಸೇವೆಗೆ ಅದನ್ನು ನೀಡುವುದಾಗಿ ಹೇಳಿದ್ದರಂತೆ.

ಹೆಣ್ಣುಮಗುವಿಗೆ ರಾಜದಂಪತಿ ಜನ್ಮವಿತ್ತಾಗ ಅದಕ್ಕೆ ಫಿಲೋಮಿನಾ ಎಂದು ಹೆಸರಿಟ್ಟರು. ಇದು ಗ್ರೀಕ್ ಪದ. ಇದಕ್ಕೆ ಅರ್ಥ 'ಬೆಳಕಿನ ಪುತ್ರಿ'

ಸಂತೃಪ್ತ ಕುಟುಂಬದ ಆರೈಕೆಯಲ್ಲಿ ಫಿಲೋಮಿನಾ ಮುದ್ದುಮುದ್ದಾಗಿ ಬೆಳೆಯತೊಡಗಿದಳು. ಸೆಳೆಯುವಂತಹ ರೂಪವತಿ ಅನ್ನಿಸಿಕೊಂಡಳು. ಅಷ್ಟರಲ್ಲಾಗಲೇ ಆಕೆಯ ಒಲವು ಧರ್ಮದ ಕಡೆಗೆ ಸರಿದಿತ್ತು. ತಂದೆ–ತಾಯಿ ಹರಕೆ ಕೂಡ ಅದೇ ಆಗಿತ್ತು.

ಚಕ್ರವರ್ತಿ ಡಿಯೋಕ್ಲೇಷನ್ ರೋಮ್ ನಗರದ ರಾಜ. ರಾಜ ಮನೆತನದ ಸಮಾರಂಭವೊಂದರಲ್ಲಿ ಫಿಲೋಮಿನಾಳನ್ನು ನೋಡಿದ ಡಿಯೋಕ್ಲೇಷನ್ ರಾಜ ಆಕೆಯನ್ನು ಲಗ್ನವಾಗುವ ಇಚ್ಛೆ ವ್ಯಕ್ತಪಡಿಸಿದ. ಆದರೆ ಆ





ವೇಳೆಗಾಗಲೇ ಫಿಲೋಮಿನಾ ಕ್ರೈಸ್ತ ಧರ್ಮದ ಸನ್ಯಾಸಿಯಾಗಲು ನಿರ್ಧಾರ ಮಾಡಿಯಾಗಿತ್ತು. ರಾಜ ಪಟ್ಟು ಬಿಡಲಿಲ್ಲ. ಫಿಲೋಮಿನಾ ತಂದೆ–ತಾಯಿ ಕೂಡ ಮಗಳ ಮನಸ್ಸು ಬದಲಿಸಲು ಮಾಡಿದ ಪ್ರಯತ್ನಗಳು ಫಲ ಕೊಡಲಿಲ್ಲ.

ನಂಬಿದ ಧರ್ಮಕ್ಕಾಗಿ ತಲೆಕೊಟ್ಟ ಫಿಲೋಮಿನಾ ಕುರಿತು ಚರ್ಚೆ ಮೊದಲಾಯಿತು. ಆಕೆಯ ಧರ್ಮನಿಷ್ಠೆಯನ್ನು ಮೆಚ್ಚದವರೇ ಇರಲಿಲ್ಲ. ಆಕೆಯ ನೆನಪಿನಲ್ಲಿ ದೇಗುಲವೊಂದು ರೋಮ್‌ನಗರದಲ್ಲಿ ನಿರ್ಮಿಸುವ ಮಟ್ಟಕ್ಕೆ ಫಿಲೋಮಿನಾ ಮನೆಮಾತಾದಳು.

ಆಗ ಬ್ರಿಟಿಷರ ಆಡಳಿತ ಕಾಲ. ಕ್ರೈಸ್ತ ಧರ್ಮ ಪ್ರಚಾರವೂ ಭಾರತದಲ್ಲಿ ನಡೆದಿತ್ತು. ಅನೇಕರು ಈ ಧರ್ಮದ ಅನುಯಾಯಿಗಳಾಗುತ್ತಿದ್ದರು. ಮೈಸೂರು ಮಹಾರಾಜರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ತಂಬೂಚೆಟ್ಟಿಯವರ ಕಿವಿಗೂ ಫಿಲೋಮಿನಾ ಖ್ಯಾತಿ ಬಿತ್ತು. ಆಕೆಯ ಭಕ್ತಿ ವಿಚಾರ ತಿಳಿದವು. ಸರ್ವಜನಾಂಗದ ಶಾಂತಿಯ ತೋಟವಾಗಿದ್ದ ಈ ನೆಲದಲ್ಲಿ ಸಂತ ಫಿಲೋಮಿನಾ ಸ್ಮರಣೆಗಾಗಿ ಮಹಾರಾಜರು ಸಮ್ಮತಿ ಕೊಟ್ಟರು.

ರೋಮ್‌ನಿಂದ ಫಿಲೋಮಿನಾ ಪವಿತ್ರಾವಶೇಷಗಳನ್ನು ಮೈಸೂರಿಗೆ ತರಲಾಯಿತು. ಫ್ರಾನ್ಸ್‌ನಿಂದ ಆಕೆಯ ಪ್ರತಿಮೆ ಬಂತು. 1933ರಲ್ಲಿ ಸಂತರ ದೇವಾಲಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಲಾನ್ಯಾಸ ನೆರವೇರಿಸಿದರು. 1941ರಲ್ಲಿ ದೇಗುಲದ ಉದ್ಘಾಟನೆಯೂ ನಡೆಯಿತು. ನಾಲ್ವಡಿಗಳು ಚರ್ಚ್‌ಗೆ ಚಿತ್ತಾಕರ್ಷಕ ಚಿತ್ರಕಲೆಯುಳ್ಳ ಲೋಹದ ಬಾಗಿಲನ್ನು ಕೊಡುಗೆಯಾಗಿ ಕೊಟ್ಟರು.

ಶಿಲುಬೆಯಾಕಾರದ ತಳಹದಿಯ ಮೇಲೆ ನಿರ್ಮಾಣಗೊಂಡಿರುವ ಈ ಚರ್ಚ್ ಕಡುಬೂದು ಬಣ್ಣದ

**ಕ್ರೈಸ್ತಧರ್ಮದ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಸಂತ ಫಿಲೋಮಿನಾ ಚರ್ಚ್ ವಿಶಿಷ್ಟವಾದ ಕಟ್ಟಡ. ಪ್ರತಿ ಹಂತದಲ್ಲೂ ಶಿಲ್ಪಿಗಳ ಕುಸುರಿ ಕೆಲಸ, ಅವರ ಕೈ ಚಮತ್ಕಾರವನ್ನು ಚರ್ಚ್ ಪ್ರತಿಬಿಂಬಿಸುತ್ತದೆ.**


ಗ್ರಾನೈಟ್ ಶಿಲೆಯಿಂದ ಕೂಡಿದೆ. ನ್ಯೂಯಾರ್ಕ್ ಹಾಗೂ ಜರ್ಮನಿಯ ಚರ್ಚ್‌ಗಳ ಮಾದರಿಯಂತೆ ಕಟ್ಟಲಾದ ಕಟ್ಟಡದ ಕಿಟಕಿ ಬಾಗಿಲುಗಳೂ ವಿಶೇಷ ಆಕರ್ಷಣೆ. ಫಳಫಳನೆ ಹೊಳೆಯುವಂತಿರುವ ಸಾಲು ಪಟ್ಟಿಕೆಯಲ್ಲಿ ಹೂ, ಬಳ್ಳಿ, ಫಲಪುಷ್ಪಗಳು ಕಂಗೊಳಿಸುತ್ತವೆ.

ಕ್ರೈಸ್ತ ಧರ್ಮದ ಹುಟ್ಟು ಬೆಳವಣಿಗೆ, ಕ್ರಿಸ್ತನ ಬದುಕಿನ ಏರಿಳಿತಗಳು ಸುಂದರವಾಗಿ ನಿರೂಪಿತವಾಗಿರುವ ಚರ್ಚ್‌ನ ಒಳಗೋಡೆಗಳ ಭವ್ಯ ಹಿನ್ನೆಲೆಯಲ್ಲಿ ಸುಂದರ, ಸೌಮ್ಯ ಹಾಗೂ ವಿರಾಗಿಣಿ ಸಂತ ಫಿಲೋಮಿನಾ ಅವರ ಪ್ರತಿಮೆ ನೆಲೆಗೊಂಡಿದೆ. ನೆಲಮಾಳಿಗೆಯಲ್ಲಿ ಸಂತರ ಪವಿತ್ರಾವಶೇಷಗಳಿವೆ. ಎರಡೂ ಭಾಗಗಳಲ್ಲಿರುವ ಗವಿಗಳು ಕ್ರಿಸ್ತನ ಮಾತೆ ಮೇರಿಯನ್ನು ಸ್ಮರಿಸುವ ಮಾದರಿಯಲ್ಲಿ ಅವು ನಿರ್ಮಾಣಗೊಂಡಿವೆ.

ಕ್ರೈಸ್ತಧರ್ಮದ ಸಂಕ್ಷಿಪ್ತ ಪರಿಚಯ ಮಾಡಿಕೊಡುವ ಸಂತ ಫಿಲೋಮಿನಾ ಚರ್ಚ್ ವಿಶಿಷ್ಟವಾದ ಕಟ್ಟಡ. ಪ್ರತಿ ಹಂತದಲ್ಲೂ ಶಿಲ್ಪಿಗಳ ಕುಸುರಿ ಕೆಲಸ, ಅವರ ಕೈ ಚಮತ್ಕಾರವನ್ನು ಚರ್ಚ್ ಪ್ರತಿಬಿಂಬಿಸುತ್ತದೆ.

ಒಮ್ಮೆಗೆ ಒಂದು ಸಾವಿರ ಮಂದಿ ಕುಳಿತು ಪ್ರಾರ್ಥನೆ ಮಾಡಬಹುದಾದ ವಿಶಾಲ ಸಭಾಂಗಣವಿರುವ ಈ ಚರ್ಚ್ ಸದಾ ಪ್ರವಾಸಿಗರನ್ನು ಸೆಳೆಯುವ ಕಟ್ಟಡ. ಯೂರೋಪಿನಲ್ಲಿ ಧರ್ಮನಿಷ್ಠೆಯ ಪ್ರತೀಕವಾಗಿ ಗುರುತಿಸಲ್ಪಡುವ ಸಂತ ಫಿಲೋಮಿನಾ ನಮ್ಮ ನಾಡಿನಲ್ಲಿ ನೆಲೆಸುವುದರ ಜೊತೆಗೆ ನಮ್ಮ ನೆಲದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಸ್ಮಾರಕವಾಗಿಯೂ ಗಮನ ಸೆಳೆಯುವಂತಾಗಿದೆ.

ಆರೂವರೆ ದಶಕಗಳಿಂದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಐತಿಹಾಸಿಕ ಕಟ್ಟಡಗಳಲ್ಲಿ ಒಂದೆನ್ನಿಸಿಕೊಂಡಿರುವ ಸಂತ ಫಿಲೋಮಿನಾ ಚರ್ಚ್ ಆಸ್ತಿಕರಿಗೆ, ಪ್ರವಾಸಿಗರಿಗೆ ಆಕರ್ಷಕ ತಾಣ.



# ಬಲು ಅಪರೂಪ ಇಂಥ ಸರ್ಕಾರಿ ಶಾಲೆ

ಬಿ. ರೇಣುಕೇಶ್

'**ಪ್ರ**ತಿನಿತ್ಯದ ಪ್ರಾರ್ಥನೆ ವೇಳೆ ಭಗವದ್ಗೀತೆ, ಕುರಾನ್, ಬೈಬಲ್ ಧರ್ಮಗ್ರಂಥಗಳ ಪಠಣ ಮಾಡುವ ವಿದ್ಯಾರ್ಥಿಗಳು... ಕಟ್ಟಡದ ಪ್ರತಿ ದಿಕ್ಕಿನಲ್ಲಿಯೂ ಮಹಾತ್ಮರ ಸಂದೇಶಗಳ ಸಾಲು... ಶಾಲೆಯ ಮುಂಭಾಗದಲ್ಲಿ ಅಪರೂಪದ ಔಷಧೀಯ ಗಿಡ ವನ... ಕೈದೋಟ... ಬಾಲವನ... ಸೋಲಾರ್ ಆಧಾರಿತ ನೀರಿನ ಪಂಪ್... ಮುಕ್ತ ಗ್ರಂಥಾಲಯ...

ಮೀನು ಸಾಕಾಣಿಕೆ ಕೊಳ... ಮಕ್ಕಳಿಗೆ ಸೇವಿಂಗ್ ಬ್ಯಾಂಕ್ ಸೌಲಭ್ಯ... ಬಿಸಿ ನೀರಿನ ವ್ಯವಸ್ಥೆ... ಜಾರು ಬಂಡಿ... ಜೋಕಾಲಿ... ಪ್ಲಾಸ್ಟಿಕ್ ಬಾಟಲಿಯಲ್ಲಿ ಗಿಡ ಬೆಳೆಸುವುದು... ಪ್ರತಿಯೋರ್ವ ವಿದ್ಯಾರ್ಥಿಯ ಬಳಿಯು ಸೋಲಾರ್ ಲ್ಯಾಂಪ್... ಮಕ್ಕಳಿಗೆ ಗುಣಾತ್ಮಕ ಶಿಕ್ಷಣದ ವ್ಯವಸ್ಥೆ ಸೇರಿದಂತೆ ಹತ್ತು ಹಲವು ವಿನೂತನ ವ್ಯವಸ್ಥೆಗಳ ಅಳವಡಿಕೆ...!'

ಅಬ್ಬಬ್ಬಾ... ಇದ್ಯಾವುದಪ್ಪ ಹೈಟೆಕ್ ಶಾಲೆ ಎಂದು ಹುಬ್ಬೇರಿಸಬೇಡಿ...! ಇದು ಶಿವಮೊಗ್ಗ ಜಿಲ್ಲೆ ಹೊಸನಗರ



**ಶಿಕ್ಷಕರಿಬ್ಬರ ಈ ಶ್ರಮಕ್ಕೆ ಇಡೀ ಗ್ರಾಮಸ್ಥರು ಹಾಗೂ ಶಾಲಾಭಿವೃದ್ಧಿ ಸಮಿತಿಯವರು ಬೆಂಗಾವಲಾಗಿ ನಿಂತಿದ್ದಾರೆ. ಎಲ್ಲ ರೀತಿಯ ಸಹಕಾರ ಕೊಟ್ಟಿದ್ದಾರೆ. ಇದರಿಂದ ಕಳೆದ ನಾಲ್ಕು ವರ್ಷಗಳಲ್ಲಿ ಇಡೀ ಶಾಲೆಯ ಚಿತ್ರಣವೇ ಬದಲಾಗಿದೆ.**






ತಾಲೂಕಿನ ಮಾರುತಿಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನೀರೇರಿ ಎಂಬ ಕುಗ್ರಾಮದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿರುವ ಸೌಲಭ್ಯಗಳ ಪ್ರಮುಖ ಹೈಲೈಟ್ಸ್‌ಗಳು...

ಹೌದು. ಇದು ಸತ್ಯ! ನಂಬಲೇಬೇಕಾದ ಸಂಗತಿಯೂ ಕೂಡ. ಪ್ರಸ್ತುತ ಮಕ್ಕಳ ಕೊರತೆ, ಖಾಸಗಿ ಶಾಲೆಗಳ ಹಾವಳಿ, ಇಂಗ್ಲಿಷ್ ಭಾಷೆಯ ಕ್ರೇಜ್‌ನಿಂದ ಈಗಾಗಲೇ ರಾಜ್ಯದ ನೂರಾರು ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಬಾಗಿಲು ಮುಚ್ಚಿವೆ. ಮತ್ತೆ ನೂರಾರು ಶಾಲೆಗಳು ಇದೇ ಹಾದಿಯಲ್ಲಿವೆ.

ಇಷ್ಟೆಲ್ಲದರ ನಡುವೆಯೂ ನೀರೇರಿ ಎಂಬ ಕುಗ್ರಾಮದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ರಾಷ್ಟ್ರೀಯ–ಅಂತಾರಾಷ್ಟ್ರೀಯ ಮಟ್ಟದ ಹೈಟೆಕ್ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡುವ ಮೂಲಕ, ಸದ್ದಿಲ್ಲದೆ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಗೆ ನಾಂದಿ ಹಾಡಿದೆ. ಎಲ್ಲರ ಹುಬ್ಬೇರುವಂತೆ ಮಾಡಿದೆ.

**ಎಲ್ಲಿದೆ ಶಾಲೆ?** : ಹೊಸನಗರ ತಾಲೂಕು ಕೇಂದ್ರದಿಂದ 16 ಕಿ.ಮೀ. ದೂರದಲ್ಲಿ, ಹೊಸನಗರ–ಸಾಗರ ಮುಖ್ಯ ರಸ್ತೆಯಿಂದ 3 ಕಿ.ಮೀ. ಒಳಭಾಗದಲ್ಲಿ ನೀರೇರಿ ಗ್ರಾಮವಿದೆ. ಸರಿಸುಮಾರು 40 ಮನೆಗಳಿವೆ. ಈ ಗ್ರಾಮದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯೇ ಇಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕಿರುವ ಏಕೈಕ ಶಾಲೆಯಾಗಿದೆ. 1 ರಿಂದ 5 ನೇ ತರಗತಿಯವರೆಗೆ 27



**ಏನಾದರೂ ಹೊಸತು ಸಾಧಿಸಬೇಕೆಂಬ ಹಂಬಲದಿಂದ ಶಾಲೆಯನ್ನು ವಿಭಿನ್ನವಾಗಿ ರೂಪಿಸುವ ಚಿಂತನೆ ನಡೆಸಿದೆವು. ಇದರ ಪರಿಶ್ರಮದಿಂದ ಹತ್ತು ಹಲವು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಶಾಲೆಯಲ್ಲಿ ರೂಪುಗೊಂಡಿವೆ.**

ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಈರ್ವರು ಶಿಕ್ಷಕರು ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ.

**ಮಾದರಿ ಶಿಕ್ಷಕರು:** ಈ ಶಾಲೆಯಲ್ಲಿ ಕಾರ್ಯನಿರ್ವಹಣೆ ಮಾಡುತ್ತಿರುವ ಎಂ.ಎನ್.ಗಜಾನನ ಹಾಗೂ ಹೆಚ್.ಶೃತಿ ಎಂಬ ಶಿಕ್ಷಕರ ಸೃಜನಶೀಲತೆ, ವಿಭಿನ್ನ ಆಲೋಚನೆ, ಚಿಂತನೆಯಿಂದ ಪ್ರಸ್ತುತ ನೀರೇರಿ ಗ್ರಾಮದ ಶಾಲೆಯು ಇಡೀ ರಾಜ್ಯಕ್ಕೆ ಮಾತ್ರವಲ್ಲದೆ, ರಾಷ್ಟ್ರಕ್ಕೆ ಮಾದರಿಯಾಗಿ ನಿಲ್ಲುವಂತಾಗಿದೆ. ಓರ್ವ ಶಿಕ್ಷಕ ಮನಸ್ಸು ಮಾಡಿದರೇ ಶಾಲೆಯಲ್ಲಿ ಹಾಗೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಏನೆಲ್ಲ ಬದಲಾವಣೆ ತರಬಹುದು ಎಂಬುವುದಕ್ಕೆ ಈ ಇಬ್ಬರು ಶಿಕ್ಷಕರು ನಿದರ್ಶನವಾಗಿ ನಿಂತಿದ್ದಾರೆ.





ಶಿಕ್ಷಕರಿಬ್ಬರ ಈ ಶ್ರಮಕ್ಕೆ ಇಡೀ ಗ್ರಾಮಸ್ಥರು ಹಾಗೂ ಶಾಲಾಭಿವೃದ್ಧಿ ಸಮಿತಿಯವರು ಬೆಂಗಾವಲಾಗಿ ನಿಂತಿದ್ದಾರೆ. ಎಲ್ಲ ರೀತಿಯ ಸಹಕಾರ ಕೊಟ್ಟಿದ್ದಾರೆ. ಇದರಿಂದ ಕಳೆದ ನಾಲ್ಕು ವರ್ಷಗಳಲ್ಲಿ ಇಡೀ ಶಾಲೆಯ ಚಿತ್ರಣವೇ ಬದಲಾಗಿದೆ. ಇತರೆ ಸರ್ಕಾರಿ ಶಾಲೆಗಳಿಗೆ ಮಾದರಿಯಾಗಿದ್ದು, ಗ್ರಾಮೀಣ ಭಾಗದ ಬಡ-ಕೂಲಿಕಾರ್ಮಿಕರ ಮಕ್ಕಳು ನಲಿನಲಿಯುತ್ತಾ ಶಿಕ್ಷಣ ಕಲಿಯುತ್ತಿದ್ದಾರೆ.

**ಜೀವನ ಪಾಠ:** ಮಕ್ಕಳ ವ್ಯಕ್ತಿತ್ವದ ಸರ್ವಾಂಗೀಣ ಬೆಳವಣಿಗೆಯೇ ಶಿಕ್ಷಣದ ಮುಖ್ಯೋದ್ದೇಶವಾಗಿದೆ. ನೀರೇರೆ ಶಾಲೆಯಲ್ಲಿ ಮಕ್ಕಳು ಗುಣಮಟ್ಟದ ಶಿಕ್ಷಣದ ಜೊತೆ ಜೊತೆಗೆ ಜೀವನ ಪಾಠವನ್ನು ಕಲಿಯುತ್ತಿದ್ದಾರೆ. ಕಲೆ, ಸಂಸ್ಕೃತಿ, ಕ್ರೀಡೆ, ಮನರಂಜನೆ, ಆಟೋಟ, ಇಂಗ್ಲಿಷ್ ಭಾಷಾ ಕಲಿಕೆ, ಕಂಪ್ಯೂಟರ್ ಕಲಿಕೆ, ಧರ್ಮಗ್ರಂಥಗಳ ಅರಿವು, ಸ್ವಯಂ ಉದ್ಯೋಗದ ಮಾಹಿತಿ, ಹಣ ಉಳಿತಾಯದ ಮಹತ್ವ ಸೇರಿದಂತೆ ಪ್ರತಿನಿತ್ಯ ಹತ್ತು ಹಲವು ರೀತಿಯ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಂತಸದಿಂದ ಭಾಗಿಯಾಗುವುದು ಕಂಡುಬರುತ್ತದೆ. ಶಾಲೆಗೆ 'ಪರಿಸರ ಮಿತ್ರ' ಹಾಗೂ 'ಧನ್ವಂತರಿ'ಯಂತಹ ಮಹತ್ವದ ಪ್ರಶಸ್ತಿಗಳು ಬಂದಿವೆ.



**ಜನ ಮೆಚ್ಚಲೇಬೇಕಾದ ಶಿಕ್ಷಕರಿವರು...**

'ಪ್ರಸ್ತುತ ಗ್ರಾಮದ ಸರ್ಕಾರಿ ಶಾಲೆಯು ಮಾದರಿಯಾಗಿ ರೂಪುಗೊಳ್ಳುವಲ್ಲಿ ಶಾಲೆಯ ಶಿಕ್ಷಕರಾದ ಗಜಾನನ ಹಾಗೂ ಶೃತಿಯವರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಈರ್ವರು ಶಿಕ್ಷಕರ ನಿಸ್ವಾರ್ಥ ಸೇವೆ, ಅವಿರತ ಶ್ರಮ, ಮಕ್ಕಳ ಭವಿಷ್ಯದ ಬಗ್ಗೆಯಿರುವ ಕಾಳಜಿಯಿಂದ ಪ್ರಸ್ತುತ ಶಾಲೆಯು ವಿಭಿನ್ನವಾಗಿ ರೂಪುಗೊಳ್ಳಲು ಮುಖ್ಯ ಕಾರಣವಾಗಿದೆ. ಹಾಗೆಯೇ ಶಾಲಾಭಿವೃದ್ಧಿ ಸಮಿತಿ ಹಾಗೂ ಗ್ರಾಮಸ್ಥರ ನೆರವು ಕೂಡ ಶಾಲೆಯು ಮಾದರಿಯಾಗಿ ಅಭಿವೃದ್ಧಿ ಹೊಂದಲು ಕಾರಣಗಳಲ್ಲೊಂದಾಗಿದೆ' ಎಂದು ನೀರೇರೆ ಗ್ರಾಮಸ್ಥರು ಅಭಿಪ್ರಾಯಪಡುತ್ತಾರೆ.

**ಬ್ಯಾಂಕ್ ಖಾತೆ:** ಈ ಶಾಲೆಯಲ್ಲಿರುವ ಪ್ರತಿಯೋರ್ವ ವಿದ್ಯಾರ್ಥಿಗೂ ಬ್ಯಾಂಕ್ ಖಾತೆ ತೆರೆಯಲಾಗಿದೆ. ಪೋಷಕರು ನೀಡುವ ಒಂದು, ಎರಡು ರೂ.ಗಳನ್ನು ವಿದ್ಯಾರ್ಥಿಗಳು ಶಾಲೆಯ ಶಿಕ್ಷಕರಿಗೆ ನೀಡುತ್ತಾರೆ. ಶಿಕ್ಷಕರು ಪ್ರತಿ ವಾರ ಆ ಹಣವನ್ನು ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವ ಕೆಲಸ ಮಾಡುತ್ತಿದ್ದಾರೆ. ಈ ಮೂಲಕ ಚಿಕ್ಕ ವಯಸ್ಸಿನಿಂದಲೇ ವಿದ್ಯಾರ್ಥಿಗಳಲ್ಲಿ ಉತ್ತಮ ಹವ್ಯಾಸ ರೂಪಿಸುವ ಕೆಲಸವನ್ನು ಶಿಕ್ಷಕರು ಮಾಡುತ್ತಿದ್ದಾರೆ.

**ಸರ್ವರ ಸಹಕಾರದಿಂದ ಅಭಿವೃದ್ಧಿ : ಶಿಕ್ಷಕರ ಅಭಿಮತ**

'ಏನಾದರೂ ಹೊಸತು ಸಾಧಿಸಬೇಕೆಂಬ ಹಂಬಲದಿಂದ ಶಾಲೆಯನ್ನು ವಿಭಿನ್ನವಾಗಿ ರೂಪಿಸುವ ಚಿಂತನೆ ನಡೆಸಿದೆವು. ಇದರ ಪರಿಶ್ರಮದಿಂದ ಹತ್ತು ಹಲವು ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳು ಶಾಲೆಯಲ್ಲಿ ರೂಪುಗೊಂಡಿವೆ. ಇದಕ್ಕೆ ಶಾಲಾಭಿವೃದ್ಧಿ ಸಮಿತಿ, ಗ್ರಾಮಸ್ಥರು, ಇಲಾಖೆಯ ಅಧಿಕಾರಿಗಳು ತುಂಬು ಹೃದಯದ ಸಹಕಾರ ನೀಡಿದ್ದಾರೆ' ಎಂದು ಶಾಲೆಯ ಶಿಕ್ಷಕರಾದ ಎಂ.ಎನ್.ಗಜಾನನ ಹಾಗೂ ಹೆಚ್.ಶೃತಿ ಅಭಿಪ್ರಾಯಪಡುತ್ತಾರೆ. ■



"ಸರ್ಕಾರಿ ಶಾಲೆಗಳು ಜನಸಾಮಾನ್ಯರ ಜ್ಞಾನಮಂದಿರ. ಅವುಗಳನ್ನು ಉಳಿಸಿ ಬೆಳೆಸುವ ಕೆಲಸವನ್ನು ಸರ್ಕಾರ ಮತ್ತು ಸಮಾಜ ಮಾಡದಿದ್ದರೆ ಶಿಕ್ಷಣ ಬಲಿಷ್ಟರ ಪಾಲಾಗಿಬಿಡುತ್ತದೆ"

– ರಾಷ್ಟ್ರೀಯ ಶಿಕ್ಷಣ ಆಯೋಗ

# ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಯಶೋಗಾಥೆ

ಬಲ್ಲೇನಹಳ್ಳಿ ಮಂಜುನಾಥ್

**ಖಾ**ಸಗಿ ಶಾಲೆಗಳ ಭರಾಟೆಯಲ್ಲಿ ಸರ್ಕಾರಿ ಶಾಲೆಗಳ ಸ್ಥಿತಿ ಗತಿ ಕೆಲವೊಮ್ಮೆ ಆತಂಕ ಮೂಡಿಸುವುದು ಸಹಜ. ಅದರ ನಡುವೆ ಅಲ್ಲಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸುವ ತಣ್ಣನೆಯ ಕೆಲಸಗಳು ನಡೆಯುತ್ತಿದ್ದು ಅಂತಹದೊಂದು ಶ್ಲಾಘನೀಯ ಯತ್ನ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ (ಕೆ.ಆರ್.ಪೇಟೆ)ಯಲ್ಲಿ ನಡೆದಿದೆ. ಶತಮಾನದ ಇತಿಹಾಸವುಳ್ಳ ಈ ಶಾಲೆ ಗುಣಮಟ್ಟದ ಶಿಕ್ಷಣದ ಮೂಲಕ ಬಡವರು ಮತ್ತು ಮಧ್ಯಮವರ್ಗದ ಜನರನ್ನು ತನ್ನತ್ತ ಸೆಳೆದಿದೆ.

ನೂರು ವರ್ಷ ಪೂರೈಸಿರುವ ಕೆ.ಆರ್.ಪೇಟೆ ತಾಲ್ಲೂಕಿನ ಸರ್ಕಾರಿ ಶಾಲೆ ಈ ಶೈಕ್ಷಣಿಕ ಸಾಲಿನಲ್ಲಿ ಖಾಸಗಿ ಶಾಲೆಗಳನ್ನು ಮೀರಿಸುವಷ್ಟು ಬೆಳೆದಿದೆ. ಅಚ್ಚರಿಯ ದಾಖಲಾತಿ ಈ ಶಾಲೆಗೆ! ಗಣ್ಯರ ಒತ್ತಡಗಳನ್ನು ತಾಳಲಾರದೆ 'ಪ್ರವೇಶ ದಾಖಲಾತಿ ಮುಗಿದಿದೆ' ಎಂದು ಫಲಕವನ್ನು ಶಾಲೆಯ ಮುಂದೆ ಹಾಕುವಷ್ಟರ ಮಟ್ಟಿಗೆ ಎಂದರೆ ಊಹಿಸಿಕೊಳ್ಳಿ. ಬರೋಬ್ಬರಿ 600ಕ್ಕೂ ಹೆಚ್ಚು ಮಕ್ಕಳು ಎಲ್ ಕೆಜಿ ಯಿಂದ ಏಳನೇ ತರಗತಿಯವರೆವಿಗೆ ಇಲ್ಲಿ ಕಲಿಯುತಿದ್ದು ಮಂಡ್ಯ ಜಿಲ್ಲೆ ಮಾತ್ರವಲ್ಲದೆ ಇಡೀ ರಾಜ್ಯದ ಗಮನ ಸೆಳೆದಿದೆ. ಪ್ರಾಯಶಃ ದಾಖಲಾತಿ ಮುಗಿದಿದೆ ಎಂದು ಸರ್ಕಾರಿ ಶಾಲೆಯಲ್ಲಿ ಬೋರ್ಡ್ ಹಾಕಿದ್ದು ರಾಜ್ಯದಲ್ಲಿಯೇ ಪ್ರಥಮ ಇದ್ದಿರಬಹದು!





116 ವರ್ಷಗಳ ಹಿಂದೆ ಅಂದರೆ 1910ರಲ್ಲಿ ಈ ಶಾಲೆ ಸ್ಥಾಪನೆಯಾಗಿದೆ. ಪಾಂಡವಪುರ ಉಪವಿಭಾಗಾಧಿಕಾರಿಯಾಗಿದ್ದ ಈಗ ಹಾಸನದಲ್ಲಿರುವ ಡಾ.ಹೆಚ್.ಎಲ್.ನಾಗರಾಜು ಅವರ ವಿಶೇಷದ ಕಾಳಜಿಯಿಂದ ತಾಲ್ಲೂಕಿನ ಸಮಾನ ಮನಸ್ಕ ಶಿಕ್ಷಣ ಪ್ರೇಮಿಗಳು ಸರ್ಕಾರಿ ಶಾಲೆಯನ್ನು ಉಳಿಸಿಕೊಳ್ಳಲು ವಿಶೇಷ ಆಸಕ್ತಿ ವಹಿಸಿದ ಪರಿಣಾಮ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಈ ಶಾಲೆಯಲ್ಲಿ ಈಗ ಎಲ್.ಕೆ.ಜಿ ಯಿಂದಲೇ ಮಕ್ಕಳ ಕಲರವ ಆರಂಭವಾಗಿದೆ.

2014–15ನೇ ಸಾಲಿನಲ್ಲಿ ಕೇವಲ 131 ವಿದ್ಯಾರ್ಥಿಗಳಿದ್ದ ಇಲ್ಲಿ 2016–17 ನೇ ಸಾಲಿನಲ್ಲಿ 612 ಕ್ಕೂ ಹೆಚ್ಚು ಮಕ್ಕಳು ಇದ್ದಾರೆಂದರೆ ಯಾವ ಜಾದೂ ನಡೆದಿರಬಹುದು ಊಹಿಸಿ,

2015–16 ರಲ್ಲಿ 508 ವಿದ್ಯಾರ್ಥಿಗಳಿದ್ದರು. ಈ ಬಾರಿ ಎಲ್.ಕೆ.ಜಿ, ಯು.ಕೆ.ಜಿ ತರಗತಿಗೆ ಕೇವಲ ಮೂರೇ ದಿನಕ್ಕೆ 236 ಮಕ್ಕಳು ದಾಖಲಾತಿಯಾಗುವ ಮೂಲಕ ಗಮನಸೆಳೆಯಿತು. ಒಟ್ಟಾರೆ ಎಲ್.ಕೆ.ಜಿ ಇಂದ 7 ನೇ ತರಗತಿಯವರೆವಿಗೆ ಶಾಲೆಯಲ್ಲಿ 612 ಕ್ಕೂ ಹೆಚ್ಚು ಮಕ್ಕಳು ಈಗ ಕಲಿಯುತಿದ್ದಾರೆ ಎಂಬುದೇ ಗಮನಾರ್ಹ





ವಿಚಾರವಾಗಿದೆ. ಅಲ್ಲದೇ ಒಂದನೇ ತರಗತಿಗೆ 96 ಮಕ್ಕಳು ಈ ಸಾಲಿನಲ್ಲಿ ದಾಖಲಾಗಿರುವದು ಇಡೀ ರಾಜ್ಯದಲ್ಲಿ ಒಂದನೇ ತರಗತಿಗೆ ಸೇರಿದ ಮಕ್ಕಳಲ್ಲಿ ದಾಖಲೆಯ ಸಂಖ್ಯೆ ಯಾಗಿದೆ. 2013–14 ರಲ್ಲಿ ಒಂದನೇ ತರಗತಿಗೆ 14 ಮತ್ತು 2015–16 ರಲ್ಲಿ 59 ಮಕ್ಕಳು ದಾಖಲಾಗಿದ್ದವು. ಶಾಲೆಯ ಈ ಸಾಧನೆಯನ್ನು ಗಮನಿಸಿ ಸರ್ಕಾರ 2016 ನೇ ಸಾಲಿನ ಮಂಡ್ಯ ಜಿಲ್ಲೆಯ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವದು ಸಂತಸದ ವಾತವರಣ ವನ್ನು ಮೂಡಿಸಿದೆ.

**ಹೇಗೆ ಸಾಧ್ಯವಾಯಿತು?:**

ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ಮಾಡುತ್ತಿದ್ದ ಇಲ್ಲಿನ ಶಿಕ್ಷಣ ಪ್ರೇಮಿಗಳ ಸಹಕಾರದೊಂದಿಗೆ ಈ ಶಾಲೆಯಲ್ಲಿ ಕಲಿತು ಉನ್ನತ ಸ್ಥಾನದಲ್ಲಿರುವವರೂ ಸೇರಿದಂತೆ ಎಲ್ಲಾ ಹಳೆಯ ವಿದ್ಯಾರ್ಥಿಗಳನ್ನು ಒಗ್ಗೂಡಿಸಿ ಅವರೊಂದಿಗೆ ಹಲವು ಬಾರಿ ಸಭೆ ನಡೆಸಲಾಯಿತು.

ಅವರಿಂದ ಸರ್ಕಾರಿ ಶಾಲೆಯನ್ನು ಉಳಿಸುವ ಪ್ರತಿಜ್ಞೆ ಮಾಡಿಸಿದ್ದಲ್ಲದೆ ಅವರಾಗಿಯೇ ತಾವು ಓದಿದ ಶಾಲೆಗೆ ಯಾವ ರೀತಿ ಸಹಾಯ ಮಾಡಬಹುದೆಂಬುದನ್ನು ಅವರ ಬಾಯಿಯಲ್ಲಿಯೇ ಹೇಳಿಸಲಾಯಿತು. ಅವರು ಕೊಟ್ಟ ಮಾತನ್ನು ಕಾರ್ಯರೂಪಕ್ಕೆ ತರಲು ಅವರುಗಳನ್ನೇ ಒಳಗೊಂಡ ಸಮಿತಿ ರಚಿಸಲಾಯಿತು. ಪರಿಣಾಮ ಮಾತು ಕೊಟ್ಟವರೆಲ್ಲಾ ಸಹಾಯ ಮಾಡಿದರು. ಶಾಲೆಗೆ ಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳು ದಕ್ಕಿದವು. ಮೊದಲು ಸರ್ಕಾರಿ ನೌಕರರ ಮಕ್ಕಳನ್ನೇ ಗುರಿ ಮಾಡಲಾಯಿತು ಶಾಲೆಗೆ ಆ ಮಕ್ಕಳನ್ನು ದಾಖಲು ಮಾಡಿಸುವ ಮೂಲಕ ಜನಸಾಮಾನ್ಯರಲ್ಲಿ ಸರ್ಕಾರಿ ನೌಕರರ



**ಮಕ್ಕಳ ಮನೆಯ ಪರಿಕಲ್ಪನೆ ಜಾರಿ ಮಾಡಿದ್ದರಿಂದ ಖಾಸಗಿ ಶಾಲೆಗಳಲ್ಲಿರುವಂತೆ ಎಲ್.ಕೆ.ಜಿ, ಯು.ಕೆ.ಜಿ ತರಗತಿಗಳನ್ನು ಆರಂಭಿಸಲಾಯಿತು. ಇದರೊಂದಿಗೆ ಇಂಗ್ಲೀಷ್ ಭಾಷೆಯ ಬೋಧನೆಯನ್ನೂ ಆರಂಭಿಸಲಾಯಿತು. ಉತ್ತಮ ಸಮವಸ್ತ್ರದೊಂದಿಗೆ ಬ್ಯಾಗ್,ಶೂ, ಪುಸ್ತಕ,ನೋಟ್ಸ್ ಗಳನ್ನು ಉಚಿತವಾಗಿ ನೀಡುವ ಕ್ರಮ ಜಾರಿ ಮಾಡಲಾಯಿತು.**




ಕೆ.ಆರ್.ಪೇಟೆ: ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೇವಲ ಮೂರೇ ದಿನಕ್ಕೆ ಸುಮಾರು 236ಹೊಸ ದಾಖಲಾತಿಯಾಗಿದ್ದು ಸರ್ಕಾರಿ ಶಾಲೆಯೊಂದರಲ್ಲಿ ದಾಖಲಾತಿ ಮುಗಿದಿದೆ ಎಂದು ನಾಮಫಲಕ ಹಾಕಿರುವುದು ಪ್ರಾಯಶಃ ರಾಜ್ಯದಲ್ಲಿಯೇ ಪ್ರಪ್ರಥಮ ಎನ್ನಲಾಗಿದೆ.



ಮಕ್ಕಳೇ ಶಾಲೆಗೆ ಸೇರಿಸಿದ್ದಾರೆ ನಮ್ಮದೇನು ಎಂಬ ಭಾವನೆ ಬರುವಂತಹ ವಾತಾವರಣವನ್ನು ಮೂಡಿಸಲಾಯಿತು. ಪರಿಣಾಮ ಮಕ್ಕಳ ದಾಖಲಾತಿ ಹೆಚ್ಚಾಗತೊಡಗಿತು. ಅಳಿವಿನಂಚಿನಲ್ಲಿದ್ದ ಶಾಲೆ ನಳ ನಳಿಸುವಂತಾಯಿತು.

ಮಕ್ಕಳ ಮನೆಯ ಪರಿಕಲ್ಪನೆ ಜಾರಿ ಮಾಡಿದ್ದರಿಂದ ಖಾಸಗಿ ಶಾಲೆಗಳಲ್ಲಿರುವಂತೆ ಎಲ್.ಕೆ.ಜಿ, ಯು.ಕೆ.ಜಿ ತರಗತಿಗಳನ್ನು ಆರಂಭಿಸಲಾಯಿತು. ಇದರೊಂದಿಗೆ ಇಂಗ್ಲೀಷ್ ಭಾಷೆಯ ಬೋಧನೆಯನ್ನೂ ಆರಂಭಿಸಲಾಯಿತು. ಉತ್ತಮ ಸಮವಸ್ತ್ರದೊಂದಿಗೆ ಬ್ಯಾಗ್,ಶೂ, ಪುಸ್ತಕ,ನೋಟ್ಸ್ ಗಳನ್ನು ಉಚಿತವಾಗಿ ನೀಡುವ ಕ್ರಮ ಜಾರಿ ಮಾಡಲಾಯಿತು.

ಇದರಿಂದಾಗಿ ಬಡವರ ಮಕ್ಕಳೊಂದಿಗೆ ಹಣವಂತರ ಮಕ್ಕಳೂ ಶಾಲೆಗೆ ಸೇರಿದವು. ವಿಷಯ ತಜ್ಞರುಗಳನ್ನು ಗುಣಮಟ್ಟದ ಬೋಧನೆಗೆ ತೆಗೆದುಕೊಂಡು ಅವರಿಗೆ ಶಾಲಾ ಸಮಿತಿಯ ಮೂಲಕವೇ ಗೌರವ ಧನ ನೀಡಲಾರಂಭಿಸಲಾಯಿತು .ಈ ಎಲ್ಲಾ ಪ್ರಯತ್ನದ ಫಲ ಈಗ ಕೆ.ಆರ್.ಪೇಟೆಯ ಶತಮಾನದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಾಣಲಾರಂಭಿಸಿದೆ. ಈ ಪ್ರಯತ್ನ ತಾಲ್ಲೂಕಿನ ಕತ್ತರ ಘಟ್ಟ, ಅಕ್ಕಿಹೆಬ್ಬಾಳು, ಪಟ್ಟಣದ ದಕ್ಷಿಣ ಶಾಲೆಯಲ್ಲಿ ಆರಂಭವಾಗಿದೆ.

ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳನ್ನು ಸಂಘಟಿಸಿದ್ದರಿಂದ ಶಾಲೆಗೆ ಅಗತ್ಯವಾದ ಪಾಠೋಪಕರಣ, ಪೀಠೋಪಕರಣ, ಕ್ರೀಡಾ ಸಾಮಗ್ರಿಗಳು, ಗ್ರಂಥಾಲಯಕ್ಕೆ ಅಗತ್ಯವಾದ ಪುಸ್ತಕಗಳು ಶಾಲೆಗೆ ಒದಗಿಬಂದಿವೆ. ದಾನಿಗಳು ನೀಡಿದ ಹಣವನ್ನು ಶಾಲೆಯ ಕೆಲಸಗಳಿಗೆ , ವಿದ್ಯಾರ್ಥಿಗಳ ಶಿಕ್ಷಣ ಖರ್ಚಿಗೆ ಬಳಸಿಕೊಳ್ಳಲಾಗುತ್ತಿದೆ. ಹಲವು ಗಣ್ಯರು ಉದಾರವಾಗಿ ಅಲ್ಮೆರಾಗಳು, ಕುರ್ಚಿಗಳು, ಡೆಸ್ಕು ಮತ್ತು ಬೆಂಚುಗಳು , ನೇಮ್ ಬೋರ್ಡ್ ಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇದಲ್ಲದೆ ಕ್ಷೇತ್ರದ ಶಾಸಕ ಡಾ:ನಾರಾಯಣಗೌಡ, ಸಂಸದ ಸಿ.ಎಸ್.ಪುಟ್ಟರಾಜು, , ಜಿ.ಪಂ ಅಧ್ಯಕ್ಷೆ ಪ್ರೇಮಕುಮಾರಿ , ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್ ಸೇರಿದಂತೆ ಹಲವು ಗಣ್ಯರು ಶಾಲೆಗೆ ಭೇಟಿ ನೀಡಿ ಅಗತ್ಯ ಅನುದಾನವನ್ನು ನೀಡುವ ಭರವಸೆ ನೀಡಿದ್ದರೆ ಹಲವರು ಈಗಾಗಲೇ ದೇಣಿಗೆ ನೀಡಿದ್ದಾರೆ.

ಇನ್ನೂ ಸಾಕಷ್ಟು ಕೆಲಸಗಳು ಇಲ್ಲಿ ಆಗಬೇಕಿದೆ. ಮತ್ತಷ್ಟು ಕೊಠಡಿ ನಿರ್ಮಾಣವಾಗಬೇಕು, ಕುಡಿಯುವ ನೀರಿಗಾಗಿ ಪ್ರತ್ಯೇಕ ವ್ಯವಸ್ಥೆಯಾಗಬೇಕು, ಹೆಚ್ಚು ಶೌಚಾಲಯಗಳು ನಿರ್ಮಾಣವಾಗಬೇಕು. ಹೆಚ್ಚು ಶಿಕ್ಷಕ ಹುದ್ದೆಗಳನ್ನು ಮಂಜೂರು ಮಾಡಬೇಕು ಮತ್ತು ಮಕ್ಕಳ ಮನಸ್ಸಿಗೆ ಅನುಗುಣವಾಗಿ ಪಾಠ ಮಾಡುವಂತಹ ವಾತಾವರಣವನ್ನು ನಿರ್ಮಾಣ ಮಾಡಬೇಕು. ಇಷ್ಟು ಕೆಲಸಗಳಾದರೆ ಈ ಶಾಲೆ ಮತ್ತಷ್ಟು ದಾಖಲೆ ಬರೆಯಲು ಸಾಧ್ಯವಾಗುತ್ತದೆ. ಇ ದಾಖಲೆ ನಿರ್ಮಾಣಕ್ಕೆ ಇಲ್ಲಿನ ಮುಖ್ಯಶಿಕ್ಷಕರು ಮತ್ತು ಶಿಕ್ಷಕ ಸಿಬ್ಬಂದಿ ,ಶಾಲಾಭಿವೃದ್ಧಿ ಸಮಿತಿ ಸದಸ್ಯರು , ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಶಿಕ್ಷಣಾಸಕ್ತರು ದುಡಿಯುತ್ತಿರುವದು ಮೆಚ್ಚುಗೆ ವಿಚಾರವಾಗಿದೆ

ಒಟ್ಟಾರೆ ವಿದ್ಯಾರ್ಥಿಗಳಿಲ್ಲದೆ ಮುಚ್ಚಿ ಹೋಗುವ ಹಂತದಲ್ಲಿದ್ದ ಈ ಸರ್ಕಾರಿ ಶಾಲೆಯನ್ನು ಉಳಿಸುವ ಮೂಲಕ ಬಡ ಮಕ್ಕಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವಂತೆ ಮಾಡಿರುವುದು ಎಲ್ಲರಿಂದಲೂ ಪ್ರಶಂಸೆಗೆ ಒಳಗಾಗಿದೆ. ಇದೇ ಮಾದರಿಯಲ್ಲಿ ರಾಜ್ಯದಲ್ಲಿ ವಿದ್ಯಾರ್ಥಿಗಳಿಲ್ಲದೆ ಮುಚ್ಚುವ ಹಂತ ತಲುಪಿರುವ ಶಾಲೆಗಳನ್ನು ಉಳಿಸುವ ಕೆಲಸವನ್ನು ಆಯಾ ಭಾಗದ ಶಿಕ್ಷಣಾಸಕ್ತರು ಮಾಡಬೇಕಾಗಿದೆ.





# ಬಯಲು ಸೀಮೆಯಲ್ಲಿ ಮರಳುಗಾಡಿನ ಬೆಳೆ!

ಸಂತೋಷ್ ರಾವ್

ಮರಳುಗಾಡಿನ ಸೌದಿ ಅರೇಬಿಯಾದಲ್ಲಿ ಬೆಳೆಯುವ ಖರ್ಜೂರವನ್ನು ಬಯಲು ಸೀಮೆಯಲ್ಲಿ ಬೆಳೆದು ಆರ್ಥಿಕವಾಗಿ ಲಾಭ ಗಳಿಸಲು ಶ್ರಮಪಡುತ್ತಿದ್ದಾರೆ ಗೌರಿಬಿದನೂರಿನ ಸಾಗಾನಹಳ್ಳಿಯ ಪ್ರಯೋಗಶೀಲ ರೈತ ದಿವಾಕರ. ಸಾವಯುವ ಬೇಸಾಯದಿಂದ ರಾಸಾಯನಿಕಗಳ ಸೋಂಕಿಲ್ಲದೇ ಬಯಲುಸೀಮೆಯಲ್ಲಿ ಖರ್ಜೂರ ಬೆಳೆದು ಅಚ್ಚರಿ ಮೂಡಿಸಿದ್ದಾರೆ.

ದಿವಾಕರ ಸ್ನಾತಕೋತ್ತರ ಪದವೀಧರ. ಇವರ ಹೆಸರು ದಿವಾಕರ ಚಿನ್ನಪ್ಪ. ಖಾಸಗೀ ವಿದ್ಯಾಸಂಸ್ಥೆಯಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾಗ ಪುಕವೊಕಾರ ಕನ್ನಡಾನುವಾದ ಪುಸ್ತಕ 'ಒಂದು ಹುಲ್ಲಿನ ಕ್ರಾಂತಿ'ಯನ್ನು ಓದಿ ಸ್ಪಂದಿಸಿ ಉಪನ್ಯಾಸಕ ವೃತ್ತಿಗೆ ಗುಡ್ ಬೈ ಹೇಳಿ ಕೃಷಿ ಕಡೆ ಗಮನ ಹರಿಸಿದರು.

ಕಳೆದ 10 ವರ್ಷಗಳ ಹಿಂದೆ ಬೆಂಗಳೂರಿನ ಗಾಂಧೀ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಡೆದ ಕೃಷಿ ಮೇಳದಲ್ಲಿ ತಮಿಳನಾಡಿನ ಧರ್ಮಪುರಿಯ ರೈತ ನಮ್ಮ ದೇಶದಲ್ಲಿ ಸಹಾ ಖರ್ಜೂರವನ್ನು ಬೆಳೆಯಬಹುದು ಎಂದು ತಿಳಿಸಿದ್ದರು. ಇದರಿಂದ ಸ್ಫೂರ್ತಿ ಪಡೆದ ದಿವಾಕರ 4 ವರ್ಷಗಳ ಹಿಂದೆ ಅಂಗಾಂಶ ಕಸಿ (ಟಿಷ್ಯೂ ಕಲ್ಚರ್) ಮಾಡಿದ ಸಸಿಗಳನ್ನು ಧರ್ಮಪುರಿಯಿಂದ ತಂದು ನಾಟಿ ಮಾಡಿದ್ದಾರೆ.



ಖರ್ಜೂರದಲ್ಲಿ ಹೇರಳವಾಗಿ ಪೌಷ್ಠಿಕಾಂಶಗಳಿರುತ್ತದೆ. ಸೌದಿ ಅರೇಬಿಯಾ ದೇಶಕ್ಕೆ ಸೇರಿದ ಬರ್ಹಿ ತಳಿಗಳನ್ನು ತಂದು ನಾಟೀ ಮಾಡಿದ್ದಾರೆ. ಸಮಶೀತೋಷ್ಣ ವಲಯಗಳಲ್ಲಿನ 46 ರಿಂದ 50 ಡಿಗ್ರೀ ಸೆಲ್ಸಿಯಸ್ ಉಷ್ಣಾಂಶವಿರುವ ಸೌದಿ ಅರೇಬಿಯಾ, ರಾಜಸ್ಥಾನ, ಗುಜರಾತ್ ಮುಂತಾದ ಕಡೆ ಈ ಬೆಳೆಯನ್ನು ಬೆಳಿಯುತ್ತಾರೆ.

ಎರಡು ಎಕರೆ ಜಮೀನಿನಲ್ಲಿ ಎಕರೆಗೆ 75 ಸಸಿಗಳಂತೆ 150 ಸಸಿಗಳನ್ನು (ಸಸಿಗೆ ಮೂರು ಸಾವಿರ ರೂ. ಗಳಂತೆ ಖರೀದಿ ಮಾಡಿ) ನಾಟಿ ಮಾಡಿದ್ದಾರೆ. ಅತ್ಯಂತ ಕಡಿಮೆ ತೇವಾಂಶದಲ್ಲಿ ಬೆಳೆಯುವ ಶಕ್ತಿ ಈ ತಳಿಗಳಿಗೆ ಇದೆ. ತಲೆ ಮೇಲೆ ಬಿಸಿಲು, ಬುಡಕ್ಕೆ ತೇವ ಈ ಮರಕ್ಕೂ ಬೇಕು ಎನ್ನುತ್ತಾರೆ ದಿವಾಕರ. ಹನಿ ನೀರಾವರಿ ಅಳವಡಿಸಿದ್ದು ಸುಭಾಷ್ ಪಾಳೇಕರ್‌ರವರ ಸಾವಯುವ ವ್ಯವಸಾಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ತನ್ನ ಮನೆಯಲ್ಲಿರುವ 8 ದೇಸೀ ಗೋವುಗಳಿಂದ ಬಂದ ಸಗಣಿ, ಗಂಜಲ(ಮೂತ್ರ)ದೊಂದಿಗೆ ನಾಟಿ ಬೆಲ್ಲವನ್ನು ಬೆರೆಸಿ ಜೀವಾಮೃತವನ್ನು ಮಾಡಿ ಗಿಡಗಳಿಗೆ ಪೋಷಕಾಂಶ ವಾಗಿ ನೀಡುತ್ತಿದ್ದಾರೆ. ಪ್ರತಿ ಗಿಡದ ಬುಡದಲ್ಲಿ ಬೇವಿನಸೊಪ್ಪನ್ನು ಹಸಿರೆಲೆ ಗೊಬ್ಬರವಾಗಿ ನೀಡುತ್ತಿದ್ದಾರೆ. ಈ ಗಿಡಗಳ ಮಧ್ಯೆ ಅಂತರ್ ಬೆಳೆಯಾಗಿ ಹುರಳಿ, ಸೆಣಬು, ಅಲಸಂದೆ ಹಾಕಿ ಈ ಬೆಳೆ ಹೂ ಬಿಡುವ ಹಂತದಲ್ಲಿ ಕಿತ್ತು ಗಿಡಗಳಿಗೆ ಹಸಿರೆಲೆ ಗೊಬ್ಬರವಾಗಿ ನೀಡುತ್ತಿದ್ದಾರೆ. ಈ ಬೆಳೆಗೆ ರಸಾಯನಿಕಗಳನ್ನು ಬಳಸುತ್ತಿಲ್ಲ. ಜನವರಿ ತಿಂಗಳಿನಿಂದ ಮಾರ್ಚ್ ತಿಂಗಳವರೆಗೆ ಮೂರು ಹಂತಗಳಲ್ಲಿ ಹೂವು ಬಿಟ್ಟು, ಜೂನ್, ಜುಲೈ ತಿಂಗಳಲ್ಲಿ ಫಸಲು ಕಟಾವಿಗೆ ಬರುತ್ತದೆ. ಕಟಾವು ಸಹಾ ಮೂರು ಹಂತದಲ್ಲಿ ಬರುತ್ತೆ. ಈ ಗಿಡಗಳು ಸುಮಾರು 40ರಿಂದ 50 ವರ್ಷದವರೆಗೆ ಜೀವಂತವಾಗಿರುತ್ತೆ. ವಾರ್ಷಿಕ ಒಂದು ಗಿಡದಿಂದ ಸುಮಾರು 50 ಕೆಜಿ ಇಳುವರಿ ಬರುವ ಅವಕಾಶವಿದೆ. ಸುಮಾರು 5 ವರ್ಷದ ನಂತರ ಬಂಡವಾಳ ಕಳೆದು ಲಾಭ ಪಡೆಯಲು ಅವಕಾಶವಿದೆ ಎಂದು ದಿವಾಕರ ತಿಳಿಸಿದರು.

ಈಗ ಎರಡು ಎಕರೆ ಜಮೀನಿನಲ್ಲಿ 150 ಗಿಡಗಳಲ್ಲಿ ವಿವಿಧ ಕಾರಣಗಳಿಂದ ಹೋದ 12 ಗಿಡಗಳಲ್ಲದೇ 138 ಗಿಡಗಳಿಂದ ಫಸಲು ಬರುತ್ತಿದೆ. ಹಸಿ ಖರ್ಜೂರಕ್ಕೆ ಕೆಜಿ 450 ರೂಗಳಂತೆ ಮಾರಾಟವಾಗುತ್ತಿದೆ. ತಮ್ಮ ತೋಟದಲ್ಲಿ 375 ರೂಗಳಿಗೆ ಮಾರಾಟ ಮಾಡುತ್ತಿದ್ದಾರೆ. ದಿವಾಕರ ತನ್ನ ತೋಟದಲ್ಲಿ ಸುಗ್ಗೀ ಹಬ್ಬವನ್ನು ಮಾಡಿ ಸಂಬಂಧಿಕರು, ಸ್ನೇಹಿತರನ್ನು ಕರೆದು ತನ್ನ ಖರ್ಜೂರದ ಹಣ್ಣುಗಳ ರುಚಿ ತೋರಿಸಿ ಮಾರಾಟ ಮಾಡಿದ್ದಾರೆ. ಕಳೆದ ಸಾಲಿನಲ್ಲಿ ಒಟ್ಟು ಒಂದು ಟನ್ನು ಹಣ್ಣನ್ನು ಮಾರಾಟ ಮಾಡಿದ್ದು ಈ ಸಾಲಿನಲ್ಲಿ ಸುಮಾರು ಒಂದೂವರೆ ಟನ್ನು ಇಳುವರಿ ಬಂದಿದೆ ಎಂದು ತಿಳಿಸಿದರು. ಈ ಖರ್ಜೂರವನ್ನು ಡ್ರೈ ಫ್ರೂಟ್ (ಒಣ) ಮಾಡುವ ವಿಧಾನವನ್ನು ತಿಳಿದುಕೊಳ್ಳಬೇಕಾಗಿದೆ ಎಂದರು.

ರೈತರು ಆತ್ಮಹತ್ಯೆ ಆಲೋಚನೆ ಬಿಟ್ಟು ಮಿಶ್ರ ಬೆಳೆಗಳ ಬಗ್ಗೆ ಆಸಕ್ತಿ ವಹಿಸಬೇಕು, ಇದರಿಂದ ಆರ್ಥಿಕವಾಗಿ ಸಬಲರಾಗಬಹುದು ಎನ್ನುವುದು ದಿವಾಕರ ಅವರ ಅನುಭವದ ಮಾತು. ದಿವಾಕರ ಅವರನ್ನು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 9845063743.





# ಬರ

## ಭರವಸೆ ನೀಡಿದ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ

ಪಾರ್ವತಿ ಪಿಟಗಿ



ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳಾಗಬೇಕು ಹಾಗೂ ಗ್ರಾಮೀಣ ಭಾಗದ ಜನ ಕೆಲಸವನ್ನರಸುತ್ತಾ ಗುಳೇ ಹೋಗದಂತೆ ಅವರಿಗೆ ಸ್ಥಳದಲ್ಲಿಯೇ 100 ದಿನಗಳ ಉದ್ಯೋಗ ಖಾತ್ರಿಯಾಗಬೇಕು ಎಂಬ ಮುಖ್ಯ ಉದ್ದೇಶದೊಂದಿಗೆ 2005ರಲ್ಲಿ ಈ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಹುಟ್ಟಿಕೊಂಡಿತು.

ಆಂಧ್ರಪ್ರದೇಶದ ಬಂದ್ಲಾಪಲ್ಲಿ ಎಂಬಲ್ಲಿ ಈ ಯೋಜನೆ ಮೊದಲಬಾರಿಗೆ ಪ್ರಾಯೋಗಿಕವಾಗಿ ಜಾರಿಗೆ ಬಂದಿತು. ಮುಂದೆ ಫೆಬ್ರುವರಿ 2006ರಂದು ದೇಶದ 200 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ಹಾಗೇ 2008, ಏಪ್ರಿಲ್ 1 ರಂದು ದೇಶಾದ್ಯಂತ ಇದು ಗ್ರಾಮ ಪಂಚಾಯತಿ ಮಟ್ಟದಲ್ಲಿ ಅನುಷ್ಠಾನಗೊಂಡಿತು.

ಕೇಂದ್ರ ಸರ್ಕಾರವು, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 140ನೇ ಜನ್ಮದಿನಾಚರಣೆ ಅಂಗವಾಗಿ ಈ ಮೊದಲು ಅಂದರೆ 2005ರಲ್ಲಿದ್ದ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' ಎಂಬ ಹೆಸರನ್ನು ಬದಲಿಸಿ, ಗ್ರಾಮ ಸ್ವರಾಜ್ಯದಲ್ಲಿ ಬಲವಾದ ನಂಬಿಕೆಯನ್ನಿರಿಸಿದ ಮಹಾತ್ಮನಿಗೆ ನಮನ ಸಲ್ಲಿಸುವ ನಿಟ್ಟಿನಲ್ಲಿ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ' ಎಂದು ಮರುನಾಮಕರಣ ಮಾಡಿತು.

ಕೂಲಿ ಕೆಲಸವನ್ನರಸುತ್ತಿರುವ ಗ್ರಾಮದ ಪ್ರತಿ ಕುಟುಂಬಕ್ಕೂ 100 ದಿನಗಳ ಕಾಲ ಕೆಲಸ ಖಾತ್ರಿ ಅಥವಾ ಉದ್ಯೋಗ ಭರವಸೆ ನೀಡುವ ಈ ಕಾಯ್ದೆಯನುಸಾರ, ಉದ್ಯೋಗಕ್ಕಾಗಿ ಅರ್ಜಿ ನೀಡಿದ ವ್ಯಕ್ತಿಯು ವಾಸವಾಗಿರುವ 5 ಕಿ.ಮೀ ವ್ಯಾಪ್ತಿಯಲ್ಲಿಯೇ ಕೆಲಸ ನೀಡಲಾಗುತ್ತದೆ. ಅಕಸ್ಮಾತ್ ಕೆಲಸ ನೀಡದೇ ಹೋದಲ್ಲಿ ಅವರಿಗೆ ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ.

ಕಾರ್ಮಿಕರು ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಕಾರ್ಮಿಕರ



ಸಂಪೂರ್ಣ ವಿವರವನ್ನು ಆನ್‌ಲೈನ್ ನಲ್ಲಿ ಭರ್ತಿ ಮಾಡಿ ಅವರ ಹೆಸರುಗಳನ್ನು ದಾಖಲಿಸಿ ಅವರಿಗೊಂದು ಉದ್ಯೋಗ ಚೀಟಿಯನ್ನು ಗ್ರಾಮ ಪಂಚಾಯತಿ ನೀಡುತ್ತದೆ. ಈ ಉದ್ಯೋಗ ಚೀಟಿಯಲ್ಲಿ ಅವರು ಕೆಲಸ ಮಾಡಿದ ವಿವರವನ್ನೆಲ್ಲ ಸೇರಿಸುತ್ತಾ ಹೋಗಿ ಕೆಲಸ ಪೂರೈಸಿದ ವಾರದೊಳಗೆ ಹಣ ಸಂದಾಯವಾಗುವಂತೆ ನೋಡಿಕೊಳ್ಳಲಾಗುತ್ತದೆ.

ಯೋಜನೆಯ ಆರಂಭದ ದಿನಗಳಲ್ಲಿ ಅಂದರೆ 2007–2008 ನೇ ಸಾಲಿನಲ್ಲಿ ಒಂದು ದಿನದ ಕೂಲಿ 74 ರೂ ಎಂದು ನಿರ್ಧರಿತವಾಗಿತ್ತು ಮುಂದೆ 2009–2010ರಲ್ಲಿ 100 ರೂಪಾಯಿಗಳಂತೆ, 2011–2012ರಲ್ಲಿ 125 ರೂಪಾಯಿಗಳಂತೆ, 2012–2013 ರಲ್ಲಿ 155 ರೂಪಾಯಿಗಳಂತೆ, 2013–14ರಲ್ಲಿ 174 ರೂಪಾಯಿಗಳಂತೆ ಹಂತ ಹಂತವಾಗಿ ಏರಿದ ಕೂಲಿ 2015–2016ನೇ ಸಾಲಿಗೆ ರೂ. 204ಕ್ಕೇರಿತು. 2016–2017ನೇ ಸಾಲಿನಿಂದ ಈ ಕೂಲಿ 224 ರೂಗಳವರೆಗೂ ಏರಿದೆ. ಅಂದರೆ ಒಂದು ಕುಟುಂಬ ವರ್ಷವೊಂದರಲ್ಲಿ ಅಥವಾ 100 ದಿನಗಳಲ್ಲಿ ಈ ಯೋಜನೆಯಡಿಯ ಕೆಲಸದಲ್ಲಿ ರೂ 22400 ಗಳವರೆಗೂ ಆದಾಯ ಪಡೆಯಬಹುದಾಗಿದೆ.

ಕೇಂದ್ರದ ಮಹತ್ವಾಕಾಂಕ್ಷಿ ಯೋಜನೆಯಾದ ಈ ಯೋಜನೆಯು ಜಗತ್ತಿನಲ್ಲಿಯೇ ಅತ್ಯಂತ ಬೃಹತ್ತಾದ ಕೆಲಸಕ್ಕಾಗಿ ನಗದು ಕಾರ್ಯಕ್ರಮವಾಗಿದೆ. ಇದರಲ್ಲಿ ಸಾಕಷ್ಟು ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ. ಜಯಾ ಅಪಜಯಗಳ ಮಧ್ಯೆಯೇ ಇದು ಎಗ್ಗಿಲ್ಲದೇ ಸಾಗುತ್ತಾ ದಶಕಗಳನ್ನು ದಾಟಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯದ ಮಾಹಿತಿ ಪ್ರಕಾರ, ಕಳೆದೊಂದು ದಶಕದಲ್ಲಿ 3,13,844 ಲಕ್ಷ ಕೋಟಿ ರೂಗಳನ್ನು ಈ ಯೋಜನೆಯಲ್ಲಿ ಬಿಡುಗಡೆ ಮಾಡಿದೆ. ರಾಜ್ಯ ಸರಕಾರವೂ ಸಹ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದೆ.

ಈ ಯೋಜನೆಯಡಿಯಲ್ಲಿ ರಸ್ತೆಗಳ ನಿರ್ಮಾಣ, ಗ್ರಾಮೀಣ ಜನರ ಜೀವನೋಪಾಯ ಕಸುಬುಗಳಾದ ದನ ಕುರಿ, ಕೋಳಿ ಸಾಕಾಣಿಕೆಯಂತಹ ಕೆಲಸಗಳಿಗೆ ನೆರವಾಗಲೆಂದು ಕುರಿದೊಡ್ಡಿ, ದನದ ಕೊಟ್ಟಿಗೆ ಹಾಗೂ ಕೋಳಿ ಸಾಕಾಣಿಕಾ ಕೇಂದ್ರ ನಿರ್ಮಾಣ ಸ್ಮಶಾನ ಅಭಿವೃದ್ಧಿ, ಮಳೆ ಕಡಿಮೆ ಬೀಳುವ ಪ್ರದೇಶದ ತೆರೆದ ಬಾವಿಗಳಲ್ಲಿ ಹಾಗೂ ಕೊಳವೆಬಾವಿಯಿಂದ ಹೊರ ಬರುವ ನೀರಿನ ಪ್ರಮಾಣ ಕಡಿಮೆಯಾದಂತಹ ಗ್ರಾಮೀಣ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಇಂಗುಗುಂಡಿ ಹಾಗೂ ರಿಚಾರ್ಜ್ ಸ್ಟ್ರಕ್ಚರ್‌ಗಳ ನಿರ್ಮಾಣ, ಗ್ರಾಮೀಣ ಪ್ರದೇಶದ ಯುವಕರನ್ನು ಕ್ರೀಡೆಗಳಲ್ಲಿ ತೊಡಗಿಸಿ ಅವರನ್ನು ಮಾನಸಿಕವಾಗಿ ದೈಹಿಕವಾಗಿ, ಸದೃಢರನ್ನಾಗಿ ಮತ್ತು ಆರೋಗ್ಯವಂತರನ್ನಾಗಿ ಮಾಡುವ ನಿಟ್ಟಿನಲ್ಲಿ ಆಟದ ಮೈದಾನಗಳ ನಿರ್ಮಾಣ, ಎಲ್ಲಕ್ಕಿಂತ ಮಿಗಿಲಾಗಿ ಕನ್ನಡ ಶಾಲೆಗಳ ಗಟ್ಟಿ ಅಡಿಪಾಯಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಟ್ಟಡಗಳ ನಿರ್ಮಾಣ, ಕೆರೆ ಹೂಳೆತ್ತುವುದು, ನದಿ ಹೂಳೆತ್ತುವುದು ಕೂಡ ಈ ಯೋಜನೆಯ ಪ್ರಮುಖ ಕಾರ್ಯವಾಗಿದೆ. ಹಳ್ಳಿಗಾಡಿನ ಬದುಕಿನಲ್ಲಿ ಹಿಂದಿನಿಂದ ಹಾಸುಹೊಕ್ಕಾಗಿ ಬಂದಂತಹ ಕೆರೆಗಳನ್ನು ಹಾಗೂ ಕಲ್ಯಾಣಿಗಳನ್ನು ಸಂರಕ್ಷಿಸುವ ಧ್ಯೇಯವನ್ನು ಇದು ಒಳಗೊಂಡಿದ್ದು ಈಗಾಗಲೇ ಅಸಂಖ್ಯ ಕೆರೆಗಳು ಈ ಯೋಜನೆಯ ಲಾಭಪಡೆದುಕೊಂಡಿವೆ.







ಹೀಗೆ ಲಾಭ ಪಡೆದುಕೊಂಡ ಕೆರೆಗಳಲ್ಲಿ ನಮ್ಮ ಸುಳೇಭಾವಿ ಗ್ರಾಮದ ಕುಂಬಾರಕೆರೆಯೂ ಒಂದಾಗಿದೆ. ಬೆಳಗಾವಿ ಜಿಲ್ಲೆ ಹಾಗೂ ಬೆಳಗಾವಿ ತಾಲೂಕಿನ ಸುಳೇಭಾವಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸುಮಾರು ಒಂದು ಎಕರೆ ಪ್ರದೇಶದಷ್ಟು ದೊಡ್ಡದಾದ ಕೆರೆಯೆ ಸುಳೇಭಾವಿಯ ಕುಂಬಾರಕೆರೆ. ಈ ಕೆರೆ ನಾಲ್ಕೈದು ವರ್ಷಗಳಿಂದ ನೀರಿಲ್ಲದೇ ಭಣಗುಡುತ್ತಾ ಹೋಗಿ ಸಾಲದ್ದಕ್ಕೆ ಆ ಒಣಗಿದ ಕೆರೆಯ ತುಂಬಾ ಮುಳ್ಳುಕಂಟಿಗಳು ಬೆಳೆದುನಿಂತು ಒಟ್ಟಿನಲ್ಲಿ ಅದು ವಿಷಜಂತುಗಳ ತಾಣವಾಗಿ ಮಾರ್ಪಟ್ಟಿತ್ತು.

ಈ ವರ್ಷ ಬರಗಾಲ ಬಿದ್ದು ಈ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗರು ಸಣ್ಣಪುಟ್ಟ ಜಮೀನುಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ನೀರಿಲ್ಲದೇ ಜಮೀನುಗಳಲ್ಲಿ ಕೆಲಸವೂ ಇಲ್ಲದೇ ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವ ಪರಿಸ್ಥಿತಿ ಹುಟ್ಟಿಕೊಂಡಿತ್ತು. ಹೊಲಗದ್ದೆಗಳಲ್ಲಂತೂ ಕೆಲಸವಿಲ್ಲ. ರಣಗುಡುವ ಬಿಸಿಲಿನಲ್ಲಿ ಗುಡ್ಡಕ್ಕೆ ಹೋಗಿ ಅದೂ ಸಾಕಷ್ಟು ಎತ್ತರಕ್ಕೇರಿ ಅಲ್ಲಿ ಸಿಗುವ ಒಣ ಕಟ್ಟಿಗೆಗಳನ್ನು ತಂದೋ, ಅಂಟು ಸಂಗ್ರಹಣೆ ಮಾಡಿಯೋ ಅಥವಾ ಕಾಕುಳ್ಳನ್ನು (ಒಣಗಿದ ಸಗಣಿ) ಸಂಗ್ರಹಿಸಿಯೋ ಮೂರ್ನಾಲ್ಕು ದುಡ್ಡು ಮಾಡಿದರೂ ಅದು ಯಾವುದಕ್ಕೂ ಸಾಲದಂತಾಗಿ ಇನ್ನೇನು ಮಾಡುವುದೋ ಭಗವಂತಾ ಎಂದು ನಿಟ್ಟುಸಿರು ಹಾಕುವ ವೇಳೆಯಲ್ಲಿಯೇ ಈ ಯೋಜನೆಯಲ್ಲಿ ಕೆರೆ ಹೂಳೆತ್ತುವ ಕೆಲಸ ವರದಾನವಾಗಿ ಲಭಿಸಿದ್ದು.

ಕೆಲಸವಿಲ್ಲದೇ ಅಲ್ಲಲ್ಲಿ ಅಲೆಯುತ್ತಿದ್ದ ಕಾರ್ಮಿಕರನ್ನೆಲ್ಲ ಒಟ್ಟುಗೂಡಿಸಿ ಮೊದಲು ಅವರಿಗೆ ಉದ್ಯೋಗ ಚೀಟಿ ನೀಡಿ ಅವರು ಇನ್ನೇನು ಕೆಲಸಕ್ಕೆ ಅರ್ಹರು ಎಂದಾಗ, ಅವರಿಗೆ ಕೆರೆ ಹೂಳೆತ್ತುವ ಕೆಲಸ ನೀಡಲಾಯಿತು. ಆದರೆ ಈ ಮೊದಲು ತಿಳಿಸಿದಂತೆ ಕೆರೆ, ಮುಳ್ಳುಕಂಟಿ ವಿಷಜಂತುಗಳಿಂದ ತುಂಬಿ ಅಲ್ಲಿ ಕಾಲಿಡಲು ಭಯ ಹುಟ್ಟುವಂತಿತ್ತು. ಆದರೆ ಶ್ರಮಿಕರು ಅದಾವುದನ್ನೂ ಲೆಕ್ಕಿಸದೇ ಕೆಲಸಕ್ಕೆ ಕೈ ಹಾಕಿದರು. ಕೆರೆಯ ಮೇಲಿನ ಮುಳ್ಳುಕಂಟಿಗಳನ್ನೆಲ್ಲ ಕಡಿದು ಕೆರೆ ಹೂಳೆತ್ತಲು ಅನುವು ಮಾಡಿಕೊಂಡರು. ಆದರೂ ಕೆರೆಯನ್ನು ಅಗೆದಂತೆಲ್ಲ ಅದೆಷ್ಟೋ ಹಾವು ಚೇಳುಗಳು ಹೊರಬಂದವು. ಒಂದು ದಿನವಂತೂ ಐದಾರು ಉದ್ದುದ್ದನೆಯ ಹಾವುಗಳು ಬುಸುಗುಡುತ್ತಾ ಮೇಲೆದ್ದವು. ಆದರೆ ಅದಾವುದನ್ನೂ ಲೆಕ್ಕಿಸದೇ ಮುನ್ನುಗ್ಗಿದ ಕಾರ್ಮಿಕರು ಕೆರೆಯನ್ನು ಸ್ವಚ್ಛಗೊಳಿಸಿ, ಸುಂದರ ತಾಣವನ್ನಾಗಿ ಮಾರ್ಪಡಿಸಿದ್ದಾರೆ. ಈಗ ಈ ಮೂರು ತಿಂಗಳಿನಿಂದ ಬಿದ್ದ ಸಾಧಾರಣ ಮಳೆಗೆ ಕೆರೆತುಂಬಿ ಕಂಗೊಳಿಸುತ್ತಿದೆ

ಆರಂಭದಲ್ಲಿ ಈ ಕೂಲಿ ಕಾರ್ಮಿಕರಿಗೆ ಕೂಲಿ ಪಾವತಿಯಾಗಲು ತಾಂತ್ರಿಕ ದೋಷಗಳಿಂದ ಸ್ವಲ್ಪ ವಿಳಂಬವಾಯಿತಾದರೂ ಎಲ್ಲ ಕೂಲಿಗಳಿಗೂ ಕೂಲಿ ಸಂದಾಯವಾಗುವಂತೆ ನೋಡಿಕೊಳ್ಳಲಾಗುತ್ತಿದೆ. ಹಾಗೆಯೇ ಆ ಕೂಲಿಕಾರರೂ ಸಹಿತ ಅತ್ಯಂತ ಉತ್ಸಾಹದಿಂದ ಕಾರ್ಯನಿರ್ವಹಿಸಿದ್ದಾರೆ. ಪ್ರತಿ ದಿನವೂ ಸುಮಾರು 80–100 ಜನ ಕೂಲಿ ಕಾರ್ಮಿಕರು ಈ ಕೆರೆಯ ಹೂಳೆತ್ತುವ ಕೆಲಸವನ್ನು ನಿಷ್ಠೆಯಿಂದ ಕಾಯಕವೇ ಕೈಲಾಸ ಎಂಬಂತೆ ನೆರವೇರಿಸಿದ್ದಾರೆ.

ಹೀಗೆ ರಾಜ್ಯದ ಅಷ್ಟೇ ಏಕೆ ದೇಶದ ತುಂಬೆಲ್ಲ ಈ ಯೋಜನೆ ಕಾರ್ಯರೂಪಕ್ಕೆ ಬಂದಿದೆಯಾದರೂ ಕೆಲವೊಂದಿಷ್ಟು ಸಮಸ್ಯೆಗಳು ಈ ಯೋಜನೆಯನ್ನು ಭಾದಿಸುತ್ತಿವೆ.

ಯೋಜನೆಯ ಸಾಮೂಹಿಕ ಕೆಲಸವಾದ ಕೆರೆ ಹೂಳೆತ್ತುವ ಕೆಲಸದಿಂದ ನಿಜಕ್ಕೂ ಕೂಲಿಕಾರ್ಮಿಕರಿಗೂ ಇತ್ತ ಗ್ರಾಮದ ಅಭಿವೃದ್ಧಿಗೂ ಸಹಾಯಕವಾದರೂ ಎಷ್ಟೋ ಕಡೆಗಳಲ್ಲಿ ಕೆರೆಯ ಹೂಳೆತ್ತಿದ ಮಣ್ಣನ್ನು ಅಲ್ಲಿಯೇ ಬದಿಗೆ ಹಾಕಿದ್ದರಿಂದ ಮತ್ತೆ ಮಳೆಗಾಲದಲ್ಲಿ ಆ ಮಣ್ಣು ಕೆರೆಯನ್ನು ತುಂಬಿಕೊಳ್ಳುವಂತಾಗುತ್ತದೆ. ಹೀಗಾದಾಗ ಅದು ಶಾಶ್ವತ ಕಾರ್ಯ ಎಂದೆನ್ನಿಸಿಕೊಳ್ಳುವುದಿಲ್ಲ. ಬೆಳಗಾವಿ ಜಿಲ್ಲೆ ಹಾಗೂ ತಾಲೂಕಿನಲ್ಲಿ ಸುಮಾರು ಐದಾರು ಗ್ರಾಮಗಳಲ್ಲಿಂದ ಮಾರ್ಕಂಡೇಯ ನದಿಯ ಹೂಳೆತ್ತುವ ಕಾರ್ಯ ನಡೆದಿದೆ. ದೇಶದಲ್ಲಿಯೇ ನದಿ ಹೂಳೆತ್ತುವ ಪ್ರಥಮ ಪ್ರಯತ್ನ ಎಂಬ ಹೆಗ್ಗಳಿಕೆಗೆ ಪಾತ್ರವಾದ ಈ ಕೆಲಸ ನಿಜಕ್ಕೂ ಶ್ಲಾಘನೀಯ. ಆದರೆ ಇಲ್ಲಿಯೂ ಕೂಡ ಹೂಳೆತ್ತಿದ ಮಣ್ಣನ್ನು ಅದರ ಬದಿಯೇ ಬಿಟ್ಟುಬಿಡಲಾಗಿದೆ.

ಹೂಳೆತ್ತಿದ ಫಲವತ್ತಾದ ಮಣ್ಣನ್ನು ಗ್ರಾಮದ ರೈತರ ಹೊಲಗದ್ದೆಗಳಿಗೆ ನೀಡಿ ಅಥವಾ ಗ್ರಾಮದ ಹೂಳುಗಳನ್ನು ಮುಚ್ಚಲು ಉಪಯೋಗಿಸಿ ಆ ಮಣ್ಣು ಮತ್ತೆ ಕೆರೆಯ ಪಾಲಾಗದಂತೆ ನೋಡಿಕೊಂಡು ಕೆಲಸವನ್ನು ಶಾಶ್ವತವಾಗಿಸಬೇಕು. ಹಾಗೇ ಅದೇ ಕಾರ್ಮಿಕರಿಂದ ಕೆರೆಗಳ ಸುತ್ತಮುತ್ತಲಿನ ಹಾಗೂ ನದಿಯ ಅಕ್ಕಪಕ್ಕದ ಕಸವನ್ನು ತೆಗೆಸುವಂತಾಗಬೇಕು. ಇಲ್ಲಿ ಒಂದು ಸಮಸ್ಯೆ ಎಂದರೆ, ಈ ಕಾಯ್ದೆಯಲ್ಲಿ ಕೇವಲ ಹೂಳೆತ್ತುವ ಕಾರ್ಯಕ್ಕೆ ಮಾತ್ರ ಕೂಲಿ ಕೊಡಬಹುದಾಗಿದ್ದು, ಸ್ವಚ್ಛಗೊಳಿಸುವ ಕಾರ್ಯಕ್ಕೆ ಕೂಲಿ ಪಾವತಿಸಲಾಗುವುದಿಲ್ಲ. ಏಕೆಂದರೆ ಕಾರ್ಮಿಕರು ಸ್ವಚ್ಛ ಮಾಡಿದ್ದನ್ನು ಅಳೆಯಲಾಗುವುದಿಲ್ಲ.

ಹೀಗೆ ಈ ಯೋಜನೆಯಲ್ಲಿರುವ ಕೆಲವು ದೋಷಗಳಿದ್ದು, ಜೊತೆಗೆ ಹಲವಾರು ತಾಂತ್ರಿಕ ದೋಷಗಳೂ ಕೂಡ ಯೋಜನೆಗೆ ಅಡ್ಡಿಪಡಿಸುತ್ತಿದ್ದು ಅವುಗಳನ್ನು ಸರಿಪಡಿಸಿ, ಎಲ್ಲಕ್ಕಿಂತ ಮಿಗಿಲಾಗಿ ಕೂಲಿ ಕಾರ್ಮಿಕರಿಗೆ ಸರಿಯಾಗಿ ಕೂಲಿ ಪಾವತಿಸುವಂತಾಗಿ ಈ ಯೋಜನೆಯಲ್ಲಿ ತೊಡಗಿದ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ದುಡಿದರೆ, ಖಂಡಿತವಾಗಿಯೂ ಯೋಜನೆ ಮತ್ತಷ್ಟು ಸಶಕ್ತವಾಗಿ ಪ್ರಗತಿ ಹೊಂದಿ ರಾಜ್ಯದಲ್ಲಿ ತಲೆದೋರಿರುವ ಬರವನ್ನು ತಕ್ಕಮಟ್ಟಿಗೆ ಪರಿಹರಿಸಬಹುದೇನೋ.

# ಭಾರತ ಸಂವಿಧಾನ
## ಮೂಲಭೂತ ಕರ್ತವ್ಯಗಳು



ನಮ್ಮ ಭಾರತದ ಸಂವಿಧಾನ 26–01–1950ನೇ ತಾರೀಖಿನಿಂದ ಜಾರಿಗೆ ಬಂದಿದೆ. ಆಗಸ್ಟ್ 15, 1947ರಂದು ಸ್ವತಂತ್ರರಾದ ಭಾರತೀಯರು ತಮ್ಮ ಗಣರಾಜ್ಯದ ಒಕ್ಕೂಟದಲ್ಲಿ ತಾವೇ ಆಡಳಿತ ನಡೆಸಲು ರೂಪಿಸಿಕೊಂಡು ತಮಗೆ ತಾವೇ ಕೊಟ್ಟುಕೊಂಡ ನಿಯಮಗಳು, ನಿಬಂಧನೆಗಳು ಹಾಗೂ ವ್ಯವಸ್ಥೆ "ಸಂವಿಧಾನ" ಎಂದು ಕರೆಯಲ್ಪಟ್ಟಿದೆ. ಜಾತ್ಯತೀತ ರಾಷ್ಟ್ರದಲ್ಲಿ ಶಾಂತಿಯುತವಾದ ಪರಿಸರದಲ್ಲಿ ಎಲ್ಲಾ ಪೌರರಿಗೂ ಸಮಾನ ಅವಕಾಶವನ್ನು ಕಲ್ಪಿಸಿ ವ್ಯಕ್ತಿಯ ಆತ್ಮ ಗೌರವಕ್ಕೆ ಚ್ಯುತಿಯುಂಟಾಗದ ಹಾಗೆ ಜೀವನ ಮಟ್ಟವನ್ನು ಉತ್ತಮಪಡಿಸಿಕೊಂಡು, ಸಹಬಾಳ್ವೆ ಮಾಡುವ ಆಶಯವನ್ನು ಹೊತ್ತು ಈ ಸಂವಿಧಾನವನ್ನು ರೂಪಿಸಿಕೊಂಡಿದ್ದೇವೆ.

ನಮ್ಮ ಸಂವಿಧಾನದಲ್ಲಿ 22 ಭಾಗಗಳಿವೆ. ಪ್ರತಿ ಭಾಗದಲ್ಲೂ ವಿವಿಧ ಅಧ್ಯಾಯಗಳಿದ್ದು, ಈ ಅಧ್ಯಾಯಗಳನ್ನು ಅನುಚ್ಛೇದಗಳಾಗಿ ವಿಂಗಡಿಸಲಾಗಿದೆ. ಮೊದಲನೆ ಭಾಗದಲ್ಲಿ, ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು, ಎರಡನೆಯ ಭಾಗದಲ್ಲಿ ಪೌರತ್ವ ಈ ವಿಷಯಗಳನ್ನು ಕೊಡಲಾಗಿದೆ. ಮೂರನೆಯ ಭಾಗದಲ್ಲಿ ಮೂಲಭೂತ ಹಕ್ಕುಗಳು ಯಾವುವು ಎಂಬುದನ್ನು ವಿವರಿಸಲಾಗಿದೆ.

ಸಂವಿಧಾನ ಜಾರಿಗೆ ಬಂದ ತಾರೀಖಿನಿಂದ 1976ನೇ ಇಸವಿಯವರೆಗೂ ಮೂಲಭೂತ ಹಕ್ಕುಗಳ ಬಗ್ಗೆ ಮಾತ್ರ ವಿವರಗಳಿದ್ದು ಮೂಲಭೂತ ಕರ್ತವ್ಯಗಳ ಬಗ್ಗೆ ಏನನ್ನೂ ಹೇಳಿರಲಿಲ್ಲ. ಬಹುಶಃ ಸಂವಿಧಾನ ಸಭೆಯ ಸದಸ್ಯರಿಗೆ ಇದರ ಅವಶ್ಯಕತೆ ಕಂಡಿರಲಿಲ್ಲವೆಂದು ಅನಿಸುತ್ತದೆ. ಏಕೆಂದರೆ, ಮೂಲಭೂತ ಹಕ್ಕುಗಳು ಉಲ್ಲಂಘನೆ ಆದಾಗ ಪೌರನಿಗೆ ಅದನ್ನು ಒತ್ತಾಯಿಸುವ ಅವಕಾಶವನ್ನು ಸಂವಿಧಾನದಲ್ಲಿ ಕಲ್ಪಿಸಲಾಗಿತ್ತು. ಆದರೆ ಮೂಲಭೂತ ಕರ್ತವ್ಯವನ್ನು ಪೌರ ಪಾಲಿಸದಿದ್ದಾಗ, ಅದನ್ನು ಒತ್ತಾಯಿಸಲು ರಾಜ್ಯಕ್ಕೆ ಸಾಧ್ಯವಾಗುವುದಿಲ್ಲ. ಹೀಗಾಗಿ ಕರ್ತವ್ಯವನ್ನು ಪಾಲಿಸುವ ಬಗ್ಗೆ ಅದನ್ನು ಪೌರನ ಮನಃಸಾಕ್ಷಿಗೆ ಬಿಡುವುದು ಸೂಕ್ತವೆಂದು ಸಂವಿಧಾನ ಸಭೆಗೆ ಅನಿಸಿರಬೇಕು. ಹೀಗಾಗಿ ಸಂವಿಧಾನ ಪ್ರಾರಂಭವಾದ ಹದಿನಾರು ವರ್ಷಗಳ ವರೆಗೂ ಯಾವ ಬದಲಾವಣೆಯೂ ಆಗಲಿಲ್ಲ.

1976ನೇ ಇಸವಿಯಲ್ಲಿ ಅತ್ಯವಶ್ಯಕವಾದ ಮೂಲಭೂತ ಕರ್ತವ್ಯಗಳನ್ನು ಪಟ್ಟಿ ಮಾಡಿ ಸಂವಿಧಾನದಲ್ಲಿ ಸೇರಿಸುವುದು ಸೂಕ್ತವೆಂದು ನಮ್ಮ ಸಂಸದರಿಗೆ ಅನಿಸಿರಬೇಕು. ಹೀಗಾಗಿ ಲೋಕಸಭೆ 1976ರಲ್ಲಿ ಸಂವಿಧಾನಕ್ಕೆ ಹೊಸದೊಂದು ಭಾಗವನ್ನು ಅಂದರೆ ಭಾಗ 4–ಂ ಅನ್ನು ಮತ್ತು ಅದರ ಕೆಳಗೆ ಅನುಚ್ಛೇದ 51–ಂ ಅನ್ನು ಸೇರ್ಪಡೆ ಮಾಡಿತು. ಇದೇ 47ನೇ ತಿದ್ದುಪಡಿ ಕಾಯಿದೆ, 1976, ಖಂಡ 11. ಈ ತಿದ್ದುಪಡಿ 01–01–1976ರಿಂದ ಜಾರಿಗೆ ಬಂದಿದೆ.

ಈ ಅನುಚ್ಛೇದ 51–ಎ ನಲ್ಲಿ ಹತ್ತು ಅತಿ ಮುಖ್ಯ ಕರ್ತವ್ಯಗಳು ಯಾವುವು ಎಂದು ಪಟ್ಟಿ ಮಾಡಲಾಗಿದೆ. ಅವುಗಳೆಂದರೆ:

1. ಸಂವಿಧಾನಕ್ಕೆ ನಿಷ್ಠರಾಗಿರುವುದು; ಅದರ ಅದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರ ಗೀತೆಯನ್ನು ಗೌರವಿಸುವುದು. ರಾಷ್ಟ್ರ ಧ್ವಜ ಮತ್ತು ರಾಷ್ಟ್ರ ಗೀತೆ ಈ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವುದು ಅಪಚಾರ ಆಗುತ್ತದೆ. ಅಲ್ಲದೆ ರಾಷ್ಟ್ರ ಧ್ವಜಕ್ಕೆ ಮತ್ತು ರಾಷ್ಟ್ರ ಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಬಾಗ್‌ನ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ ಅಸಹಕಾರ ಚಳುವಳಿ ಇತ್ಯಾದಿ)
3. ಭಾರತದ ಸಾರ್ವಭೌಮತ್ವ, ಒಗ್ಗಟ್ಟು ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯುವುದು. (ಒಂದು ರಾಜ್ಯ ತನ್ನ ನೆರೆಯ ರಾಜ್ಯಗಳೊಂದಿಗೆ ನದೀ ನೀರಿನ ಹಂಚಿಕೆ ಜಗಳ, ಗಡಿ ಹೊಂದಾಣಿಕೆ ಜಗಳ, ಭಾಷೆಗೆ ಸಂಬಂಧಪಟ್ಟ ಜಗಳ ಮಾಡುವುದು ಇತ್ಯಾದಿಗಳು ದೇಶದಲ್ಲಿ ಶಾಂತಿಯನ್ನು ಕದಡುತ್ತವೆ. ವೈರತ್ವವನ್ನು ಹುಟ್ಟು ಹಾಕುತ್ತವೆ. ಈ ಜಗಳಗಳು ನಾವು ನಿಜವಾಗಲೂ ಒಂದು ಅಖಂಡ ದೇಶದ ಪ್ರಜೆಗಳೇ ಎಂಬ ಅನುಮಾನ ಮೂಡಿಸುತ್ತವೆ.)
4. ದೇಶದ ರಕ್ಷಣೆ, ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರಲ್ಲಿ, ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಪ್ರದೇಶದವರಾಗಿರಲೀ, ಸಾಮರಸ್ಯವನ್ನು ಮತ್ತು ಭ್ರಾತೃತ್ವವನ್ನು ಪ್ರೇರೇಪಿಸುವುದು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಾಟ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದು ಮತ್ತು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆ ಇವುಗಳ ಮೇಲಿನ ತಾತ್ಸಾರ ಭಾವನೆಯನ್ನು, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು)
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸಿಕೊಳ್ಳುವುದು (ಆನೆಯ ದಂತಕ್ಕೆ ಆನೆಗಳನ್ನು ಬೇಟೆ ಮಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಆಹಾರಕ್ಕಾಗಿ ಬೇಟೆಯಾಡುವುದು, ಕೆರೆ ಅಂಗಳವನ್ನು ಒತ್ತರಿಸಿಕೊಂಡು ಕಟ್ಟಡಗಳನ್ನು ಕಟ್ಟಿ ಪರಿಸರಕ್ಕೆ ಧಕ್ಕೆ ತರುವುದು ಇತ್ಯಾದಿ, ಇದಕ್ಕೆ ಉದಾಹರಣೆಗಳು)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳುವುದು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಂತೂ, ಯಾವುದೇ ಚಳುವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಇತ್ಯಾದಿ ದುಷ್ಕೃತ್ಯಗಳು, ಹಿಂಸಾ ವಿನೋದಿಗಳಿಗೆ ಒಂದು ಸದವಕಾಶವಾಗಿ ಪರಿಣಮಿಸುತ್ತಿದೆ. ಇಂಥ ಕೃತ್ಯಗಳು ಸಭ್ಯವಲ್ಲ.
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರ ಎತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು. ತಂದೆ–ತಾಯಿಗಳು ಅಥವಾ ಪೋಷಕರಾದವರು 6ರಿಂದ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಿಸುವುದು.

**ಜಾತ್ಯತೀತ ರಾಷ್ಟ್ರದಲ್ಲಿ ಶಾಂತಿಯುತವಾದ ಪರಿಸರದಲ್ಲಿ ಎಲ್ಲಾ ಪೌರರಿಗೂ ಸಮಾನ ಅವಕಾಶವನ್ನು ಕಲ್ಪಿಸಿ ವ್ಯಕ್ತಿಯ ಆತ್ಮ ಗೌರವಕ್ಕೆ ಚ್ಯುತಿಯುಂಟಾಗದ ಹಾಗೆ ಜೀವನ ಮಟ್ಟವನ್ನು ಉತ್ತಮಪಡಿಸಿಕೊಂಡು, ಸಹಬಾಳ್ವೆ ಮಾಡುವ ಆಶಯವನ್ನು ಹೊತ್ತು ಈ ಸಂವಿಧಾನವನ್ನು ರೂಪಿಸಿಕೊಂಡಿದ್ದೇವೆ.**

ಪೌರನ ಚಟುವಟಿಕೆ ನಿಂತ ನೀರಾಗಬಾರದು, ಜೀವನವೆಂದರೆ ಚಲನಶೀಲತೆ ಇದಿಷ್ಟು ಮೂಲಭೂತ ಕರ್ತವ್ಯಗಳೆಂದು ಸಂವಿಧಾನ ಗುರುತಿಸಿದೆ. ಈ ಕರ್ತವ್ಯಗಳನ್ನು ಐಚ್ಛಿಕವಾಗಿ ಪೌರ ಮಾಡಬೇಕೆಂದು ಆಶಿಸಲಾಗಿದೆ. ಹಕ್ಕು ಮಾತ್ರ ಬೇಕು, ಕರ್ತವ್ಯ ನನಗೆ ಸಂಬಂಧಿಸಿದ್ದಲ್ಲ ಎಂಬ ಮನೋಭಾವ ಸರಿಯಲ್ಲ. ಈ ಕರ್ತವ್ಯಗಳನ್ನು ಗೌರವಿಸುವವರನ್ನು ನ್ಯಾಯಾಲಯ ಗೌರವಿಸುತ್ತದೆ.



# ಮಕ್ಕಳ ಕನಸುಗಳಿಗೆ ಬಣ್ಣ ಹಚ್ಚೋಣ

ಪರಮೇಶ್ವರಯ್ಯ ಸೊಪ್ಪಿಮಠ

ಮಕ್ಕಳಿಗೆ ಏನೂ ತಿಳಿದಿಲ್ಲ ಎಂಬ ನಿರ್ಣಯದೊಂದಿಗೆ ನಮ್ಮ ಶಿಕ್ಷಣದ ಬಹುತೇಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಅದರಲ್ಲೂ ವಿಶೇಷ ವೆಂದರೆ ಮಕ್ಕಳ ಶಿಕ್ಷಣದ ಎಲ್ಲವೂ ಹಿರಿಯರ ನೆಲೆಯಿಂದಲೇ ರೂಪಿಸಲ್ಪಡುತ್ತವೆ. ಅಲ್ಲಿ ಸಣ್ಣವರ ಆಲೋಚನೆಗಳಿಗಿಂತ ಹಿರಿಯೆ ಆಲೋಚನೆಗಳು, ಅಗತ್ಯಗಳು, ಆಶೆಗಳು, ಆಶೋತ್ತರಗಳು ಮಹತ್ವ ಪಡೆಯುತ್ತವೆ. ಮಕ್ಕಳ ಆಸಕ್ತಿ, ಅಭಿರುಚಿ, ಮನೋವಿಜ್ಞಾನವು ಮೂಲೆಗುಂಪಾಗಿರುತ್ತದೆ. ಅದನ್ನು ಗಮನಿಸಿ ಮಕ್ಕಳ ಪ್ರೀತಿಯ ಅಜ್ಜ 'ಕಾರಂತ'ರು 'ಓದುವ ಆಟ' ಎಂಬ ಪುಸ್ತಕದ ಮುಖಾಂತರ ಹೊಸ ಹಾದಿ ತುಳಿದರು. ಆದರೆ ಅದನ್ನು ನಾವು ಸ್ವೀಕರಿಸಿದ ಪರಿ ?

* * *

ಅಮ್ಮನ ಮಡಿಲಲ್ಲಿ ತಲೆಯಿಟ್ಟು... "ಅಮ್ಮಾ ಒಂದಿನಾನಾದ್ರೂ ನಂಗೆ ನಿನ್ನ ಕೈತುತ್ತು ಕೊಡಮ್ಮಾ" ಅಂತ ಪ್ರೀತಿಪೂರ್ವಕವಾಗಿ, ಆಸೆಯಿಂದ, ಮಮತೆಯಿಂದ, ಅಕ್ಕರೆಯಿಂದ ಕೇಳುವ ಮಕ್ಕಳಿಗೆ... ಹೋಗಾಚೆ... ನಂಗೆ ಟೈಮಿಲ್ಲ ಎಂಬ ಸಿಡುಕಿನ ಉತ್ತರ ದೊರೆತರೆ ಹೇಗಿರುತ್ತೆ ಹೇಳಿ?

ಅಮ್ಮಾ... ಅಪ್ಪ ಯಾವಾಗ ಬರ್ತಾರಮ್ಮ, ನಾನು ಈ ಟೆಸ್ಟ್‌ನಲ್ಲಿ ಕ್ಲಾಸಿನಲ್ಲಿ ಫಸ್ಟ್ ಬಂದಿದ್ದು ಅವ್ರಿಗೆ ಹೇಳ್ಬೇಕೂ ಅಂತ ಮನದೊಳಗೆ ಆತಂಕವನ್ನಿಟ್ಟುಕೊಂಡೇ ಕೇಳುವ ಮಗುವಿಗೆ, "ನಿಮ್ಮಪ್ಪನಾ... ಅವರಿಗೆ ಆಫೀಸಾಯ್ತು, ಅವ್ರ ಕೆಲ್ಸ ಆಯ್ತು... ಮನೆಗೇ ರಾತ್ರೋ ರಾತ್ರಿ ಬರ್ತಾರೆ, ಬೆಳಕು ಹರಿಯೋ ಮುಂಚೆನೇ ಹೊರಟ್ಬಿಡ್ತಾರೆ" ಎಂಬ ಉತ್ತರ ಬರುವಾಗ ಆ ಮಗುವಿನ ಮನಸ್ಸು ಎಷ್ಟೊಂದು ನೊಂದುಕೊಂಡಿರಬಹುದು ಎಂಬುದನ್ನು ಆಲೋಚಿಸುವರಾರು ?. ಇಲ್ಲ... ಇದಕ್ಕೆಲ್ಲ . . . ಪುರುಸೊತ್ತಿಲ್ಲ... ಎನ್ನವವರೇ ನಮ್ಮ ನಡುವೆ ಹೆಚ್ಚಿದ್ದಾರೆ. ಇದು ದೊಡ್ಡವರು ಮಕ್ಕಳನ್ನು ಅಸಡ್ಡೆ ಮಾಡುತ್ತಿರುವುದಕ್ಕೆ ಕೇವಲ ಒಂದು ಉದಾಹರಣೆ ಅಷ್ಟೆ.

ಕಳೆದ ತಿಂಗಳಷ್ಟೇ 'ಮಕ್ಕಳ ದಿನಾಚರಣೆ ಆಚರಿಸಿದ್ದೇವೆ. ಆ ಒಂದು ದಿನವಾದರೂ ಎಲ್ಲರೂ ತಮ್ಮ ದಿನ ನಿತ್ಯದ ಒತ್ತಡಗಳಿಂದ ಮುಕ್ತರಾಗಿ ಮಕ್ಕಳ ಸುಂದರ ಭವಿಷ್ಯದ ಕುರಿತು ಚಿಂತಿಸಲಿ ಎಂಬುದು ನೆಹರೂಜಿಯವರ ಕನಸಿರಬಹುದು.

ಚಿಂತನಶೀಲ ಕವಿ ಖಲೀಲ್ ಗಿಬ್ರಾನರ ಮಕ್ಕಳ ಕುರಿತು ಹಿರಿಯರಿಗೆ ತಮ್ಮ ಕಾವ್ಯವೊಂದರ ಅದ್ಭುತ ಸಾಲುಗಳಿಂದ ಎಚ್ಚರಿಕೆ ನೀಡಿದ್ದಾರೆ.

**ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ.**
**ಜೀವನದ ಸ್ವ ಪ್ರೇಮದ ಪುತ್ರ ಪುತ್ರಿಯರು ಅವರು.**
**ಅವರು ನಿಮ್ಮ ಮೂಲಕ ಬಂದಿದ್ದಾರೆಯೇ ಹೊರತು ನಿಮ್ಮಿಂದಲ್ಲ.**
**ನಿಮ್ಮ ಜತೆ ಇರುವರಾದರೂ ಅವರು ನಿಮಗೆ ಸೇರಿದವರಲ್ಲ.**
**ನಿಮ್ಮ ಪ್ರೀತಿಯನ್ನು ನೀವು ಅವರಿಗೆ ನೀಡಬಹುದು,**
**ಆದರೆ ನಿಮ್ಮ ಆಲೋಚನೆಗಳನ್ನಲ್ಲ.**
**ಏಕೆಂದರೆ ಅವರಿಗೆ ಅವರದ್ದೇ ಸ್ವಂತ ಆಲೋಚನೆಗಳುಂಟು.**
**ಅವರಂತಿರಲು ನೀವು ಪ್ರಯತ್ನಿಸಬಹುದು.**
**ಆದರೆ ಅವರನ್ನು ನಿಮ್ಮಂತೆ ಮಾಡಲು ಪ್ರಯತ್ನಿಸದಿರಿ.**

ಆದರೆ ವಾಸ್ತವದ ಚಿತ್ರಣ ಮಕ್ಕಳ ಕನಸಿಗೆ ಬಣ್ಣ ಹಚ್ಚುವ ಯಾವ ಪ್ರಯತ್ನವೂ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಹಿರಿಯರ ಸಮಸ್ಯೆಗೆ ನೀಡುವ ಕಾಲುಭಾಗದಷ್ಟು ಗಮನ ಕೂಡ ಮಕ್ಕಳ ಸಮಸ್ಯೆಗೆ ನೀಡಲಾಗುತ್ತಿಲ್ಲ. ನಮಗೆ ಇವತ್ತಿಗೂ ಮಕ್ಕಳ ಸ್ವತಂತ್ರ ಲೋಕದ ಬಗ್ಗೆ ಅನುಮಾನವಿದೆ. ಮಕ್ಕಳ ವಿಚಾರದಲ್ಲಿ ಯಾವತ್ತೂ ನಾವು ಬಹಳ ದೊಡ್ಡ ತಪ್ಪೊಂದನ್ನು ಮಾಡುತ್ತಿರುತ್ತೇವೆ. ಆದೆಂದರೆ, ನಾವು ದೊಡ್ಡವರು, ಸರ್ವಜ್ಞರು, ಮಕ್ಕಳು ದಡ್ಡರು, ಅವರಿಗೆ ಏನೂ ಗೊತ್ತಿಲ್ಲ, ಎಲ್ಲವನ್ನೂ ಅವರಿಗೆ ಹೇಳಿಕೊಡುತ್ತಾ ಅವರನ್ನು ಸರಿದಾರಿಗೆ ತರುವವರು ಹಿರಿಯರು. ಬಹುಶಃ ಇದಕ್ಕಿಂತಲೂ ದೊಡ್ಡದಾದ ಸುಳ್ಳು ಈ ಜಗತ್ತಿನಲ್ಲಿ ಮತ್ಯಾವುದೂ ಇಲ್ಲ. ಈ ಜಗತ್ತಿಗೆ ಕಾಲಿರಿಸುವ ಪ್ರತಿಯೊಂದು ಮಗುವೂ ಒಂದಲ್ಲಾ ಒಂದು ರೀತಿಯಲ್ಲಿ ಮೇಧಾವಿಗಳಾಗಿರುತ್ತದೆ. ಬುದ್ಧಿವಂತಿಕೆಯಲ್ಲೂ ಅವರು ದೊಡ್ಡವರನ್ನು ಹಿಂದಿಕ್ಕುತ್ತಾರೆ. ಎಷ್ಟೋ ಸಾರಿ ಹಿರಿಯರಿಗೆ ಹೊಳೆಯಲಾರದ್ದು ಎಳೆಯರಿಗೆ ಹೊಳೆದ ಉದಾಹರಣೆಗಳಿವೆ. ಅದಕ್ಕೆ ಬೆರಗಾಗಿದ್ದೇವೆ. ಅನೇಕ ಸಾರಿ ಮಕ್ಕಳಿಂದಲೇ ಅನೇಕ ವಿಚಾರಗಳನ್ನು ಕಲಿಯುತ್ತೇವೆ.

ವಿಪರ್ಯಾಸವೆಂದರೆ, ಯಾರೂ ಮಗುವನ್ನೂ ಒಂದು ಪುಟ್ಟವ್ಯಕ್ತಿ ಎಂದು ಭಾವಿಸುತ್ತಿಲ್ಲ. ಅವರಲ್ಲೂ ವಿಚಾರಗಳಿವೆ, ಭಾವನೆಗಳಿವೆ ಮತ್ತು ಅವರವೇ ಆದ ಕಲ್ಪನೆಗಳು ಇವೆ ಎಂದು ನಂಬಲು ನಾವು ಸಿದ್ಧರಿಲ್ಲ. ಮಗು ತನ್ನ ಸುತ್ತ ಮುತ್ತಲಿನ



## 'ಸಚ್ಚಾರಿತ್ರ್ಯ ನಿರ್ಮಾಣವೇ ಶಿಕ್ಷಣದ ಗುರಿಯಾಗಲಿ'

**"ಮಗುವಿನಲ್ಲಿ ಸಂತೋಷ ಹಾಗೂ ಶೀಲ ವೃದ್ಧಿಸುವಂತೆ ಮಾಡುವುದೇ ಶಿಕ್ಷಣ"**

ಅರವಿಂದ ಘೋಷ

ಈ ಮೇಲಿನ ಎರಡೂ ಉಕ್ತಿಗಳು, ಶಿಕ್ಷಣದ ಧ್ಯೇಯೋದ್ದೇಶಗಳಲ್ಲಿ ಒಂದಾದ ಚಾರಿತ್ರ್ಯ ನಿರ್ಮಾಣದ ಗುರಿಯನ್ನು ಎತ್ತಿ ಹಿಡಿಯುತ್ತವೆ. ಹುಡುಕಿದರೆ ಎಂದೂ ಕೊನೆಯಾಗದ ಹಾಗೆ, ಹಲವು ಮಹಾನ್ ವ್ಯಕ್ತಿಗಳ ಉಕ್ತಿಗಳು ಚಾರಿತ್ರ್ಯ ನಿರ್ಮಾಣದ ಮಹತ್ವವನ್ನು ಅಂದಿಗೂ ಮತ್ತು ಇಂದಿನವರೆಗೂ ಸಾರುತ್ತಿವೆ. ಈ ಉಕ್ತಿಗಳಿಗೆ ಪ್ರಾಮುಖ್ಯತೆ ಬರುವುದು ಪುಸ್ತಕದ ಆಯಾ ಪುಟಗಳಿಗೆ ಸೀಮಿತವಾಗಿರದೇ ನಿಜ ಜೀವನದ ಕಣ ಕಣದಲ್ಲಿ ಸೇರಿ, ಪ್ರತಿ ಹೆಜ್ಜೆಗೂ ಮಾರ್ಗದರ್ಶನವಾದಾಗ ಮಾತ್ರ.

ಹಲವಾರು ಶಿಕ್ಷಣ ತಜ್ಞರ ಜೀವನ ಚರಿತ್ರೆಗಳನ್ನು ಓದಿದಾಗ, ಸನ್ಯಾಸ, ಯೋಗ ಮತ್ತು ಧ್ಯಾನಗಳು ಉತ್ತಮ ಶಿಕ್ಷಣವನ್ನು ನೀಡುವಲ್ಲಿ ಸಹಕಾರಿ ಎಂಬ ಅಂಶ ತಿಳಿಯುತ್ತದೆ. ಯೋಗ ಮತ್ತು ಧ್ಯಾನಕ್ಕೆ ವಯಸ್ಸಿನ ಅಡೆತಡೆಯಿಲ್ಲ. ಏಕೆಂದರೆ ಜೀವನದ ಅಂತಿಮಗಳಿಗೆವರೆಗೂ ಇವನ್ನು ಪಾಲಿಸಬಹುದು. ಆದರೆ ಈ ಎಲ್ಲದರ ಮಧ್ಯೆ ಮುಖ್ಯವಾದದ್ದು, ಚಾರಿತ್ರ್ಯ ನಿರ್ಮಾಣ. ಉತ್ತಮವಾದ ಈ ಕಚ್ಚಾ ವಸ್ತುಗಳ ಆಧಾರದ ಮೇಲೆ ಸಚ್ಚಾರಿತ್ರ್ಯ ವನ್ನು ಹೊಂದಿ, ಜೀವನ ಪೂರ್ತಿ ಪಾಲಿಸಿ, ನಮ್ಮ ಮುಂದಿನ ಪೀಳಿಗೆಗಳಿಗೂ ಹಸ್ತಾಂತರಿಸಬೇಕು.

ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೆ ನಮಗೆ ಸಿಗುವ ಇಂದಿನ ವಿದ್ಯಾರ್ಥಿಗಳನ್ನು ನೋಡಿದರೆ ಚಾರಿತ್ರ್ಯ ನಿರ್ಮಾಣದ ಅವಶ್ಯಕತೆ ತುಂಬಾ ಇದೆಯೆನಿಸುತ್ತದೆ. ಸುತ್ತಮುತ್ತಲಿನ ಪರಿಸರವೋ, ಸಂಪರ್ಕಕ್ಕೆ ಬಂದ ಜನರೋ ಅಥವಾ ಅತಿಯಾಗಿ ಪರಿಣಾಮ ಬೀರುವ ದೃಶ್ಯ ಮಾಧ್ಯಮಗಳೋ ಗೊತ್ತಿಲ್ಲ, ಅಪೇಕ್ಷಿಸುವ ಚಾರಿತ್ರ್ಯ ದ ಕೊರತೆ ಕಂಡು ,ಅನಪೇಕ್ಷಿತ ದುರ್ನಡತೆಯೇ ಹೆಚ್ಚಾಗಿ ಕಂಡು ಬರುತ್ತಿದೆ. ಬೋಧಕಿಯಾಗಿ ವಿದ್ಯಾರ್ಥಿಗಳಿಗೆ ಮೇಲಿಂದ ಮೇಲೆ ಹೇಳುವುದೆನೆಂದರೆ, ಭಾಷೆಯ ಕಲಿಯುವಿಕೆ ಕೇವಲ LSRWU( listening, speaking, reading, writing skills) ಸೀಮಿತವಾಗಿರದೇ, ಪಾಠ-ಪ್ರವಚನಗಳಲ್ಲಿ ಬರುವ ಹಿತೋಪದೇಶಗಳೆಡೆಗೆ ಗಮನವಹಿಸಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇಂಗ್ಲಿಷ್ ಭಾಷೆ ಬರದಿದ್ದರೂ ಜೀವನ ಸಾಧ್ಯ ಆದರೆ ಚಾರಿತ್ರ್ಯ ಹೀನ ಬದುಕು ಖಂಡನೀಯ. ಓದು ಬರಹ ಬಾರದ ಎಷ್ಟೋ ಜನರು ತಮ್ಮ ಸಚ್ಚಾರಿತ್ರ್ಯದಿಂದ ಜನ ಮನವನ್ನು ಗೆದ್ದಿದ್ದಾರೆ, ಅವರು ಯಾವ ಶಾಲೆಯ ವಿದ್ಯಾರ್ಥಿಗಳೂ ಆಗಿರಲಿಲ್ಲ. ಸಜ್ಜನರ ಸಂಗ ಹೆಜ್ಜೇನು ಸವಿದಂತೆ ,ಅವರ ಹಿತ ಸಜ್ಜನರ ಗುಂಪು, ಹಿರಿಯರ ಹಿತನುಡಿಗಳು ಹಾಗೂ ಅರಿವೇ ಗುರುವೆಂಬಂತೆ, ಮನಸ್ಸಿನ ಉಪದೇಶಗಳನ್ನು ಪಾಲಿಸಿ, ಅನಕ್ಷರಸ್ಥರಿದ್ದರೂ, ಅಕ್ಷರಸ್ಥರಿಗೆ ದಾರಿ ತೋರಿಸುತ್ತಲಿದ್ದಾರೆ. ಸಚ್ಚಾರಿತ್ರ್ಯದಿಂದಲೇ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿ ಜನರನ್ನು ಗೆದ್ದವರಿದ್ದಾರೆ..

"Go on doing good,thinking holy thoughts continuously, that is the only way to suppress base impressions. character is repeated habits and repeated habits alone can reform character"- Swami Vivekanand.

-ಅಂದರೆ ಒಳ್ಳೆಯದನ್ನು ಮಾಡುವುದು ಮತ್ತು ಒಳ್ಳೆಯ ವಿಚಾರಗಳನ್ನು ಸತತವಾಗಿ ಮನಗಾಣುವುದು, ಮೇಲಾಗಿ ಚಾರಿತ್ರ್ಯ ಎನ್ನುವುದು ನಾವು ಮೇಲಿಂದ ಮೇಲೆ ಅನುಸರಿಸುವ ಒಳ್ಳೆಯ ಹವ್ಯಾಸಗಳೇ ಆಗಿವೆ. ಈ ಒಳ್ಳೆಯ ಹವ್ಯಾಸಗಳು ಯಾವ ಮಟ್ಟಿಗೆ ಬೆಳವಣಿಗೆಯಾಗಬೇಕೆಂದರೆ, ಖುದ್ದು ನಾವೇ ಬೇಡವೆಂದರೂ, ನಮ್ಮಿಂದ ಒಳ್ಳೆಯದೇ ನಡೆಯಬೇಕು. ಯಾವುದು ಸರಿ, ಯಾವುದು ತಪ್ಪು ಎಂಬ ಕನಿಷ್ಠ ಅರಿವನ್ನು ಕೊಡುವಲ್ಲಿ, ಭಗವಂತ ಕಿಂಚಿತ್ತೂ ತಾರತಮ್ಯ ತೋರಿಲ್ಲ ಅಂದಾಗ ಒಳ್ಳೆಯದನ್ನು ಮನಗಾಣುವಲ್ಲಿ ಹಿಂಜರಿಕೆ ಏಕೆ? ಇದನ್ನೇ ನಾವೆಲ್ಲ ಹಾಗು ನಮ್ಮ ಶಿಕ್ಷಣ ಇಂದಿನ ಮಕ್ಕಳಿಗೆ ಕೊಡಬೇಕಾಗಿದೆ.ಒಳ್ಳೆಯದು ಎನ್ನುವದೇ ಚಾರಿತ್ರ್ಯ ನಿರ್ಮಾಣದ ಅಡಿಪಾಯವಾಗಿದೆ. ಇದೇ ಸಚ್ಚಾರಿತ್ರ್ಯರನ್ನು ಗುರುತಿಸುವಂತೆ ಮಾಡುತ್ತದೆ.

**-ಮಾಲಾ ಮ ಅಕ್ಕಿಶೆಟ್ಟಿ**

ಪರಿಸರ ಅವಲೋಕಿಸುತ್ತಾ, ಅದಕ್ಕೆ ಪೂರಕವಾಗಿ ತನ್ನದೇ ಆದ ಅಭಿಪ್ರಾಯದ ಮುಖಾಂತರ ಸ್ಪಂದಿಸುವ ಸಾಮರ್ಥ್ಯವನ್ನು ನಾವು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಅವರೊಳಗೂ ನೋವು, ಸಮಸ್ಯೆ, ದುಗುಡ, ತಳಮಳಗಳಿವೆ ಎಂಬುದರೆಡೆಗೆ ನಮಗೆ ಜಾಣ ಕುರುಡು ಮತ್ತು ಜಾಣ ಕಿವುಡು. ನಾವೂ ನಮ್ಮ ಭಾವನೆ, ಅಭಿಪ್ರಾಯಗಳನ್ನು, ನಮಗಿಷ್ಟವೆನಿಸಿದ್ದನ್ನು ಮಕ್ಕಳ ಮೇಲೆ ಸದಾ ಹೇರುವುದಕ್ಕೆ ಹೆಚ್ಚು ಆದ್ಯತೆ ನೀಡುತ್ತಿದ್ದೇವೆ.

ಮಕ್ಕಳಿಗೆ ಏನೂ ತಿಳಿದಿಲ್ಲ ಎಂಬ ನಿರ್ಣಯದೊಂದಿಗೆ ನಮ್ಮ ಶಿಕ್ಷಣದ ಬಹುತೇಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಅದರಲ್ಲೂ ವಿಶೇಷವೆಂದರೆ ಮಕ್ಕಳ ಶಿಕ್ಷಣದ ಎಲ್ಲವೂ ಹಿರಿಯರ ನೆಲೆಯಿಂದಲೇ ರೂಪಿಸಲ್ಪಡುತ್ತವೆ. ಅಲ್ಲಿ ಸಣ್ಣವರ ಆಲೋಚನೆಗಳಿಗಿಂತ ಹಿರಿಯರ ಆಲೋಚನೆಗಳು, ಅಗತ್ಯಗಳು, ಆಶೆಗಳು, ಆಶೋತ್ತರಗಳು ಮಹತ್ವ ಪಡೆಯುತ್ತವೆ. ಮಕ್ಕಳ ಆಸಕ್ತಿ, ಅಭಿರುಚಿ, ಮನೋವಿಜ್ಞಾನವು ಮೂಲೆಗುಂಪಾಗಿರುತ್ತದೆ. ಚೈತನ್ಯದ ಚಿಲುಮೆಗಳಾಗಿರುವ ಮಕ್ಕಳು ಯಾವಾಗಲೂ ಒಂದೆಡೆ ಸುಮ್ಮನೆ ಕುಳಿತುಕೊಳ್ಳವ ಸ್ವಭಾವದವರಲ್ಲ. ಸದಾ ಅವರು ಒಂದು ಪ್ರಕ್ರಿಯೆ, ಚಟುವಟಿಕೆ, ಆಟಗಳಲ್ಲಿರಲು ಬಯಸುತ್ತಾರೆ. ಹಾಗಾಗಿ ಅವರ ಕಲಿಕೆ ಅಂತವುಗಳ ಮುಖಾಂತರವೇ ನಡೆಯುವುದು ಸೂಕ್ತ. ಅದನ್ನು ಗಮನಿಸಿ ಮಕ್ಕಳ ಪ್ರೀತಿಯ ಅಜ್ಜ 'ಕಾರಂತ'ರು 'ಓದುವ ಆಟ' ಎಂಬ ಪುಸ್ತಕದ

ಮುಖಾಂತರ ಹೊಸ ಹಾದಿ ತುಳಿದರು. ಆದರೆ ಅದನ್ನು ನಾವು ಸ್ವೀಕರಿಸಿದ ಪರಿ ?.

ಮಕ್ಕಳ ಬಾಲ್ಯ ಮತ್ತು ಬಾಲ್ಯದ ಸುತ್ತಲಿನ ಸುಂದರ ಕನಸುಗಳು ಕಾಣೆಯಾಗುತ್ತಿರುವುದನ್ನು ನಾವುಗಳು ಗಮನಿಸುತ್ತಿಲ್ಲ. ಶಾಲೆಗಳಲ್ಲೂ ಮಕ್ಕಳಿಗೆ ಮುಕ್ತ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತಿಲ್ಲ. ಮಗು ಹುಟ್ಟಿದಂದಿನಿಂದಲೇ ಸುತ್ತಲ ಪರಿಸರದಿಂದ ಕಲಿಯಲಾರಂಭಿಸುತ್ತದೆ. ನೋಡುವ, ಕೇಳುವ ಮತ್ತು ಮಾಡುವ ತಂತ್ರಗಳ ಮುಖಾಂತರ ಬದುಕಿಗೆ ಅಗತ್ಯವಾದ ಕೌಶಲಕ್ಕೆ ಶಾಲೆಯ ಒಂದು ಖಚಿತತೆ ನೀಡಬೇಕು. ಆದರೆ ಅತಿ ಹೆಚ್ಚು ಪಠ್ಯ ಪುಸ್ತಕಗಳು, ಹೆಚ್ಚಿನ ಪಠ್ಯ ಕ್ರಮ ಮತ್ತು ತಿಂಗಳಿಗೊಂದು ಪರೀಕ್ಷೆ ನಡೆಸುವುದೇ ಶಾಲೆಗಳ ಗುಣಮಟ್ಟದ ಮಾನದಂಡವಾಗಿರುತ್ತದೆ. ಯೂನಿಟ್ ಮತ್ತು ಮಾಸಿಕ ಪರೀಕ್ಷೆಗಳಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನಾಗಲೀ, ಜ್ಞಾನದ ಮಟ್ಟವನ್ನಾಗಲೀ ಪರೀಕ್ಷಿಸುವುದಿಲ್ಲ. ಬದಲಾಗಿ ಇಂತಿಷ್ಟು ಪಾಠಗಳಿಂದ ಇಂತಹುದೇ ಪ್ರಶ್ನೆಗಳನ್ನು ನೀಡುವುದಾಗಿ ಮುಂಚಿತವಾಗಿಯೇ ತಿಳಿಸಿ, ಬಾಯಿಪಾಠ ಮಾಡುವ ಪರಂಪರೆಗೆ ಒತ್ತು ನೀಡಲಾಗುತ್ತಿದೆ. ರಿಯಾಲಿಟಿ ಷೋಗಳಿಗಾಗಿ ಹಾಡು, ನೃತ್ಯ ಕಲಿಯುವಂತೆ ಮಕ್ಕಳು ಈ ಪರೀಕ್ಷೆಗಳಿಗಾಗಿ ಸಿದ್ಧತೆ ನಡೆಸುತ್ತಾರೆ. ಇಲ್ಲಿ ಮಕ್ಕಳ ಸೃಜನಶೀಲತೆ ನಾಶವಾಗುತ್ತಿರುವುದು ಯಾರ ಗಮನಕ್ಕೂ ಬರುತ್ತಿಲ್ಲ.

ಪ್ರಸ್ತುತ ನಮ್ಮ ಶಿಕ್ಷಣ ವ್ಯವಸ್ಥೆಯು ನೆನಪಿನ ಶಕ್ತಿ, ಪಠ್ಯದ ವಿಷಯ ಮತ್ತು ಅಂಕಗಳಿಗೆ ಮಾತ್ರ ಆದ್ಯತೆ ನೀಡುತ್ತಿದೆ. ಅದರಲ್ಲಿ ಮಗುವಿಗೆ ಅಕ್ಷರಗಳನ್ನು ನೆನಪಿಡುವುದು ಸುಲಭವಲ್ಲ. ಅದರಲ್ಲೂ ಅರ್ಥವಾಗದ ವಿಷಯಗಳನ್ನು ನೆನಪಿಡುವುದು ಮಗುವಿಗೆ ಆಸಕ್ತಿಯ ವಿಷಯವೂ ಅಲ್ಲ. ಮಗುವಿಗೆ ಒಂದು ವಿಷಯ ನಿಧಾನವಾಗಿ ಸ್ಪಷ್ಟವಾಗುತ್ತದೆ. ಹೇಳಿದ್ದನ್ನು ನೆನಪಿನಲ್ಲಿಡಬೇಕು. ಅದನ್ನೇ ಪರೀಕ್ಷೆಯಲ್ಲಿ ಹೇಳಬೇಕು, ಇಲ್ಲವೇ ಬರೆಯಬೇಕು. ಅಂದರೆ ಹೆಚ್ಚು ಅಂಕ ಬರುತ್ತವೆ. ಆಗ ಅಮ್ಮ ಅಪ್ಪ ಸಂತೋಷ ಪಡುತ್ತಾರೆ. ತನಗೆ ಪೆಟ್ಟು ಬೀಳುವುದಿಲ್ಲ. ಹಾಗಾಗಿ ನಮ್ಮ ಮಕ್ಕಳು ಕುತೂಹಲ ಮತ್ತು ಸಂಶೋಧನೆಗಳತ್ತ ತೊಡಗಿಕೊಳ್ಳದೇ ಅರ್ಥವಾಗದಿದ್ದರೂ ವಿಷಯಗಳನ್ನು ನೆನಪಿನಲ್ಲಿ ತುರುಕಿಕೊಳ್ಳಲು ಪ್ರಾರಂಭಿಸುತ್ತಾರೆ. ದೊಡ್ಡವರ ಮೆಚ್ಚುಗೆ ಸಿಕ್ಕಂತೆಲ್ಲ ಹೆಚ್ಚು ಹೆಚ್ಚು ಅಂಕ ಪಡೆಯುವ ಹವ್ಯಾಸದಲ್ಲಿ ಬೀಳುತ್ತಾರೆ. ಬರುಬರುತ್ತಾ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆಯುವುದೇ ಜೀವನದ ಸಾಧನೆ ಎಂಬ ಭ್ರಮೆಯಲ್ಲಿ ಬದುಕುತ್ತಾರೆ.

ಮಕ್ಕಳು ಎಷ್ಟು ಕಲಿತರೂ ಸಾಲದು. ಶಾಲೆಯಲ್ಲಿ ನೂರಕ್ಕೆ ನೂರು ಅಂಕಗಳಿಸಬೇಕು. ಅದಕ್ಕಾಗಿ ಶಾಲೆಗೆ ಹೋಗುವ ಮುನ್ನ, ಶಾಲೆಯಿಂದ ಬಂದ ಕೂಡಲೇ ಟ್ಯೂಷನ್ ಅನಿವಾರ್ಯ. ಮಕ್ಕಳಲ್ಲಿ ಇಷ್ಟು ಸಾಮರ್ಥ್ಯವಿದೆಯೇ, ಕಲಿಕಾ ಶಕ್ತಿ ಇದೆಯೇ ಎಂದು ಪರಿಶೀಲಿಸುವ ಗೋಜಿಗೇ ಹೋಗದೆ ಪೋಷಕರು ತಮ್ಮ ಮಕ್ಕಳು ಎಲ್ಲ ಕ್ಷೇತ್ರಗಳಲ್ಲೂ ಸಾಧಿಸಬೇಕು ಎಂದು ಅಪೇಕ್ಷಿಸುವುದು ಸಹಜ, ಸ್ವಾಭಾವಿಕ. ಆದರೆ ಮಕ್ಕಳು ಏನೇ ಕಲಿತರೂ ಅವರ ಬಾಲ್ಯ ಜೀವನದ ಸೊಗಡನ್ನು ಕಳೆದುಕೊಳ್ಳದೆ ಕಲಿಯುವ ಅಗತ್ಯತೆಯನ್ನೂ ಪೋಷಕರು ಮನಗಾಣಬೇಕು. ವಾಸ್ತವದಲ್ಲಿ ಹಾಗಾಗುತ್ತಿಲ್ಲ. ಟಿವಿ ವಾಹಿನಿಗಳಲ್ಲಿ ಬರುವ ರಿಯಾಲಿಟಿ ಷೋಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಸಂಗೀತ, ನೃತ್ಯ, ಹಾಡುಗಾರಿಕೆ ಹೀಗೆ ಮಕ್ಕಳು ಟಿವಿ ಷೋಗಳಲ್ಲಿ ಪ್ರಶಸ್ತಿ ಗಳಿಸಲು ಸಿದ್ಧಪಡಿಸುವುದೂ ಪೋಷಕರ



ಆದ್ಯತೆಯಾಗಿಬಿಡುತ್ತದೆ. ಶಾಲೆಯಿಂದ ಬಂದ ಮಕ್ಕಳಿಗೆ ಸ್ವಾಭಾವಿಕವಾಗಿ ಅತ್ಯಗತ್ಯವಾದ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲೂ ಅವಕಾಶ ನೀಡದಿರುವುದು ಇಂದಿನ ಸಾಮಾನ್ಯ ಲಕ್ಷಣ. ಟ್ಯೂಷನ್ನಿಂದ ಬಂದ ಕೂಡಲೇ ಹೋಂ ವರ್ಕ್, ನಂತರ ಓದು, ಬರಹ. ಮಧ್ಯೆ ಮಧ್ಯೆ ಟಿವಿ ನೋಡುತ್ತಾ ನಂತರ ಹಾಸಿಗೆಯತ್ತ. . ಎಂಬಂತೆ ಮಕ್ಕಳ ನಿತ್ಯ ಜೀವನ ಸಂಕೀರ್ಣವಾಗಿದೆ.

ವಿದ್ಯಾರ್ಥಿಯು ಶಾಲೆಯಲ್ಲಿ ಕಲಿಯುವ ವರ್ಷಗಳು ಬದುಕಿನುದ್ದಕ್ಕೂ ಆನಂದದ ನೆನಪಾಗಿ ಉಳಿಯಬೇಕು. ಇದು ಸಾಧ್ಯವಾಗಬೇಕಾದರೆ ಸ್ಪರ್ಧೆ ಇರಬಾರದು, ಅಧಿಕಾರ ಕೇಂದ್ರ ಇರಬಾರದು, ಶಿಕ್ಷಣ ಮತ್ತು ಕಲಿಕೆಗಳು ಅಖಂಡ ಪ್ರಕ್ರಿಯೆಗಳಾಗಬೇಕು. ಶಿಕ್ಷಣ ಪುಸ್ತಕಗಳಿಂದಷ್ಟೆ ಅಲ್ಲ, ನೆನಪಿನಂಗಳದಿಂದಷ್ಟೆ ಅಲ್ಲ, ನೋಡುವುದರಿಂದ, ಕೇಳುವುದರಿಂದ, ಪುಸ್ತಕಗಳು ಏನು ಹೇಳುತ್ತವೆ ಅವುಗಳಲ್ಲಿ ಸತ್ಯಾಂಶವೆಷ್ಟು, ಮಿಥ್ಯಾಂಶವೆಷ್ಟು ಎಂದೆಲ್ಲಾ ವಿವೇಚಿಸುವುದರಿಂದಲೂ ದೊರಕುತ್ತದೆ. ಶಾಲೆಯು ಮಕ್ಕಳ ದೃಷ್ಟಿಯಲ್ಲಿ ಹಿಂಸಾಲಯವಾಗಬಾರದು. ಹೂವಿನಂತ ಮಕ್ಕಳನ್ನು ಬಲವಂತದಿಂದ ಅರಳಿಸಬಾರದು. ಅವರು ಸಹಜವಾಗಿ ಅರಳಲು ಅವಕಾಶ ಕೊಡಬೇಕು. ಕಲಿಕೆ ಎನ್ನುವುದು ಅವರಿಗೆ ಆನಂದದಾಯಕ ಚಟುವಟಿಕೆಯಾಗಬೇಕು. ಅವರ ಮೆದುಳು ನಿರರ್ಥಕ, ನಿರುಪಯುಕ್ತ ಮಾಹಿತಿಗಳನ್ನು ಗುಡ್ಡೆ ಹಾಕುವ ಕಸದ ಬುಟ್ಟಿಯಲ್ಲ. ಯಾವುದು ಮಕ್ಕಳಿಗೆ ರುಚಿಸುವುದಿಲ್ಲವೋ, ಉಪಯುಕ್ತ ಎನಿಸುವುದಿಲ್ಲವೋ ಅವುಗಳ ಬಗ್ಗೆ ಅವರಿಗೆ ಆಸಕ್ತಿ ಇರುವುದಿಲ್ಲ. ಎಲ್ಲಿ ಆಸಕ್ತಿ ಇರುವುದಿಲ್ಲವೋ ಅಲ್ಲಿ ಕಲಿಕೆ ನಡೆಯುವುದಿಲ್ಲ ಎಂಬ ಅಂಶಗಳನ್ನು ಇನ್ನಾದರೂ ನಾವು ಅರ್ಥಮಾಡಿಕೊಳ್ಳಬೇಕಿದೆ.

ತಮ್ಮದೇ ಆದ ಲೋಕದಲ್ಲಿ ವಿಹರಿಸಲು ಇಚ್ಛಿಸುವ ಮಕ್ಕಳ ಬಾಲ್ಯದ ರೆಕ್ಕೆ ಪುಕ್ಕಗಳನ್ನು ಹಿರಿಯರು ತಮ್ಮ ಸ್ವಾರ್ಥ, ತಮ್ಮ ಘನತೆ, ಗೌರವ ಮತ್ತು ಸ್ಥಾನಮಾನಗಳಿಗಾಗಿ ಬಲಿ ನೀಡುತ್ತಿರುವುದು ದುರಂತ. ಇಂದಿನ ಪೋಷಕರು ತಮ್ಮ ಬಾಲ್ಯ ಜೀವನವನ್ನು ಒಮ್ಮೆ ನೆನಪಿಸಿಕೊಂಡರೆ ತಮ್ಮ ಮಕ್ಕಳ ಮೇಲೆ ನಡೆಸುತ್ತಿರುವ ದೌರ್ಜನ್ಯವನ್ನು ಮನಗಾಣುವುದು ಕಷ್ಟವೇನಲ್ಲ. ಆದರೆ ಕಾಲ ಬದಲಾಗಿದೆ ಎನ್ನುತ್ತಾ ತಮ್ಮನ್ನು ತಾವೇ ಬದಲಾವಣೆಯತ್ತ ಸಾಗಿಸುತ್ತಿದ್ದು ಬದಲಾವಣೆಯ ಹೊರೆಯನ್ನು ತಮ್ಮ ಕಂದಮ್ಮಗಳ ಮೇಲೆ ಹೊರೆಸುತ್ತಿರುವ ಪೋಷಕರು, ಶಾಲೆಗಳು ಮತ್ತು ಸಮಾಜ, ಈಗಲಾದರೂ ಆತ್ಮಾವಲೋಕನ ಮಾಡಿಕೊಳ್ಳದೇ ಹೋದಲ್ಲಿ ಮುಂದಿನ ದಿನಗಳು ಮತ್ತಷ್ಟು ಕಠಿಣವಾಗುವುದರಲ್ಲಿ ಅನುಮಾನವಿಲ್ಲ.





# ತುಟ್ಟಿಯಾಗದ ಬುಟ್ಟಿಯ ಬದುಕು

ಪ. ರಾಮಕೃಷ್ಣ ಶಾಸ್ತ್ರಿ



ಇಲ್ಲಿ ಕೊರಚರು ಅನಾದಿಯಿಂದಲೂ ಬುಟ್ಟಿ ಹೆಣೆಯುವ ಕುಲ ವೃತ್ತಿ ಮಾಡುತ್ತ ಬದುಕು ಸವೆಸಿದವರು. ನಿಸರ್ಗ ಕೊಡುವ ಬೆಟ್ಟದ ಬಿದಿರು ಗಳ ತಂದು ಕತ್ತರಿಸಿ ಸೀಳಿ ಬುಟ್ಟಿ ಹೆಣೆದು ಮನೆ ಮನೆಗೆ ಹೊತ್ತು ಮಾರುವ ಸಂಪ್ರದಾಯಿಕ ಕಸುಬು ಕೈ ಹಿಡಿದಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅರಣ್ಯ ಇಲಾಖೆಯ ಬಿಗು ನೀತಿಯಿಂದಾಗಿ ಬಿದಿರಿನ ಗಳಕ್ಕೆ ಕೈಯಿಡಲು ಸಾಧ್ಯವಿರಲಿಲ್ಲ. ಸಾಗಿ ಬಂದ ಬದುಕಿಗೆ ಕಾಯಿದೆಯ ಕಟ್ಟುಪಾಡು ಅಡ್ಡಿಯಾಯಿತು. ಮೊದಲು ಹಣ ಕೊಡದೆ ಬಿದಿರು ಕಡಿಯಲು ಅನುಮತಿ ಸಿಗಲಿಲ್ಲ. ದುಡಿಮೆಯ ಹಣದಲ್ಲಿ ಉಳಿತಾಯವಿರಲಿಲ್ಲ. ಖಾಸಗಿ ವ್ಯಾಪಾರಿಗಳಿಂದ ಹಣ ಸಾಲ ತಂದರೆ ಹೆಣೆದ ಬುಟ್ಟಿಯ ದುಡ್ಡು ಬಡ್ಡಿಗೂ ಸಾಲುತ್ತಿರಲಿಲ್ಲ. ಈ





ಪರಿಸ್ಥಿತಿಯಿಂದಾಗಿ ಯುವ ಪೀಳಿಗೆ ವಂಶದ ವೃತ್ತಿಯಿಂದ ಹಿಂದೆ ಸರಿದು ದೂರದ ಪಟ್ಟಣಕ್ಕೆ ಬೇರೆ ಉದ್ಯೋಗ ಅರಸುತ್ತ ಹೋಗತೊಡಗಿತು. ಇದರಿಂದ ಕೊರಚರಿಗಷ್ಟೇ ತೊಂದರೆಯಾದುದಲ್ಲ. ರೈತರಿಗೆ ಅಡಕೆ ಕೊಯ್ಲಿನ ಸಮಯದಲ್ಲಿ ಹಾಗೆಯೇ ಜೋಳದ ಕೊಯ್ಲು ನಡೆಯುವಾಗ ಫೈಬರ್ ಬುಟ್ಟಿ ಸರಿ ಹೊಂದುತ್ತಿರಲಿಲ್ಲ. ಬಿದಿರಿನ ಬುಟ್ಟಿಯೇ ಬೇಕಾಗುತ್ತಿತ್ತು. ಆದರೆ ಅದು ಲಭಿಸುವುದೇ ಕಷ್ಟವಾಯಿತು.

ಇಂಥ ಸಮಯದಲ್ಲಿ ನಮ್ಮ ಪಾಲಿಗೆ ಹೊಸ ಬೆಳಕು ಮೂಡಿಸಿದ್ದು ಸ್ವಸಹಾಯ ಸಂಘದ ನೆರವು ಎಂದು ಹೇಳುತ್ತಾರೆ ಕೊರಚರ ಕುಲದ ದಿಟ್ಟ ಮಹಿಳೆ ಲಕ್ಷ್ಮಮ್ಮ. ಅವರು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಹೆಬ್ಬಲಿಗೆರೆಯವರು. ತಮ್ಮ ಕುಲದ ಎಂಭತ್ತು ಮಂದಿ ಮಹಿಳೆಯರನ್ನು ಒಗ್ಗೂಡಿಸಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಏಳು ಸ್ವಸಹಾಯ ಸಂಘಗಳನ್ನು ಕಟ್ಟಿ ಹಣ ಉಳಿತಾಯ ಮಾಡಿದರು. ಎಲ್ಲರೂ ಒಂದಾಗಿ ಸಂಘದಿಂದ ಸಾಲ ಪಡೆದು ಅರಣ್ಯ ಇಲಾಖೆಯವರಿಂದ ಬಿದಿರನ್ನು ಹಣ ಕೊಟ್ಟು ಖರೀದಿ ಮಾಡಿ ತಂದರು. ಸುಮಾರು ಮೂವತ್ತು ಅಡಿ ಉದ್ದದ ಗಳಕ್ಕೆ ತೊಂಭತ್ತು ರೂಪಾಯಿ ಬೆಲೆ. ಆರು ಗಳಗಳ ಒಂದು ಸೆಟ್‌ಗೆ ಐನೂರು ರೂಪಾಯಿ.

ಗಳವನ್ನು ಸೀಳಿ ನಾಜೂಕು ಮಾಡಿ ಕೊಡಲು ಒಬ್ಬ ಸಹಾಯಕರು ಬೇಕು. ಇನ್ನೊಬ್ಬರದು ಹೆಣೆಯುವ ಕಾಯಕ ಆರು ಗಳಗಳಿಂದ ದೊಡ್ಡ ಗಾತ್ರದ ಬುಟ್ಟಿಗಳಾದರೆ ಎಂಟು ಸಿದ್ಧವಾಗುತ್ತದೆ. ಮಧ್ಯಮವಾದರೆ ಹತ್ತರಿಂದ ಹದಿನೈದು. ತೀರ ಚಿಕ್ಕದು ನಲವತ್ತು ಬುಟ್ಟಿಗಳನ್ನು ತಯಾರಿಸಬಹುದು. ಒಟ್ಟು ಎಂಟು ವಿಧದ ಉತ್ಪನ್ನಗಳು ತಯಾರಾಗುತ್ತವೆ. ಬೆಲೆಯೂ ಚಿಕ್ಕದಕ್ಕೆ ಐವತ್ತು ರೂಪಾಯಿ. ದೊಡ್ಡದಕ್ಕೆ ಇನ್ನೂರ ಐವತ್ತು. ಮಧ್ಯ ಗಾತ್ರವಾದರೆ ನೂರ ಐವತ್ತು. ಐನೂರು ರೂಪಾಯಿಯ ಬಿದಿರು ಬಳಕೆಯಾದಾಗ ತರುವ ಹಣ ಅದರ ನಾಲ್ಕು ಪಟ್ಟು. ಹಾಗೆಯೇ ಇಬ್ಬರ ದುಡಿಮೆಯೂ ಇದರ ಹಿಂದೆ ಅಡಗಿದೆ. ಇಡೀ ದಿನ ಶ್ರಮಿಸಿದರೆ ದೊಡ್ಡ ಬುಟ್ಟಿ ಐದಕ್ಕಿಂದ ಹೆಚ್ಚು ತಯಾರಾಗದು. ಸಣ್ಣದಾದರೆ ಹದಿನೈದು ಹೆಣೆಯಬಹುದು ಎನ್ನುತ್ತಾರೆ ಶ್ರಮಜೀವಿ ಲಕ್ಷ್ಮಮ್ಮ.

ಒಟ್ಟಾಗಿ ದುಡಿಯುವ ಎಂಭತ್ತು ಮಹಿಳೆಯರ ಉತ್ಪನ್ನಗಳೂ ಏಕಕಾಲದಲ್ಲಿ ಮಾರುಕಟ್ಟೆಗೆ ಬಂದಾಗ ವ್ಯಾಪಾರಿಗಳು ಅಲ್ಲಿಯೂ ಶೋಷಿಸದೆ ಬಿಡಲಿಲ್ಲ. ಬೇಡಿಕೆ ಕಡಮೆ ಎಂಬ ಕಾರಣವೊಡ್ಡಿ ಕಡಮೆ ದರಕ್ಕೆ ಕೊಳ್ಳಲು ಹಾತೊರೆದರು. ಸಂಘದ ಮಹಿಳೆಯರೆಲ್ಲ ಲಕ್ಷ್ಮಮ್ಮನ ಕಡೆಗೇ ಬೆರಳು ತೋರಿಸಿದರು. 'ನಿಮ್ಮ ಮಾತು ಕೇಳಿ ಹಣ ಸಾಲ ಪಡೆದು ಬಿದಿರು ತಂದೆವು. ಈ ಬೆಲೆಗೆ ಮಾರಿದರೆ ಬಿದರಿಗೆ ಕೊಟ್ಟ ದುಡ್ಡೂ ಇಲ್ಲ. ದುಡಿದವನ ಹೊಟ್ಟೆಗೆ ತಣ್ಣೀರು ಬಟ್ಟೆಯೇ ಗತಿ' ಎಂದರು. ಆಗ ಲಕ್ಷ್ಮಮ್ಮ ಹೆದರಲಿಲ್ಲ. ಸ್ವಸಹಾಯ ಸಂಘದ ಮೂಲಕ ಪಡೆದ ವ್ಯಕ್ತಿತ್ವ ವಿಕಸನದ ತರಬೇತಿ ಅವರನ್ನು ದೃಢಗೊಳಿಸಿತ್ತು. ಎಲ್ಲರೂ ಹೆಣೆದ ಬುಟ್ಟಿಗಳನ್ನು ಲಾರಿಯಲ್ಲಿ ತುಂಬಿಕೊಂಡು ಶಿರಾ. ಮಧುಗಿರಿ ಮೊದಲಾದ ಕಡೆಗಳಿಗೆ ಹೋದಾಗ ಎಷ್ಟಿದ್ದರೂ ತನ್ನಿ ಎಂಬ ಬೇಡಿಕೆಯ ಜೊತೆಗೆ ಉತ್ತಮ ಬೆಲೆಯೂ ಬಂತು. ಅದರೊಂದಿಗೆ ಅಡಕೆ ತೆಗೆಯುವ ದೋಟಿಗೂ ಬೇಡಿಕೆ ಸಿಕ್ಕಿತು. ದಿನದಲ್ಲಿ ಮೂವತ್ತು ಸಾವಿರ ರೂ. ಗಳ ವ್ಯವಹಾರ ನಡೆಯಿತು. ಖರ್ಚು ಕಳೆದು ಕೈಗೆ ಬಂದ ಹಣ ಎಲ್ಲರ ಮೊಗದಲ್ಲಿ ಮಂದಹಾಸ ಮೂಡಿಸಿತು. ದಿನಕ್ಕೆ ಸರಾಸರಿ ಐನೂರು ರೂಪಾಯಿ ಗಳಿಕೆ ಕಂಡದ್ದು ನಮ್ಮ ಜನ್ಮದಲ್ಲೇ ಮೊದಲ ಸಲ ಎನ್ನುತ್ತಾರೆ ಲಕ್ಷ್ಮಮ್ಮ.

ಬುಟ್ಟಿ ಹೆಣೆಯಲು ಮೂರು– ನಾಲ್ಕು ತಿಂಗಳ ವಯಸ್ಸಿನ ಎಳೆಯ ಬಿದಿರೇ ಆಗಬೇಕು. ಬಲಿತರೆ ಹೆಣೆಯಲು ತುಂಬ ಗಟ್ಟಿಯಾಗುತ್ತದೆ. ನಾಜೂಕು ಮಾಡಲು ಸಾಧ್ಯವಿಲ್ಲ. ಆದರೆ ಮಳೆಗಾಲದಲ್ಲಿ ಅರಣ್ಯ ಇಲಾಖೆ ಎಳೆಯ ಬಿದಿರು ಕಡಿಯಲು ಬಿಡುವುದಿಲ್ಲ. ಏನಿದ್ರೂ ಬೇಸಗೆಯಲ್ಲಿ ತಂದು ದಾಸ್ತಾನು ಮಾಡಬೇಕು. ಎಂಭತ್ತು ಮಂದಿಗೆ ಮಳೆಗಾಲವಿಡೀ ದುಡಿಯಲು ಬೇಕಾದಷ್ಟು ಬಿದಿರು ತಂದು ಸಂಗ್ರಹಿಸಿಡಲು ಬೇಕಾದಷ್ಟು ಹಣವನ್ನು ಇವರು ಸ್ವಸಹಾಯ ಸಂಘದಿಂದ ಸಾಲವಾಗಿ ಪಡೆದು ವರ್ಷವಿಡೀ ದುಡಿಮೆಯ ಹಾದಿಯನ್ನು ಸುಗಮಗೊಳಿಸಿದ್ದಾರೆ. ವಾರಕ್ಕೊಂದು ಸಲ ತಯಾರಿಕೆಯನ್ನು ಪೇಟೆಗೆ ಒಯ್ದು ಮಾರಾಟ ಮಾಡಿ ಬಂದ ಹಣದಲ್ಲಿ ಸಾಲದ ಕಂತನ್ನು ಒಪ್ಪವಾಗಿ ಮರು ಪಾವತಿ ಮಾಡುತ್ತಾರೆ. ಖಾಸಗಿ ವ್ಯಕ್ತಿಗಳ ಸಾಲಕ್ಕೆ ಕೊಡುತ್ತಿದ್ದ ಬಡ್ಡಿಯನ್ನು ನೆನೆಸಿದರೆ ಸಂಘದ ಸಾಲದ ಬಡ್ಡಿ ತೀರ ಸರಳವೆನ್ನುವ ಅವರು ಇದಲ್ಲದೆ ಹೋದರೆ ಪರಂಪರೆಯಿಂದ ಬುಟ್ಟಿ ಹೆಣೆಯುವುದರ ಹೊರತು ಬೇರೆ ಕೆಲಸವೇ ತಿಳಿದಿರದ ನಮಗೆ ಬದುಕಲು ದಾರಿಯೇ ಇರಲಿಲ್ಲ. ಈಗ ಗಳಿಸಿದ ಹಣದಲ್ಲಿ ಮನೆಯ ಅನುಕೂಲಗಳನ್ನೆಲ್ಲ ಮಾಡ್ಕೊಳ್ತಾ ಇದ್ದೇವೆ ಎನ್ನುತ್ತಾರೆ ಲಕ್ಷ್ಮಮ್ಮ. ದೂರವಾಣಿ : 8150889290

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050